ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 12 ಬುಧವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 295 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಉದಯಗಿರಿ ಠಾಣೆ ಬಳಿ ಉದ್ವಿಗ್ನ ಪರಿಸ್ಥಿತಿಗೆ ಆರ್‌ಎಸ್‌ಎಸ್, ಬಿಜೆಪಿ ಕಾರಣ

ಹೊರಗಿನಿಂದ ಬಂದ 300 ಆರ್‌ಎಸ್‌ಎಸ್ ಕಾರ್ಯಕರ್ತರಿಂದ ಕಲ್ಲು ತೂರಾಟ: ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ



ಮೈಸೂರಿನ ಉದಯಗಿರಿ ಠಾಣೆ ಬಳಿ ಗದ್ದಲ ಸಂಬಂಧ ದೂರು ನೀಡಲು ಬಂದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರನ್ನು ಪೊಲೀಸರು ತಡೆದ ಸಂದರ್ಭ.

ಮೈಸೂರು, ಫೆ.11(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಶಾಂತಿ ಕದಡಲು ಹೊರಗಿನಿಂದ 300 ಆರ್‌ಎಸ್‌ಎಸ್ ಕಾರ್ಯಕರ್ತರು ಬಂದಿದ್ದು, ಉದಯಗಿರಿ ಠಾಣೆ ಬಳಿ ನಡೆದ ಕಲ್ಲು ತೂರಾಟಕ್ಕೆ ಇವರೇ ಕಾರಣ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಆಕ್ಷೇಪಾರ್ಹ ಪದ ಬಳಸಿ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಉದಯಗಿರಿ ಪೊಲೀಸ್ ಠಾಣೆಗೆ ದೂರು ನೀಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ನೇರ ಕಾರಣಕರ್ತ. ನಿನ್ನೆ ನಡೆದ ಗಲಾಟೆಗೆ ಆರ್‌ಎಸ್‌ಎಸ್ ಮಾತ್ರವಲ್ಲದೆ ಬಿಜೆಪಿ ಕೈವಾಡವೂ ಇದೆ. ಶಾಂತಿ ಕದಡಲು ಹೊರಗಿನಿಂದ ಬಂದ 300 ಆರ್‌ಎಸ್‌ಎಸ್ ಕಾರ್ಯಕರ್ತರು ಕಲ್ಲು ತೂರಿದ್ದಾರೆ ಎಂದು ಆರೋಪಿಸಿದರು.

ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿರುವ ವ್ಯಕ್ತಿ ಪ್ರತಾಪ್ ಸಿಂಹ ಬೆಂಬಲಿಗನಾಗಿದ್ದು, ಈತನನ್ನು ಕೂಡ ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿಯ ಯಾವ ನಾಯಕರಿಗೂ ಉದಯಗಿರಿಗೆ ಬರದಂತೆ ಪೊಲೀಸರು ತಡೆಯಬೇಕು. ಒಂದು ವೇಳೆ ಬಿಜೆಪಿ ನಾಯಕರು ಇಲ್ಲಿಗೆ ಬಂದರೆ ಇಲ್ಲಿನ ಶಾಂತಿ ಮತ್ತಷ್ಟು ಹದಗೆಡುತ್ತದೆ.

> “ಮುಸ್ಲಿಮರು ಈ ದೇಶದ ಮಣ್ಣಿನ ಮಕ್ಕಳು. ಅವರೇನು ಹೊರದೇಶದಿಂದ ಬಂದಿದ್ದಾರಾ. ವೇಷ ಬದಲಾಯಿಸಿಕೊಂಡ ಆರ್‌ಎಸ್‌ಎಸ್ ಕಾರ್ಯಕರ್ತರು ಗುಂಪಿನಲ್ಲಿ ಸೇರಿಕೊಂಡು ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ್ದಾರೆ.
> –ಎಂ.ಲಕ್ಷ್ಮಣ್, ಕೆಪಿಸಿಸಿ ವಕ್ತಾರ

ಪೊಲೀಸ್ ಠಾಣೆಗೆ ದೂರು ನೀಡಲು ಆಗಮಿಸಿದ ಲಕ್ಷ್ಮಣ್ ಅವರಿಗೂ ಪ್ರವೇಶ ನಿರಾಕರಿಸಲಾಯಿತು. ಒಳಗೆ ನೀವು ಹೋಗುವುದರಿಂದ ಶಾಂತಿ ಹದಗೆಡುತ್ತದೆ ಎಂದು ಪೊಲೀಸರು ತಿಳಿಸಿದರು. ಆದರೆ ದೂರು ನೀಡಿ ಬರುತ್ತೇನೆ ಎಂದು ತಿಳಿಸಿದಾಗ ಪೊಲೀಸರು ಸಮ್ಮತಿಸಿದರು.

ಮೈಸೂರಿನ ಉದಯಗಿರಿ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ

ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸಾಕ್ಷಿ


- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ
- ಪೊಲೀಸರ ಮೇಲೆಯೇ ದಾಳಿ ನಡೆಸುವ ಮಟ್ಟಿಗೆ ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ ವಿಷಾದ

ಬೆಂಗಳೂರು, ಫೆ.11(ಕೆಎಂಶಿ)–ಮೈಸೂರಿನ ಉದಯಗಿರಿಯಲ್ಲಿ ನಡೆದಿರುವ ಪುಂಡರ ಗುಂಪಿನ ಅಟ್ಟಹಾಸ, ರಾಜ್ಯದ ಕಾನೂನು ಸುವ್ಯವಸ್ಥೆಯನ್ನೇ ಮೂಲೋತ್ಪಾಟನೆ ಮಾಡುವ ವಿಧ್ವಂಸಕ ಶಕ್ತಿಗಳ ಪ್ರದರ್ಶನವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ವಿಧಾನಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಅಲ್ಪಸಂಖ್ಯಾತರ ಓಲೈಕೆ ರಾಜ್ಯ ಕಾಂಗ್ರೆಸ್ ಸರ್ಕಾರದ ಆದ್ಯತೆ ಎಂಬಂತೆ ನಡೆದುಕೊಳ್ಳುತ್ತಿರುವ ಧೋರಣೆ ಮತೀಯವಾದಿ ಪುಂಡ–ಪೋಕರಿಗಳಿಗೆ ರಹದಾರಿ ಕೊಟ್ಟಂತಾಗಿದೆ. ಕೋಮುವಾದಿ ರಕ್ಕಸ ವರ್ತನೆ ಸಮರ್ಥಿಸುವ ರೀತಿಯಲ್ಲಿ ಸಚಿವ ಕೆ.ಎನ್.ರಾಜಣ್ಣ, ಪೊಲೀಸರ ನೈತಿಕ ಸ್ಥೈರ್ಯ ಕುಗ್ಗಿಸುವ ರೀತಿ ಘಟನೆಯನ್ನು ವ್ಯಾಖ್ಯಾನಿಸಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಎನ್.ಆರ್.ಕ್ಷೇತ್ರದ ಉದಯಗಿರಿ ಠಾಣಾ ವ್ಯಾಪ್ತಿ ಹಿಂದಿನಿಂದಲೂ ಮುಸ್ಲಿಂ ಸಮುದಾಯ ಬಾಹುಳ್ಯ ಪ್ರದೇಶವಾಗಿದ್ದು, ಮತೀಯ ದುಷ್ಕರ್ಮಿಗಳು ನಿರಂತರವಾಗಿ ಕ್ರೌರ್ಯ ಮೆರೆಯುತ್ತಿದ್ದಾರೆ. ಪೊಲೀಸರ ಮೇಲೆ ಹಲ್ಲೆ ನಡೆಸುವಷ್ಟು ಬಲಿಷ್ಠರಾಗಿದ್ದಾರೆ, ಅಲ್ಲದೆ, ಹಿಂದೂ ಕಾರ್ಯಕರ್ತರ ಸರಣಿ ಕೊಲೆಗಳೂ ಈ ವ್ಯಾಪ್ತಿಯಲ್ಲಿ ಹಿಂದೆ ನಡೆದಿವೆ ಎಂದಿದ್ದಾರೆ. ಇಷ್ಟಾಗಿಯೂ ಈ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಯಾವ ಕ್ರಮವನ್ನೂ ಕಾಂಗ್ರೆಸ್ ಸರ್ಕಾರ ಕೈಗೊಂಡಿಲ್ಲ, ಬದಲಾಗಿ ವಿಧ್ವಂಸಕ ಚಟುವಟಿಕೆ ತಾಣವಾಗಿ ಪೋಷಿಸುತ್ತಿದೆ. ಇದರ ಪರಿಣಾಮ ಕ್ಷುಲ್ಲಕ ಕಾರಣಕ್ಕೂ ಕಿಡಿಗೇಡಿಗಳೆಲ್ಲ ಒಟ್ಟುಗೂಡಿ ದಂಗೆ ಎದ್ದು ಪೊಲೀಸರಿಗೆ ಸವಾಲೆಸೆದಿದ್ದಾರೆ.

ಈ ಕೂಡಲೇ ರಾಜ್ಯ ಕಾಂಗ್ರೆಸ್ ಸರ್ಕಾರ ಕೋಮು ಪಕ್ಷಪಾತ ಧೋರಣೆ ಬದಿಗಿಟ್ಟು ಸಮಾಜಘಾತುಕ ಶಕ್ತಿಗಳ ವಿರುದ್ಧ ಕಠಿಣ ಕ್ರಮ ಜರುಗಿಸದಿದ್ದರೆ ಶಾಂತಿ–ಸುವ್ಯವಸ್ಥೆಗೆ ಹೆಸರಾದ ಮೈಸೂರು ಕೋಮು ದಳ್ಳುರಿಗೆ ಸಿಲುಕುವ ಅಪಾಯಕ್ಕೆ ಕಾಂಗ್ರೆಸ್ ಸರ್ಕಾರವೇ ಹೊಣೆ ಆಗಬೇಕಾಗುತ್ತದೆ.



ಬಿ.ವೈ.ವಿಜಯೇಂದ್ರ



ಆರ್.ಅಶೋಕ್

ಪೊಲೀಸರ ಮೇಲೆ ಹಲ್ಲೆ ಧೈರ್ಯ: ಈ ಸಂಬಂಧ ಟ್ವೀಟ್ ಮಾಡಿರುವ ಅವರುಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಪಸಂಖ್ಯಾತ ಸಮುದಾಯದ ಗಲಭೆಕೋರರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆದಿರುವುದು, ಗಲಭೆಕೋರರಿಗೆ ಪೊಲೀಸರ ಮೇಲೂ ಹಲ್ಲೆ ಮಾಡುವಷ್ಟು ಧೈರ್ಯ ಬಂದಿದೆ ಎಂದಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದಿಂದ ಕಾನೂನು ಸುವ್ಯವಸ್ಥೆ ಹದಗೆಟ್ಟು ಹಳ್ಳ ಹಿಡಿದಿದೆ, ಹುಬ್ಬಳ್ಳಿಯಂತೆ ಮೈಸೂರಿನಲ್ಲೂ ಪೊಲೀಸರ ಮೇಲೆ ಹಲ್ಲೆ ನಡೆದಿದೆ. ರಾಹುಲ್ ಗಾಂಧಿ, ಅರವಿಂದ ಕೇಜ್ರಿವಾಲ್, ಅಖಿಲೇಶ್ ಯಾದವ್ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದನ್ನು ಪ್ರತಿಭಟಿಸಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ. ಹಿಂದೂ ಸಮುದಾಯದವರಿಗೆ ಬೆದರಿಕೆ ಹಾಕಲಾಗಿದ್ದು, ಮೈಸೂರಿನಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ.

ಹುಬ್ಬಳ್ಳಿ ಗಲಭೆಯಲ್ಲಿ ಭಾಗಿಯಾದವರ ವಿರುದ್ಧದ ಪ್ರಕರಣಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಪಸ್ ಪಡೆದಿರುವುದು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರು, ಇದು ಅಲ್ಪಸಂಖ್ಯಾತರ ಸರ್ಕಾರ ಎಂಬಂತಹ ಹೇಳಿಕೆಗಳು ಗಲಭೆಕೋರರಲ್ಲಿ ಪೊಲೀಸ್ ಠಾಣೆಯನ್ನೂ ಧ್ವಂಸ ಮಾಡಬಹುದೆಂಬ ಧೈರ್ಯ ತಂದಿದೆ ಎಂದು ಆರೋಪಿಸಿದ್ದಾರೆ.

ಪೊಲೀಸರು ಅಸಹಾಯಕರು: ರಾಜ್ಯದಲ್ಲಿ ಒಂದೆಡೆ ಆರ್ಥಿಕ ದುಸ್ಥಿತಿ ಇದ್ದರೆ, ಮತ್ತೊಂದೆಡೆ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಗಲಭೆ ಎಸಗುವವರ ವಿರುದ್ಧ ಪ್ರಕರಣ ದಾಖಲಿಸಿದರೂ, ವ್ಯರ್ಥ ಎಂಬುದು ಪೊಲೀಸರಿಗೂ ಮನವರಿಕೆ ಆದಂತಿದೆ. ಗಲಭೆಕೋರರಿಗೆ ಪೊಲೀಸರ ಭಯವೇ ಇಲ್ಲವೆಂದರೆ ರಾಜ್ಯದಲ್ಲಿ ಕಾನೂನು ಸತ್ತಿದೆ ಎಂದರ್ಥ. ಮತಬ್ಯಾಂಕ್‌ಗಾಗಿ ಇಡೀ ವ್ಯವಸ್ಥೆ ಹಾಳು ಮಾಡಲಾಗುತ್ತಿದೆ. ಮೈಸೂರಿನ ಹಿಂದೂಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಸ್ಥಳೀಯ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರ ಜೊತೆ ಮಾತನಾಡಿದ್ದು, ಗಲಭೆಕೋರರ ಮೇಲೆ ಕ್ರಮ ಕೈಗೊಳ್ಳಲು ಪೊಲೀಸರು ಕೈಚೆಲ್ಲಿ ಕುಳಿತಿರುವುದರಿಂದ ನಾವೇ ಶಾಂತಿ ಕಾಪಾಡಬೇಕಿದೆ. ಕೆಎಫ್‌ಡಿ, ಪಾಪ್ಯುಲರ್ ಫ್ರಂಟ್ ಮೊದಲಾದ ಸಂಘಟನೆಗಳು ಮೈಸೂರಿನಲ್ಲಿ ಸಕ್ರಿಯವಾಗಿವೆ, ಕೇರಳದಿಂದ ಬಂದು ಕೊಲೆ, ಅಪಹರಣ ಮಾಡಿ ಹೋಗಿರುವ ಘಟನೆಗಳು ನಡೆದಿವೆ ಎಂದರು.

ಕಾಂಗ್ರೆಸ್ ಶಾಸಕರಿಗೆ ಬೇರೆ ಆದಾಯವಿಲ್ಲದೆ ವರ್ಗಾವಣೆ, ಮರಳು ಮಾಫಿಯಾ ಮೂಲಕ ಹಣ ಸಂಪಾದನೆಯಲ್ಲಿ ತೊಡಗಿದ್ದಾರೆ. ಭದ್ರಾವತಿಯಲ್ಲೂ ಇಂಥದ್ದೇ ಘಟನೆ ನಡೆದಿದೆ, ಬೇರೆ ಜಿಲ್ಲೆಗಳಲ್ಲೂ ಅಧಿಕಾರಿಗಳಿಗೆ ಆಡಳಿತಾರೂಢ ಶಾಸಕರಿಂದ ಬೆದರಿಕೆ ಇದೆ, ಮಂಡ್ಯ, ಬೀದರ್, ಯಾದಗಿರಿ ಮೊದಲಾದೆಡೆ ಮರಳು ಮಾಫಿಯಾ ನಡೆಯುತ್ತಿದೆ. ಭದ್ರಾವತಿಯ ಮಹಿಳಾ ಅಧಿಕಾರಿ ಘಟನೆ ದಾಖಲಿಸಿಕೊಂಡು ಧೈರ್ಯವಾಗಿ ಮಾತನಾಡಿದ್ದಾರೆ. ಇತರೆ ಜಿಲ್ಲೆಗಳ ಅಧಿಕಾರಿಗಳು ವರ್ಗಾವಣೆ ಭಯದಿಂದ ಮಾತನಾಡುತ್ತಿಲ್ಲ ಎಂದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತು ಉಲ್ಲಂಘಿಸಿ ಕುಂಭಮೇಳಕ್ಕೆ ಡಿ.ಕೆ.ಶಿವಕುಮಾರ್ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆ ಬಗ್ಗೆ ಉತ್ತರಪ್ರದೇಶ ಸರ್ಕಾರವನ್ನು ಶ್ಲಾಘಿಸಿದ್ದು, ಯಾರನ್ನು ಅನುಸರಿಸಬೇಕು ಎಂಬ ಗೊಂದಲ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಕಾಡುತ್ತಿದೆ ಎಂದು ವ್ಯಂಗ್ಯವಾಡಿದರು.

ನಾಳೆಯಿಂದ ಕಣಿಯನಹುಂಡಿ ಅರ್ಕಧಾಮದ ವಾರ್ಷಿಕೋತ್ಸವ

ಮೈಸೂರು,ಫೆ.11(ಜಿಎ)–ಬೋಗಾದಿ–ಗದ್ದಿಗೆ ರಸ್ತೆಯಲ್ಲಿರುವ ಕಣಿಯನಹುಂಡಿ ಗ್ರಾಮದ ಅರ್ಕಧಾಮದಲ್ಲಿ ಫೆ.13, 14ರಂದು ಮೊದಲನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾನೂನು ಸಲಹೆಗಾರ ಡಾ.ಬಿ.ಶಿವಣ್ಣ ಈ ವಿಷಯ ತಿಳಿಸಿ, ಫೆ.13ರಂದು ಸಂಜೆ 5.30ಕ್ಕೆ ಕಾರ್ಯಕ್ರಮಗಳು ಆರಂಭವಾಗಲಿವೆ. ಈ ವೇಳೆ ಅನೇಕ ಪ್ರಮುಖ ಸ್ವಾಮೀಜಿಗಳು ಸಾನ್ನಿಧ್ಯ ವಹಿಸುವರು. ಫೆ.14ರಂದು ಬೆಳಗ್ಗೆ 7 ಗಂಟೆಯಿಂದ ಮಧ್ಯಾಹ್ನ ಒಂದರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ ಎಂದರು.

ಅರ್ಕಧಾಮವು ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅತಿ ಕಡಿಮೆ ಶುಲ್ಕದಲ್ಲಿ ವಿದ್ಯಾಭ್ಯಾಸ ನೀಡುತ್ತಿದೆ. ಜೊತೆಗೆ ಅನೇಕ ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಾಲಕೃಷ್ಣ, ಮಹದೇವಸ್ವಾಮಿ, ಅಯ್ಯಪ್ಪಣ್ಣ, ರಮೇಶ್, ನಂದರಾಜ್, ನಾಗರಾಜು ಉಪಸ್ಥಿತರಿದ್ದರು.

ವಚನ ಸಾಹಿತ್ಯ ರಸಪ್ರಶ್ನೆ: ಶಿಕ್ಷಕಿ ಗಿರಿಜಾ ಇಟಗಿ ವಿಜೇತೆ

ಮೈಸೂರು,ಫೆ.11–ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಅಂತರ್ಜಾಲದ ಮೂಲಕ ನಡೆದ 126ನೇ ಥಟ್ ಅಂತ ಉತ್ತರಿಸಿ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲೆಯ ಬಸವಪಟ್ಟಣ ತಾಲೂಕು ಸರ್ಕಾರಿ ಪ್ರೌಢಶಾಲಾ ಶಿಕ್ಷಕಿ ಗಿರಿಜಾ ಇಟಗಿ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ ವಿಜೇತರಾಗಿದ್ದಾರೆ ಎಂದು ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ತಿಳಿಸಿದ್ದಾರೆ.



ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ

ಪೊಲೀಸರಿಗೆ ಕಾಮನ್‌ಸೆನ್ಸ್ ಇಲ್ಲ ಎಂಬ ಸಚಿವ ರಾಜಣ್ಣ ಹೇಳಿಕೆಗೆ ಅಶೋಕ್ ವಾಗ್ದಾಳಿ



ಕಲ್ಲು ತೂರಾಟ ನಡೆದಿದ್ದ ಮೈಸೂರಿನ ಉದಯಗಿರಿ ಠಾಣೆಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಭೇಟಿ ನೀಡಿ ಪರಿಶೀಲಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಫೆ.11(ಆರ್‌ಕೆ)–ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಅರಾಜಕತೆ ಉಂಟಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಕಲ್ಲು ತೂರಾಟ ನಡೆದಿದ್ದ ಮೈಸೂರಿನ ಉದಯಗಿರಿ ಠಾಣೆಗೆ ಇಂದು ಭೇಟಿ ನೀಡಿ ಪರಿಶೀಲಿಸಿದ ಬಳಿಕ ಘಟನೆ ಕುರಿತು ಪೊಲೀಸ್ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೃಹ ಇಲಾಖೆ ಬಗ್ಗೆ ಡಾ. ಪರಮೇಶ್ವರ್‌ಗೆ ಆಸಕ್ತಿ ಇಲ್ಲ. ಅವರಿಗೆ ಗೃಹ ಖಾತೆ ಬೇಕಾಗಿಲ್ಲ. ಬಹುತೇಕ ಸಚಿವರೂ ಅದೇ ಮನಸ್ಥಿತಿಯಲ್ಲಿದ್ದಾರೆ ಎಂದರು.

ಉದಯಗಿರಿ ಪೊಲೀಸ್ ಠಾಣೆಗೆ ಕಲ್ಲು ತೂರಿರುವುದು ಇಡೀ ರಾಜ್ಯವೇ ತಲೆ ತಗ್ಗಿಸುವಂತಹ ಘಟನೆಯಾಗಿದ್ದು, ಇದು ಅಕ್ಷಮ್ಯ ಅಪರಾಧ. ಇದಕ್ಕೆ ಸಿಎಂ ಸಿದ್ದರಾಮಯ್ಯ ಆಡಳಿತ ವೈಖರಿಯೇ ಕಾರಣ ಎಂದ ಅವರು, ಸಿದ್ದರಾಮಯ್ಯ ನಿದ್ದೆರಾಮಯ್ಯ ಆಗುವುದನ್ನು ಬಿಟ್ಟು ಆಡಳಿತದತ್ತ ಗಮನಹರಿಸಬೇಕು. ಅವರು ನವೆಂಬರ್‌ವರೆಗೆ ಮಾತ್ರ ಸಿಎಂ ಆಗಿರುತ್ತಾರೆ. ಅಲ್ಲಿಯವರೆಗಾದರೂ ಒಳ್ಳೆಯ ಕೆಲಸ ಮಾಡಲಿ ಎಂದು ಹೇಳಿದರು.

‘ಒಳಿತು ಮಾಡು ಮನುಸ ನೀ ಇರೊದು ಮೂರು ದಿವಸ..’ ಎಂಬ ಸಿ.ಅಶ್ವತ್ಥ ಅವರ ಜಾನಪದ ಗಾಯನದ ಮೂಲಕ ಸಿದ್ದರಾಮಯ್ಯಗೆ ಟಾಂಗ್ ನೀಡಿದ ಅಶೋಕ್, ನಾವು ಇಲ್ಲಿಗೆ ಬಂದಿರುವುದು ಠಾಣೆ ಮೇಲೆ ಕಲ್ಲು ತೂರಿದವರನ್ನು ಬಂಧಿಸುವಂತೆ ಒತ್ತಾಯಿಸಲು ಎಂದರು.

ಹುಬ್ಬಳ್ಳಿಯಲ್ಲಿ ನಡೆದ ಗಲಾಟೆಯಲ್ಲೂ ಯಾವುದೇ ಪೊಲೀಸ್ ಠಾಣೆ ಒಡೆದು ಹಾಕಿ ನಾನಿದ್ದೇನೆ ಎಂದು ಸಿಎಂ ಧೈರ್ಯ ತುಂಬಿದ್ದಾರೆ. ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವುದಕ್ಕೆ ಇದೇ ಸಾಕ್ಷಿ. ಸಚಿವ ರಾಜಣ್ಣ, ಪೊಲೀಸರಿಗೆ ಕಾಮನ್‌ಸೆನ್ಸ್ ಇಲ್ಲ ಎಂದು ಪೊಲೀಸ್ ಅಧಿಕಾರಿಗಳ ಬಗ್ಗೆ ಕೇವಲವಾಗಿ ಮಾತನಾಡಿದ್ದಾರೆ. ಪೊಲೀಸ್ ಇಲಾಖೆಯೇ ಸರಿ ಇಲ್ಲ ಎಂದ ಮೇಲೆ ಪೊಲೀಸ್ ಠಾಣೆಗಳನ್ನು ಮುಚ್ಚಿಬಿಡಿ ಎಂದು ಅವರು ಮಾರ್ಮಿಕವಾಗಿ ಹೇಳಿದ್ದಾರೆ.

ಆರೋಪಿಯನ್ನು ಠಾಣೆಗೆ ಕರೆತರದೇ ಇನ್ನೆಲ್ಲಿಗೆ ಕರೆದೊಯ್ಯಬೇಕಿತ್ತು? ಉದಯಗಿರಿ ಪಾಕಿಸ್ತಾನದಲ್ಲಿದೆಯೇ? ಡಾ.ಅಂಬೇಡ್ಕರ್ ಕಾನೂನು ಉದಯ ಗಿರಿಗೆ ಅನ್ವಯ ಆಗೋದಿಲ್ವಾ? ಎಂದು ಪ್ರಶ್ನಿಸಿದ ಅಶೋಕ್, ಸ್ವಲ್ಪ ಯಾಮಾರಿದ್ದರೂ ಪೊಲೀಸ್ ಠಾಣೆಯನ್ನೇ ಉಡೀಸ್ ಮಾಡುತ್ತಿದ್ದರು. ಈ ದೇಶದಲ್ಲಿ ಏನೇ ನಡೆದರೂ ಆರ್‌ಎಸ್‌ಎಸ್ ಕಾರಣ ಎನ್ನುತ್ತಾರೆ. ಈ ಸರ್ಕಾರ ಬದುಕಿದೆಯಾ, ಸತ್ತಿದೆಯಾ ಗೊತ್ತಿಲ್ಲ ನೀವಿರೋವರೆಗಾದರೂ ಒಳ್ಳೆ ಕೆಲಸ ಮಾಡಿ ಪೊಲೀಸ್ ಠಾಣೆಗಳನ್ನು ಉಳಿಸಿ ಎಂದು ಸಿಎಂ ಸಿದ್ದರಾಮಯ್ಯರಿಗೆ ಅಶೋಕ್ ಟಾಂಗ್ ನೀಡಿದರು.

ಕಾನೂನು ಸುವ್ಯವಸ್ಥೆ ಕಾಪಾಡಲು ಗೃಹ ಸಚಿವ ಡಾ.ಪರಮೇಶ್ವರ್‌ಗೆ ತಾಕತ್ತಿಲ್ಲ

ಮೈಸೂರಲ್ಲಿ ಬಿಜೆಪಿ ರಾಜ್ಯ ವಕ್ತಾರ ಮಹೇಶ್ ವ್ಯಂಗ್ಯ



ಮೈಸೂರಲ್ಲಿ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ. ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.11(ಬಿಎಲ್‌ಯು)– ಜಿಹಾದಿ ಮನೋಭಾವದ ಸಮಾಜಘಾತುಕ ಶಕ್ತಿಗಳು ಪೊಲೀಸರ ಮೇಲೆ ದಾಳಿ ಮಾಡುತ್ತಿದ್ದರೂ ಕಠಿಣ ಕ್ರಮ ಕೈಗೊಂಡು, ಇದನ್ನು ತಡೆಯುವ ತಾಕತ್ತು ರಾಜ್ಯ ಗೃಹ ಸಚಿವ ಡಾ.ಪರಮೇಶ್ವರ್‌ಗೆ ಇಲ್ಲ. ಆ ಮೂಲಕ ಕೈಲಾಗದ ಗೃಹಮಂತ್ರಿಯಾಗಿದ್ದಾರೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ವ್ಯಂಗ್ಯವಾಡಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಂತವಾಗಿದ್ದ ಮೈಸೂರಿನಲ್ಲಿ ಅಶಾಂತ ವಾತಾವರಣ ನಿರ್ಮಾಣ ಮಾಡಲಾಗುತ್ತಿದೆ. ಕೆಲವೇ ನಿಮಿಷದಲ್ಲಿ ಜಮಾವಣೆಗೊಂಡ ಸಾವಿರಾರು ಮಂದಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ್ದಾರೆ ಎಂದು ಆರೋಪಿಸಿದರು.

ಬೆಂಗಳೂರಿನ ಡಿಜೆ ಹಳ್ಳಿ, ಕೆಜಿ ಹಳ್ಳಿ ಮಾದರಿ ಘಟನೆಗಳು ನಡೆಯುತ್ತಿದ್ದರೂ ಇದನ್ನು ತಡೆಯುವ ಶಕ್ತಿ ಕಾಂಗ್ರೆಸ್ ಸರ್ಕಾರಕ್ಕಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇದು ಐದನೇ ಘಟನೆಯಾಗಿದೆ. ಹಾವೇರಿ, ಹುಬ್ಬಳ್ಳಿಯಂತೆ ಈಗ ಮೈಸೂರಿನಲ್ಲಿ ಘಟನೆ ಸಂಭವಿಸಿದೆ. ಇದು ಕಾಂಗ್ರೆಸ್ ಷಡ್ಯಂತ್ರದ ಒಂದು ಭಾಗವಾಗಿದ್ದು, ಅಶಾಂತ ವಾತಾವರಣ ನಿರ್ಮಾಣ ಮಾಡುತ್ತಿದ್ದಾರೆ ಎಂದು ಮಹೇಶ್ ಆರೋಪಿಸಿದರು.

ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಕತ್ತು ಸೀಳುವ ಕೃತ್ಯ ನಡೆಸಲಾಗಿತ್ತು. ಆದರೂ ತನ್ವೀರ್ ಸೇಠ್ ಇದರ ವಿರುದ್ಧ ಧ್ವನಿ ಎತ್ತುತ್ತಿಲ್ಲ. ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಜೊತೆ ಎಸ್‌ಡಿಪಿಐ ಮೈತ್ರಿ ಮಾಡಿಕೊಂಡ ಹಿನ್ನೆಲೆಯಲ್ಲಿ ರಾಜಕೀಯ ಕಾರಣಕ್ಕೆ ಟೀಕೆ ಮಾಡದೆ ಮೌನ ವಹಿಸಿದ್ದಾರೆ ಎಂದು ಆಪಾದಿಸಿದರು.

ಕೆಜಿ ಹಳ್ಳಿ, ಡಿಜೆ ಹಳ್ಳಿಯಲ್ಲಿ ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿದ್ದರು. ಆ ವೇಳೆ ಅವರದೇ ಪಕ್ಷದ ಶಾಸಕರಾಗಿದ್ದ ಅಖಂಡ ಶ್ರೀನಿವಾಸಮೂರ್ತಿ ಬೆಂಬಲಕ್ಕೆ ಕಾಂಗ್ರೆಸ್ ನಿಲ್ಲಲಿಲ್ಲ. ಈಗಿನ ವಸತಿ ಸಚಿವ ಜಮೀರ್ ಅಹಮ್ಮದ್ ಒಂದು ಸಮುದಾಯದ ಪರವಾಗಿದ್ದರು. ಅಲ್ಲದೆ, ಅಖಂಡ ಶ್ರೀನಿವಾಸ ಮೂರ್ತಿಗೆ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಸಹ ನೀಡಲಿಲ್ಲ. ಕಾಂಗ್ರೆಸ್ ಓಟ್ ಬ್ಯಾಂಕ್ ರಾಜಕಾರಣ ಮಾಡುತ್ತಿರುವ ಕಾರಣ ಸಮಾಜಘಾತುಕ ಶಕ್ತಿಗಳು ಇದನ್ನು ತಮ್ಮ ಬೆಳವಣಿಗೆಗೆ ಬಳಸಿಕೊಳ್ಳುತ್ತಿವೆ ಎಂದು ದೂರಿದರು.

ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಇಂತಹ ಶಕ್ತಿಗಳನ್ನು ಮಟ್ಟ ಹಾಕಿದ್ದಾರೆ. ಅಲ್ಲಿ ಸಾಧ್ಯವಾಗಿರುವುದು ಇಲ್ಲೇಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವಾಗದಿದ್ದರೆ ಕುರ್ಚಿ ಬಿಟ್ಟು ಇಳಿಯಿರಿ. ನಾವು ಅಧಿಕಾರಕ್ಕೆ ಬಂದರೆ ಇವರನ್ನೆಲ್ಲಾ ಮಟ್ಟ ಹಾಕುತ್ತೇವೆ ಎಂದು ಕಾಂಗ್ರೆಸ್‌ಗೆ ಸಲಹೆ ನೀಡಿದರು.

ಮೈಸೂರು ಜಿಲ್ಲಾ ಬಿಜೆಪಿ ವಕ್ತಾರ ದಯಾನಂದ ಪಟೇಲ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ಅಸಮರ್ಥ

ತವರು ಜಿಲ್ಲೆಯ ಒಂದೊಂದೆ ಘಟನೆಗಳು ಇದಕ್ಕೆ ಸಾಕ್ಷಿ: ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪ

ಮೈಸೂರು, ಫೆ.11(ಬಿಎಲ್‌ಯು)– ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಅಸಮರ್ಥ ಎಂಬುದಕ್ಕೆ ಅವರ ತವರು ಜಿಲ್ಲೆ ಮೈಸೂರಿನಲ್ಲಿ ನಡೆಯುತ್ತಿರುವ ಒಂದೊಂದೇ ಘಟನೆ ಸಾಕ್ಷಿ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಟೀಕಿಸಿದ್ದಾರೆ.

ನಗರದ ಕ್ಯಾತಮಾರನಹಳ್ಳಿಯಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲಿ ಎಷ್ಟು ದಿನ ಇರುತ್ತಾರೊ ಗೊತ್ತಿಲ್ಲ. ಆದರೆ ಇರುವಷ್ಟು ದಿನ ಖಡಕ್ ಆಗಿ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು. ಸಿದ್ದರಾಮಯ್ಯ ಅವರದು ಕನ್ನಡಿಗರ ಸರ್ಕಾರವಲ್ಲ, ತಾಲಿಬಾನಿ ಸರ್ಕಾರ ಎಂದು ಆಪಾದಿಸಿದ ಪ್ರತಾಪ್ ಸಿಂಹ, ಪೊಲೀಸರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು. ಅನ್ಯಾಯ ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಸರ್ಕಾರದ ಅಣತಿಯಂತೆ ನಡೆಯುವುದನ್ನು ಮೊದಲು ಬಿಡಬೇಕು ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಪೊಲೀಸರನ್ನು ಗುರಿಯಾಗಿಸಿಕೊಂಡು ಉದಯಗಿರಿಯಲ್ಲಿ ಆಗಾಗ್ಗೆ ಗಲಾಟೆಗಳು ನಡೆಯುತ್ತಿವೆ. ಈಗಲೂ ಅದೇ ಮಾದರಿ ಗಲಾಟೆಗಳು ನಡೆದಿದೆ. ಉದಯಗಿರಿ ಪೊಲೀಸ್ ಠಾಣೆಯಲ್ಲಿ ನಿನ್ನೆ ನಡೆದಿರುವ ಘಟನೆ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಆಗಿದೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು. ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್ ಸೋತರೆ ಮೈಸೂರಿನವರಿಗೇಕೆ ಕೋಪ ಬರುತ್ತದೆ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಪ್ರತಾಪ್ ಸಿಂಹ ಹೋದ ಕಡೆ ಪೊಲೀಸರ ಅಡ್ಡಗಾಲು

ಉದಯಗಿರಿ ಪೊಲೀಸ್ ಠಾಣೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಭೇಟಿಗೆ ಪೊಲೀಸರು ಅವಕಾಶ ನಿರಾಕರಿಸಿದರು. ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದ ಘಟನೆ ಹಿನ್ನೆಲೆಯಲ್ಲಿ ಇಂದು ಬೆಳಿಗ್ಗೆ ಪ್ರತಾಪ್ ಸಿಂಹ ಉದಯಗಿರಿ ಪೊಲೀಸ್ ಠಾಣೆ ಬಳಿ ತೆರಳಿದ್ದರು.

ಆದರೆ ಪೊಲೀಸ್ ಠಾಣೆ ಸ್ವಲ್ಪ ದೂರದಲ್ಲೇ ಅವರನ್ನು ತಡೆದ ಪೊಲೀಸರು ಶಾಂತಿ ಕಾಪಾಡುವ ದೃಷ್ಟಿಯಿಂದ ವಾಪಾಸು ಹೋಗುವಂತೆ ಪೊಲೀಸರು ಕೋರಿದರು. ಪೊಲೀಸರ ಮನವಿಗೆ ಸ್ಪಂದಿಸಿದ ಪ್ರತಾಪ್ ಸಿಂಹ ಅಲ್ಲಿಂದ ವಾಪಾಸ್ಸಾದರು. ತರುವಾಯ ಕ್ಯಾತಮಾರನಹಳ್ಳಿಯ ಹುಲಿಯಮ್ಮ ದೇವಸ್ಥಾನಕ್ಕೆ ಆಗಮಿಸಿ ಸ್ಥಳೀಯ ಬಿಜೆಪಿ ಕಾರ್ಯಕರ್ತರ ಜೊತೆ ಮಾತನಾಡುತ್ತಿದ್ದರು. ಅಲ್ಲಿಗೂ ಆಗಮಿಸಿದ ಪೊಲೀಸರು ತಕ್ಷಣ ಇಲ್ಲಿಂದ ತೆರಳುವಂತೆ ಮನವಿ ಮಾಡಿದರು. ನಂತರ ಪೊಲೀಸ್ ಭದ್ರತೆಯಲ್ಲಿ ಪ್ರತಾಪ್ ಸಿಂಹ ಅವರನ್ನು ಅಲ್ಲಿಂದ ಕಳುಹಿಸಿದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದು ಮಧ್ಯಾಹ್ನ ಪೊಲೀಸ್ ಠಾಣೆಗೆ ಬಂದ ಸಂದರ್ಭದಲ್ಲಿ ಅವರ ಜೊತೆಯಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ಪ್ರತಾಪ್ ಸಿಂಹ ಭೇಟಿ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.02.2025 ಬುಧವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಥೈರಾಯಿಡ್ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಚರ್ಮರೋಗಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ :** ವಿಶ್ವ ಕ್ಯಾನ್ಸರ್ ದಿನ, ಉದ್ಘಾಟನೆ : ಚಲುವಾಂಬ ಆಸ್ಪತ್ರೆ ಸ್ಥಾನೀಯ ವೈದ್ಯಾಧಿಕಾರಿ ಡಾ. ಎಂ.ಡಿ. ಶಿವರಾಮಕೃಷ್ಣ, ಅಧ್ಯಕ್ಷತೆ : ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ಡಿ.ಜಿ. ನಾಗರಾಜು, ಮುಖ್ಯ ಅತಿಥಿಗಳು: ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಬಿ. ಬೃಂದಾ, ತಾಲೂಕು ಆರೋಗ್ಯಾಧಿಕಾರಿ ಡಾ. ಪುಟ್ಟತಾಯಮ್ಮ, ನಿವೃತ್ತ ಹಿರಿಯ ಕ್ಲಿನಿಕಲ್ ಸಂಶೋಧನಾ ವೈದ್ಯ ಡಾ. ವಿಜಯ ಶ್ರೀನಿವಾಸ, ಸ್ಥಳ: ಸಮುದಾಯ ಭವನ, ಗಾಂಧಿನಗರ, ಬೆಳಗ್ಗೆ 11ಕ್ಕೆ.

■ **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್ :** 59ನೇ ವರ್ಷದ ತೈಪೂಸಂ ಮಹೋತ್ಸವ–2025 ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ, ಸ್ಥಳ: ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ವಿಶ್ವೇಶ್ವರನಗರ.

■ **ಶ್ರೀ ಎಲ್ಲಮ್ಮತಾಯಿ ಅಮ್ಮನವರ ದೇವಸ್ಥಾನ:** ಭರತ ಹುಣ್ಣಿಮೆ ಅಂಗವಾಗಿ ಶ್ರೀ ಎಲ್ಲಮ್ಮತಾಯಿ ಅಮ್ಮನವರ 21ನೇ ವರ್ಷದ ಪೂಜಾ ಮಹೋತ್ಸವ, ಸಂಜೆ 6 ಗಂಟೆಗೆ ಅಭಿಷೇಕ, ಬೆಳಗ್ಗೆ 9 ಗಂಟೆಯಿಂದ ಶ್ರೀ ಗಣಹೋಮ, ನವಗ್ರಹ ಹೋಮ, ಶ್ರೀ ರೇಣುಕಾದೇವಿ ಹೋಮ, ಶ್ರೀ ದುರ್ಗಾಹೋಮ ಮತ್ತು ಶ್ರೀ ಮೃತ್ಯುಂಜಯ ಹೋಮ, ಪೂರ್ಣಾಹುತಿ, ಕನ್ಯಾಪೂಜೆ, ಬೆಳಗ್ಗೆ 10 ರಿಂದ ಶ್ರೀ ಎಲ್ಲಮ್ಮ ಚರಿತ್ರೆ ಮತ್ತು ಚೌಡಿಕೆ ನಾದ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನದ ಆವರಣ, ರಾಮಾನುಜ ರಸ್ತೆ.

■ **ಬೇವಿನ ಮರದ ಶ್ರೀ ಯಲ್ಲಮ್ಮ ದೇವಸ್ಥಾನ :** 77ನೇ ವರ್ಷದ ಮಹೋತ್ಸವ, ವ್ಯಾಸ ಹುಣ್ಣಿಮೆ ದಿನದಂದು ಬೆಳಗ್ಗೆ ಪೂಜೆ, ಮಹಾಭಿಷೇಕ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಸಂಜೆ 7ಕ್ಕೆ ಶ್ರೀ ಯಲ್ಲಮ್ಮ ದೇವರ ಉತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ನಾಲಾಬೀದಿ, ಕೆ.ಆರ್. ಮೊಹಲ್ಲಾ.

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–276, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಅವರಿಂದ ಗಾಯನ, ಮೈಸೂರು ಎನ್. ಕಾರ್ತಿಕ್–ವಯೋಲಿನ್, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಪ್ರಣತಿ ವಿದ್ಯಾಸಂಸ್ಥೆ :** ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ಕೆಪಿಸಿಸಿ ಹಿಂದುಳಿದ ವರ್ಗದ ರಾಜ್ಯ ಉಪಾಧ್ಯಕ್ಷ ಕೆ.ಎಸ್. ಮಾಲೇಗೌಡ, ಅಧ್ಯಕ್ಷತೆ : ಕ್ಯಾತನಹಳ್ಳಿ ಗ್ರಾಪಂ ಅಧ್ಯಕ್ಷೆ ಶ್ರೀಮತಿ ಸವಿತಾಬಸಪ್ಪ, ಉಪಸ್ಥಿತರು : ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಕೆ. ಕಾಂತರಾಜು, ಸನ್ಮಾನಿತರು : ಮುಖ್ಯ ಪೇದೆ ಟಿ.ಹೆಚ್. ಸುರೇಶ್, ಆರ್. ನಂದನ್‌ಕುಮಾರ್, ಸ್ಥಳ: ಶಾಲಾ ಆವರಣ, ಕ್ಯಾತನಹಳ್ಳಿ.

■ **ದೀಕ್ಷಿತ್ ಆರೋಗ್ಯ ಧಾಮ :** ಹುಣ್ಣಿಮೆಯ ವಿಶೇಷ ಮಾಸದ ಆನಂದ ಆರೋಗ್ಯ ಕಾರ್ಯಕ್ರಮ, ವಿದುಷಿ ಡಾ. ಸಂಧ್ಯಾ ಭಟ್ ಅವರಿಂದ ಹಿಂದೂಸ್ತಾನಿ ಗಾಯನ, ವಿದ್ವಾನ್ ವೆಂಕಟೇಶ ಕುಲಕರ್ಣಿ–ಹಾರ್ಮೋನಿಯಂ, ವಿದ್ವಾನ್ ಪರಮೇಶ್ವರ ಹೆಗಡೆ–ತಬಲ, ಆಯುರ್ವೇದ ತಜ್ಞ ಡಾ. ಸಿ.ಎಸ್. ಅನಿಲ್ ಕುಮಾರ್ ಅವರಿಂದ ಪವಿತ್ರ ಸ್ನಾನ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ಆಯುರ್ವೇದ ಪಂಚಕರ್ಮ ಆಸ್ಪತ್ರೆ, ವಿಜಯನಗರ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 5.50 ‘ರಂಗ ದಿಗ್ಗಜರು’ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ ಹಾಗೂ ನಿರೂಪಣೆ –ಎಸ್. ರಾಮನಾಥ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ :ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ವ್ಯಾಖ್ಯಾನ–ಡಾ. ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಎಂ.ಆರ್. ಸುಧಾ– ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಕೆ. ಸರಸ್ವತಿ–ವೀಣಾ ವಾದನ, 4.00 ಮಹಿಳಾರಂಗ, 4.45 ಹಿಂದಿ ಪಾಠ, ಪ್ರಸ್ತುತಿ : ಎಸ್. ಈಶ್ವರ ಭಟ್, 6.10 ಕ್ಯಾನ್ಸರ್‌ನ ಮಿಥ್ಯೆಗಳು – ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 6.50 ಕೃಷಿರಂಗ : ಮೇವು–ಮೆಲುಕು, ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ. ವಾರ್ಷಿಕ ಮೇವಿನ ಬೆಳೆಗಳ ಉತ್ಪಾದನಾ ತಾಂತ್ರಿಕತೆಗಳು. ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಮೇವು ಅಭಿವೃದ್ಧಿ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಜಿ. ಶೇಖರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಂಬೆ ಜಯಶ್ರೀ – ಹಾಡುಗಾರಿಕೆ, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 12 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 295 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4



ಉದಯಗಿರಿ ಠಾಣಾ ವ್ಯಾಪ್ತಿ ಸಹಜ ಸ್ಥಿತಿ

ಏಳು ಪೊಲೀಸರಿಗೆ ಗಾಯ, ಹಲವು ವಾಹನ ಜಖಂ

ಮೈಸೂರು, ಫೆ.11(ಆರ್‌ಕೆ)– ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಹೇಳಿಕೆ ಪೋಸ್ಟ್ ಮಾಡಿದ್ದರಿಂದ ಸೋಮವಾರ ರಾತ್ರಿ ಉದ್ವಿಗ್ನಗೊಂಡಿದ್ದ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈಗ ಪರಿಸ್ಥಿತಿ ಶಾಂತವಾಗಿದೆ.

ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಹಿತೇಂದ್ರ ಅವರು ಇಂದು ಉದಯಗಿರಿ ಠಾಣೆಗೆ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದರು. ಸೋಮವಾರ ರಾತ್ರಿ ಗುಂಪು ಕಲ್ಲು ತೂರಿದಾಗ ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ, ಲಷ್ಕರ್ ಠಾಣೆ ಇನ್‌ಸ್ಪೆಕ್ಟರ್ ಪ್ರಸಾದ್, ನಜರ್‌ಬಾದ್ ಠಾಣೆ ಇನ್‌ಸ್ಪೆಕ್ಟರ್ ಮಹದೇವಸ್ವಾಮಿ, ಎಎಸ್‌ಐ ನಾಗರಾಜು ಹಾಗೂ ಕೆಎಸ್‌ಆರ್‌ಪಿ ತುಕಡಿಯ ಮೂವರು ಕಾನ್‌ಸ್ಟೇಬಲ್‌ಗಳು ಗಾಯಗೊಂಡಿದ್ದರು. ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಇದನ್ನು ದೃಢಪಡಿಸಿದ್ದರು. ಘಟನೆಯಲ್ಲಿ ಡಿಸಿಪಿ ಎಂ.ಮುತ್ತುರಾಜು ■6ನೇ ಪುಟಕ್ಕೆ





ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಹಿತೇಂದ್ರ ಅವರು ಇಂದು ಉದಯಗಿರಿ ಠಾಣೆಗೆ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದರು. ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ದಕ್ಷಿಣ ವಲಯ ಡಿಐಜಿ ಡಾ.ಬೋರಲಿಂಗಯ್ಯ, ಎಸ್ಪಿ ಎನ್.ವಿಷ್ಣುವರ್ಧನ, ಡಿಸಿಪಿಗಳಾದ ಎಂ.ಮುತ್ತುರಾಜು, ಎಸ್.ಜಾಹ್ನವಿ, ಎ.ನಾಗಪ್ಪ, ಎಲ್ಲಾ ಉಪವಿಭಾಗಗಳ ಎಸಿಪಿಗಳು ಹಾಗೂ ಇನ್‌ಸ್ಪೆಕ್ಟರ್‌ಗಳು ಈ ಸಂದರ್ಭ ಉಪಸ್ಥಿತರಿದ್ದರು.

ದೇಶದ 24 ಬರ ಸಂಭಾವ್ಯ ಜಿಲ್ಲೆಗಳಲ್ಲಿ 16 ಕರ್ನಾಟಕದಲ್ಲಿವೆ

ನವದೆಹಲಿ: ರಾಷ್ಟ್ರೀಯ ಮಳೆಯಾಶ್ರಿತ ಪ್ರದೇಶ ಪ್ರಾಧಿಕಾರವು ದೇಶದಲ್ಲಿ 24 ಬರ ಸಂಭಾವ್ಯ ಜಿಲ್ಲೆಗಳನ್ನು ಗುರುತಿಸಿದ್ದು, ಅವುಗಳಲ್ಲಿ 16 ಕರ್ನಾಟಕ ರಾಜ್ಯದವು ಎಂದು ಕೃಷಿ ಕಲ್ಯಾಣ ಖಾತೆ ರಾಜ್ಯ ಸಚಿವ ಭಗೀರಥ್ ಚೌಧರಿ ತಿಳಿಸಿದರು.

ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ಲೋಕಸಭೆಯಲ್ಲಿ ಮಂಗಳವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ಕರ್ನಾಟಕವು ಮುಖ್ಯವಾಗಿ ಮಳೆಯಾಶ್ರಿತ ಕೃಷಿಕ ರಾಜ್ಯವಾಗಿದ್ದು, ಹೆಚ್ಚಾಗಿ ಬರಗಾಲದಿಂದ ಬಳಲುತ್ತಿದೆ. ರಾಜ್ಯದಲ್ಲಿ ಸಾಮಾನ್ಯವಾಗಿ ಉತ್ತಮ ಮಳೆಯಾಗುತ್ತಿದೆ. ಆದರೆ, ಅದರ ಅನಿಯಮಿತ ಹಂಚಿಕೆಯಿಂದಾಗಿ, ಕೃಷಿ ಚಟುವಟಿಕೆ ಮೇಲೆ ಪರಿಣಾಮ ಉಂಟಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕಳೆದ 23 ವರ್ಷಗಳಲ್ಲಿ (2001ರಿಂದ 2023) 16 ವರ್ಷಗಳನ್ನು ಬರ ವರ್ಷಗಳೆಂದು ಘೋಷಿಸಲಾಗಿದೆ. 2018ರಿಂದ ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಪ್ರವಾಹಗಳು ಹೆಚ್ಚಾಗುತ್ತಿವೆ ಎಂದು ಮಾಹಿತಿ ನೀಡಿದರು.

ಕೇಂದ್ರದಿಂದ ಕರ್ನಾಟಕಕ್ಕೆ ಅನ್ಯಾಯವಾಗಿಲ್ಲ

ನವದೆಹಲಿ: ಅನುದಾನ ಹಾಗೂ ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರದಿಂದ ಕರ್ನಾಟಕಕ್ಕೆ ಯಾವುದೇ ಅನ್ಯಾಯವಾಗಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದರು.



ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಮಂಗಳವಾರ ಸಂಜೆ ಉತ್ತರ ನೀಡಿದ ಅವರು, ರಾಜ್ಯದಲ್ಲಿ 2014ರ ಬಳಿಕ 5,123 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಏಳು ವಿಮಾನ ನಿಲ್ದಾಣಗಳು ಕಾರ್ಯಾಚರಣೆ ಆರಂಭಿಸಿವೆ. 1,652 ಕಿ.ಮೀ. ಉದ್ದದ ರೈಲ್ವೆ ಜಾಲ ಸೇರ್ಪಡೆಯಾಗಿದೆ. ಇದು ಹಿಂದಿನ ಯುಪಿಎ ಅವಧಿಗಿಂತ ಹೆಚ್ಚು ಎಂದರು. ಇದಕ್ಕೂ ಮುನ್ನ ಮಾತನಾಡಿದ ಮೈಸೂರಿನ ಸಂಸದ ಯದುವೀರ್ ಒಡೆಯರ್, ಅನುದಾನ ಹಂಚಿಕೆಯಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಸುಳ್ಳು ಅಂಕಿ ಅಂಶಗಳನ್ನು ನೀಡಿ ಜನರ ದಿಕ್ಕು ತಪ್ಪಿಸುತ್ತಿದೆ ಎಂದರು.

ಸಿಸಿಬಿಗೆ ತನಿಖೆ ಜವಾಬ್ದಾರಿ

ಘಟನಾ ಸ್ಥಳದ ವಿಡಿಯೋ ಕ್ಲಿಪ್ಪಿಂಗ್ಸ್, ಸಿಸಿಟಿವಿ ಫುಟೇಜಸ್ ಮೂಲಕ ಆರೋಪಿಗಳ ಪತ್ತೆಗೆ ಕ್ರಮ

ಮೈಸೂರು, ಫೆ.11(ಆರ್‌ಕೆ)–ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಸೋಮವಾರ ಕಲ್ಲು ತೂರಿ ಪೊಲೀಸ್ ಅಧಿಕಾರಿಗಳನ್ನು ಗಾಯಗೊಳಿಸಿ ಹಲವು ವಾಹನಗಳನ್ನು ಜಖಂಗೊಳಿಸಿರುವ ಪ್ರಕರಣದ ತನಿಖೆಯನ್ನು ಸಿಸಿಬಿಗೆ ಒಪ್ಪಿಸಲಾಗಿದೆ. ತನಿಖೆ ಆರಂಭಿಸಿರುವ ಸಿಸಿಬಿ ಎಸಿಪಿ ಸಂದೇಶ್ ಕುಮಾರ್, ಇನ್‌ಸ್ಪೆಕ್ಟರ್‌ಗಳಾದ ಕೆ.ಸಿ.ಪೂವಯ್ಯ, ಮೋಹನ್ ಹಾಗೂ ಸಿಬ್ಬಂದಿ, ಕಲ್ಲು ತೂರಿದವರ ಪತ್ತೆಗಾಗಿ ತಂತ್ರಜ್ಞಾನ ಬಳಸಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಘಟನೆ ನಡೆದಾಗ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಕಡಿತವಾಗಿದ್ದರಿಂದ ಸಿಸಿ ಕ್ಯಾಮರಾ ಸೆರೆ ಹಿಡಿದಿರುವ ಫುಟೇಜ್‌ಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿಲ್ಲವಾದ್ದರಿಂದ ಪೊಲೀಸರು ಇತರ ಸಾರ್ವಜನಿಕರು ಮೊಬೈಲ್ ಫೋನ್‌ನಲ್ಲಿ ರೆಕಾರ್ಡ್ ಮಾಡಿ ಶೇರ್ ಮಾಡಿರುವ ಕ್ಲಿಪಿಂಗ್‌ಗಳು, ಫೋಟೋಗಳ ಆಧಾರದ ಮೇಲೆ ಕೃತ್ಯ ಎಸಗಿದವರ ಪತ್ತೆಗೆ ಕಾರ್ಯಾಚರಣೆ ಮಾಡುತ್ತಿರುವ ಸಿಸಿಬಿ ಪೊಲೀಸರು, ತಲೆಮರೆಸಿಕೊಂಡಿರುವ ಸಂಶಯಾಸ್ಪದ ಯುವಕರ ಮೇಲೆ ತೀವ್ರ ನಿಗಾ ಇರಿಸಿದ್ದಾರೆ.

ಠಾಣೆ ಮೇಲೆ ತೂರಿದ ಕಲ್ಲುಗಳ ಆಯ್ದು ಚೀಲಕಟ್ಟಿದ ಪೌರಕಾರ್ಮಿಕರು

ಮೈಸೂರು, ಫೆ.11– ಉದಯಗಿರಿ ಪೊಲೀಸ್ ಠಾಣೆ ಕಡೆಗೆ ಕಿಡಿಗೇಡಿಗಳು ತೂರಿದ್ದ ಕಲ್ಲುಗಳನ್ನು ಮಂಗಳವಾರ ಬೆಳಗ್ಗೆ ಪೌರಕಾರ್ಮಿಕರು ಸಂಗ್ರಹಿಸಿದರು.

ಠಾಣೆಯ ಕಾಂಪೌಂಡ್ ಒಳಗೆ, ಹೊರ ಆವರಣ ಹಾಗೂ ರಸ್ತೆಯಲ್ಲಿ ಬಿದ್ದಿದ್ದ ಕಲ್ಲುಗಳನ್ನು ಆಯ್ದು, ಚೀಲಗಳಲ್ಲಿ ತುಂಬಿ ಠಾಣೆ ಆವರಣದಲ್ಲಿಟ್ಟರು. ಕಲ್ಲುಗಳು, ಕೆಂಪು ಇಟ್ಟಿಗೆ ಹಾಗೂ ಸಿಮೆಂಟ್ ಇಟ್ಟಿಗೆ ಚೂರುಗಳು ರಸ್ತೆಯಲ್ಲೆಲ್ಲಾ ಪುಡಿ–ಪುಡಿಯಾಗಿದ್ದವು. ಅದನ್ನೆಲ್ಲಾ ಪೌರಕಾರ್ಮಿಕರು ಗುಡಿಸಿ, ಸ್ವಚ್ಛಗೊಳಿಸಿದರು.



ಹಲವು ವಾಹನಗಳು ಜಖಂ: ಇದ್ದಕ್ಕಿದ್ದಂತೆ ಸಾವಿರಾರು ಜನ ಠಾಣೆ ಮುಂಭಾಗ ಜಮಾಯಿಸಿ, ಠಾಣೆ ಕಡೆಗೆ ಕಲ್ಲು ತೂರಿದ್ದರಿಂದ ಪೊಲೀಸರೂ ತಕ್ಷಣಕ್ಕೆ ಪರಿಸ್ಥಿತಿ ನಿಯಂತ್ರಿಸಲಾಗಲಿಲ್ಲ. ಆ ವೇಳೆ ಪೊಲೀಸ್ ವಾಹನಗಳ ಜೊತೆಗೆ ಬೇರೆ ಬೇರೆ ಪ್ರಕರಣಗಳ ಸಂಬಂಧ ಠಾಣೆಗೆ ಬಂದಿದ್ದ ಸಾರ್ವಜನಿಕರ ವಾಹನಗಳು ಕಲ್ಲು ತೂರಾಟದಿಂದ ಜಖಂಗೊಂಡವು. ಗಾಜು ಪುಡಿಯಾಗಿರುವ ಕೆಲ ವಾಹನಗಳು ಇನ್ನೂ ಠಾಣೆ ಮುಂದೆಯೇ ನಿಂತಿವೆ.

ಹಲವರ ಗುರುತು ಪತ್ತೆ: ರಸ್ತೆಯಲ್ಲಿ ಸಾಗಿದ ಡಿಸಿಪಿ ಕಾರು ಹಾಗೂ ಠಾಣೆ ಮುಂಭಾಗ ನಿಲ್ಲಿಸಿದ್ದ ವಾಹನಗಳಿಗೂ ಕಲ್ಲು ತೂರಿದವರು ಹಾಗೂ ಠಾಣೆಗೆ ನುಗ್ಗಲು ಯತ್ನಿಸಿದವರ ಪತ್ತೆ ಕಾರ್ಯದಲ್ಲಿ ಪೊಲೀಸರು ■6ನೇ ಪುಟಕ್ಕೆ

ಕಲ್ಲು ತೂರಿದವರ ಪತ್ತೆಗೆ ತಂಡ ರಚನೆ

ಮೈಸೂರು, ಫೆ.11(ಆರ್‌ಕೆ)–ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಗೆ ಕಲ್ಲು ತೂರಿದವರನ್ನು ಪತ್ತೆ ಮಾಡಿ, ಬಂಧಿಸಲು ಸ್ಥಳೀಯ ಪೊಲೀಸರ ತಂಡ ರಚಿಸಲಾಗಿದೆ ಎಂದು ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ ತಿಳಿಸಿದ್ದಾರೆ. ಘಟನೆ ಹಿನ್ನೆಲೆಯಲ್ಲಿ ಉದಯಗಿರಿ ಠಾಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ, ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿ, ಗಲಾಟೆಯಲ್ಲಿ 7 ಮಂದಿ ಪೊಲೀಸರು ಗಾಯಗೊಂಡಿದ್ದು, ಹಲವು ವಾಹನಗಳು ಜಖಂಗೊಂಡಿವೆ. ಸಾಮಾಜಿಕ ಜಾಲ ತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ್ದ ವ್ಯಕ್ತಿಯನ್ನು ಬಂಧಿಸಿ ಕರೆತಂದಿದ್ದಾಗ ಆತನನ್ನು ಬಿಟ್ಟು ಬಿಡುತ್ತಾರೆಂಬ ವದಂತಿ ಹರಡಿದ ಪರಿಣಾಮ ಗುಂಪು ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದಾಗ ಅವರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಸಿಡಿಸಿದ್ದಾರೆ ಎಂದು ತಿಳಿಸಿದರು. ಈಗ ಉದಯಗಿರಿ ಠಾಣೆ ಬಳಿ ಪರಿಸ್ಥಿತಿ ಶಾಂತವಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲಿ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷರು, ವಿಪಕ್ಷ ನಾಯಕರ ಬದಲಾವಣೆ ಇಲ್ಲ

● ಹೈಕಮಾಂಡ್ ದೃಢ ನಿರ್ಧಾರ ● ಪಕ್ಷದ ಕಾರ್ಯಕಾರಿ ಕೋರ್ ಕಮಿಟಿಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಸಾಧ್ಯತೆ ● ಹಾಗಾಗಿ ಬಂಡಾಯ ನಾಯಕರಿಗೆ ಭಾರಿ ಹಿನ್ನಡೆ ಸಾಧ್ಯತೆ


ಬೆಂಗಳೂರು, ಫೆ.11(ಕೆಎಂಶಿ)– ರಾಜ್ಯ ಬಿಜೆಪಿಯಲ್ಲಿನ ಭಿನ್ನಮತಕ್ಕೆ ತೆರೆ ಎಳೆದಿರುವ ಪಕ್ಷದ ವರಿಷ್ಠರು, ರಾಜ್ಯಾಧ್ಯಕ್ಷ ಹಾಗೂ ವಿಧಾನಸಭಾ ಪ್ರತಿಪಕ್ಷ ನಾಯಕರ ಬದಲಾವಣೆ ಮಾಡದಿರಲು ತೀರ್ಮಾನಿಸಿದ್ದಾರೆ. ಆದರೆ, ಪಕ್ಷದ ಕಾರ್ಯಕಾರಿ ಮತ್ತು ಕೋರ್ ಕಮಿಟಿಯಲ್ಲಿ ಸಣ್ಣ–ಪುಟ್ಟ ಬದಲಾವಣೆ ಮಾಡಿ ಕೆಲವರನ್ನು ಕೈಬಿಟ್ಟು, ಕೆಲವರ ಸೇರ್ಪಡೆ ಮಾಡುವಂತೆ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸೂಚಿಸಿದ್ದಾರೆ.

ವರಿಷ್ಠರ ತೀರ್ಮಾನದ ಹಿನ್ನೆಲೆಯಲ್ಲಿ ನಾಳೆ ವಿಜಯೇಂದ್ರ ಪರ ಖಾಸಗಿ ಹೋಟೆಲ್‌ನಲ್ಲಿ ನಡೆಯಬೇಕಿದ್ದ ಬೃಹತ್ ಶಕ್ತಿ ಪ್ರದರ್ಶನ ಕಾರ್ಯಕ್ರಮ ರದ್ದುಗೊಂಡಿದೆ. ಕೋರ್ ಕಮಿಟಿ ಹಾಗೂ ಪದಾಧಿಕಾರಿಗಳ ಪಟ್ಟಿಯಲ್ಲಿ ಪರಿಷ್ಕರಣೆ ಮಾಡಿರುವ ವರಿಷ್ಠರು ಯಾರನ್ನು ಸೇರ್ಪಡೆ ಮಾಡಿದ್ದಾರೆಂಬ ಬಗ್ಗೆ ಇನ್ನೂ ಖಚಿತ ಮಾಹಿತಿ ದೊರೆತಿಲ್ಲ. ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿರುವ ವಿಜಯೇಂದ್ರ ಅವರು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಈ ಬೆಳವಣಿಗೆ ಆಗಿದೆ.

ರಾಜ್ಯಾಧ್ಯಕ್ಷರಾಗಿ ನೀವು ಎಲ್ಲರನ್ನೂ ವಿಶ್ವಾಸದಿಂದ ಕೊಂಡೊಯ್ದು ಪಕ್ಷವನ್ನು ಸಂಘಟಿಸುವಂತೆ ವಿಜಯೇಂದ್ರ ಅವರಿಗೆ ವರಿಷ್ಠರು ಕಿವಿಮಾತು ಹೇಳಿದ್ದಾರೆ. ಯಾವುದೇ ಪ್ರಮುಖ ನಿರ್ಧಾರ ಕೈಗೊಳ್ಳುವ ಮುನ್ನ ರಾಜ್ಯ ಉಸ್ತುವಾರಿ ಅವರ ಮಾರ್ಗದರ್ಶನ ಪಡೆದುಕೊಳ್ಳಬೇಕು. ಅಲ್ಲದೆ, ಮುಖಂಡರ ಜೊತೆ ನಿರಂತರ ಸಂಪರ್ಕ ಇಟ್ಟುಕೊಳ್ಳಿ, ಏಕಪಕ್ಷೀಯವಾಗಿ ನಿರ್ಧಾರಗಳನ್ನು ಕೈಗೊಳ್ಳಬೇಡಿ ಎಂದು ಸಲಹೆ ಮಾಡಿದ್ದಾರೆ. ವರಿಷ್ಠರ ಸಲಹೆಯನ್ನು ಸ್ವೀಕರಿಸಿರುವ ವಿಜಯೇಂದ್ರ, ತಕ್ಷಣವೇ ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷರ ಬದಲಾವಣೆಗೂ ಸಮ್ಮತಿಸಿದರೆಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಪಕ್ಷದ ವರಿಷ್ಠರ ಈ ನಿರ್ಧಾರದಿಂದ ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ■6ನೇ ಪುಟಕ್ಕೆ

ಮಹದೇಶ್ವರಬೆಟ್ಟದ ಸಂಪುಟ ಸಭೆ ಮತ್ತೆ ಮುಂದೂಡಿಕೆ

ಚಾಮರಾಜನಗರ: ಫೆ.17ರಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ನಿಗದಿಯಾಗಿದ್ದ ಸಚಿವ ಸಂಪುಟ ಸಭೆಯನ್ನು ಮುಂದೂಡಲಾಗಿದೆ. ಅಲ್ಲದೇ, ಫೆ. 16ರಂದು ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಿಗದಿಯಾಗಿದ್ದ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಬೃಹತ್ ಸಮಾವೇಶ ಮತ್ತು ಜಿಲ್ಲಾ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಕಾರ್ಯಕ್ರಮವೂ ಮುಂದಕ್ಕೆ ಹೋಗಿದೆ. ಈ ಕುರಿತು ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರಕಟಣೆ ಮೂಲಕ ಮಾಹಿತಿ ನೀಡಿದ್ದಾರೆ. ಕಾರಣಾಂತರಗಳಿಂದ ■6ನೇ ಪುಟಕ್ಕೆ





ಧನ ಗಣಪತಿ ಫೈನಾನ್ಸ್


ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ, ಉಳಿದ ಹಣ ತಕ್ಷಣ ಕೊಡುತ್ತೇವೆ.


ಒಂದು ಗ್ರಾಂ ಚಿನ್ನಕ್ಕೆ 8600

8884864444

ತಿರುಮಕೂಡಲು ಕುಂಭಮೇಳದ ತ್ರಿವೇಣಿ ಸಂಗಮದಲ್ಲಿ ವಾರಣಾಸಿ ಮಾದರಿ

ಗಂಗಾ ಪೂಜೆ; ಕಾವೇರಿ ದೀಪಾರತಿ





ವಾರಣಾಸಿ ಮಾದರಿ ಗಂಗಾಪೂಜೆ, ಕಾವೇರಿ ದೀಪಾರತಿ ಧಾರ್ಮಿಕ ಕೈಂಕರ್ಯ ಭಕ್ತಿಭಾವದಿಂದ ನೆರವೇರಿತು. ಈ ವೇಳೆ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಇನ್ನಿತರರಿದ್ದರು.

ತಿ.ನರಸೀಪುರ, ಫೆ.11– ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ 13ನೇ ಕುಂಭಮೇಳದ ಅಂಗವಾಗಿ ಮಂಗಳವಾರ ಸಂಜೆ ವಾರಣಾಸಿ ಮಾದರಿ ಗಂಗಾಪೂಜೆ, ಕಾವೇರಿ ದೀಪಾರತಿ ಧಾರ್ಮಿಕ ಕೈಂಕರ್ಯ ಭಕ್ತಿಭಾವದಿಂದ ನೆರವೇರಿತು. ವಾರಣಾಸಿಯಲ್ಲಿ ಗಂಗಾರತಿ ಮಾಡುವ ತಂಡವೇ ತ್ರಿವೇಣಿ ಸಂಗಮದಲ್ಲಿ ಕಾವೇರಿ ಆರತಿ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಮತ್ತಷ್ಟು ಕಳೆ ತಂದರು. ಈ ವೇಳೆ ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು, ಸಚಿವ ರಾಮಲಿಂಗಾರೆಡ್ಡಿ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ಉಪವಿಭಾಗಾಧಿಕಾರಿ ರಕ್ಷಿತ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಪುಷ್ಪ ಅಮರ್‌ನಾಥ್, ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ, ಜಯೇಂದ್ರಪುರಿ ಸ್ವಾಮೀಜಿ ಸೇರಿದಂತೆ ಸಾವಿರಾರು ಭಕ್ತರು ಕಾವೇರಿ ದೀಪಾರತಿಗೆ ಸಾಕ್ಷಿಯಾದರು.

ತಿರುಮಕೂಡಲಿನ ಗುರು ರಾಘವೇಂದ್ರಸ್ವಾಮಿ ಮಠದ ಮುಂಭಾಗದ ನದಿ ಮಧ್ಯ ನಿರ್ಮಿಸಿದ್ದ ಆಕರ್ಷಕ ವೇದಿಕೆಯಲ್ಲಿ ಭಕ್ತಿ ಗೀತೆಗಳ ಝೇಂಕಾರ, ಸಾಂಪ್ರದಾಯಿಕ ನೃತ್ಯ ಪ್ರದರ್ಶನದ ಜೊತೆಗೆ ಕಲಾವಿದರು ದೀಪಗಳನ್ನು ಬೆಳಗಿಸಿದರು. ಇದೇ ವೇಳೆ ಆಗಸದಲ್ಲಿ ಸಿಡಿಮದ್ದುಗಳ ಚಿತ್ತಾರ ಸೃಷ್ಟಿಯಾಗಿತ್ತು. ಭಕ್ತಿ ಪರವಶರಾಗಿದ್ದ ಭಕ್ತ ಸಮೂಹದಿಂದ ಜಯಘೋಷಗಳು ಕೇಳಿ ಬಂತು. ಇದೇ ಮೊದಲ ಬಾರಿಗೆ ಗಂಗಾರತಿ ವೀಕ್ಷಿಸಲು ಬೃಹತ್ ಎಲ್‌ಇಡಿ ಪರದೆ ಅಳವಡಿಸಲಾಗಿತ್ತು. ಕಾವೇರಿ ದೀಪಾರತಿ ವೀಕ್ಷಿಸಲು ನೆರೆದಿದ್ದ ಗಣ್ಯರಿಗೆ ದೀಪದ ಆರತಿ ನೀಡುವ ಮೂಲಕ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಯಿತು.

ಇದಕ್ಕೂ ಮೊದಲು ನದಿ ಮಧ್ಯೆ ನಿರ್ಮಿಸಲಾಗಿದ್ದ ವೇದಿಕೆ ಮೇಲೆ ಮೋಹನ್ ಡ್ಯಾನ್ಸ್ ಸ್ಟುಡಿಯೋ ಕಲಾವಿದರು ನೃತ್ಯ ಪ್ರದರ್ಶನ ಮಾಡುವ ಮೂಲಕ ಎಲ್ಲರನ್ನು ರಂಜಿಸಿದರು. ■6ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ, ಏನೂ ಕೆಲಸ ಮಾಡದೆ ದುಡಿಮೆ ಮಾಡೋ ಉದ್ಯೋಗ ಯಾವುದಾದ್ರೂ ಇದ್ರೆ ಹೇಳಪ್ಪ.

ಅಪ್ಪ : ನಂಗೆ ಗೊತ್ತಿಲ್ಲ ಮಗನೇ, ಕೆಲಸವನ್ನೇ ಮಾಡದೆ ಹಣ ಸಿಗೋಕೆ ಹೇಗೆ ಸಾಧ್ಯ?

ಮಗ : ಹಾಗಲ್ಲಪ್ಪ, ನನಗೆ ಕೆಲಸ ಇರಬಾರದು. ಬೇರೆಯವರೆಲ್ಲಾ ಅವರವರ ಕೆಲಸ ಮಾಡಿಕೊಂಡು ಹೋಗ್ತಾ ಇರಬೇಕು. ನಮಗೆ ಹಣ ಬರ್‍ತಾ ಇರಬೇಕು.

ಅಪ್ಪ : ಹಾಗಿದ್ದರೆ ಒಂದು ಸುಲಭ್ ಶೌಚಾಲಯ ಶುರು ಮಾಡು...!

ಮೈಸೂರು ಮಿತ್ರ

ಬುಧವಾರ, 12 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಹಳಸಿದ ಅನ್ನ ತಿನ್ನೋ ನಾಯಿಗೆ ಇರೋ ನಿಯತ್ತು
ಬಿಸಿ ಅನ್ನ ತಿನ್ನೋ ಮನುಷ್ಯನಿಗೆ ಇಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿರುವ ಮಾನ ನಿನಗೆ ಕೊಡುವುದು ಬಹುಮಾನ.

ನಿಮ್ಮ ಪತ್ರಗಳು

ಬನ್ನಿಮಂಟಪ ಎಲ್‌ಐಸಿ ವೃತ್ತಕ್ಕೆ ಅರ್ಜುನ ಆನೆ ವೃತ್ತ ಮರು ನಾಮಕರಣ ಬೇಡ

ಮಾನ್ಯರೆ,

ಮೈಸೂರಿನ ಬನ್ನಿಮಂಟಪ ಎಲ್‌ಐಸಿ ವೃತ್ತಕ್ಕೆ ಅಂಬಾರಿ ಆನೆಯಾಗಿದ್ದ 'ಅರ್ಜುನನ ವೃತ್ತ ಎಂದು ನಾಮಕರಣ ಮಾಡಲು ಮಹಾನಗರ ಪಾಲಿಕೆಗೆ ಪತ್ರ ಬರೆದಿದ್ದೇನೆಂದು ಮಾಧ್ಯಮಗಳಿಗೆ ಹೇಳಿರುವುದನ್ನು ತಿಳಿದು ಆಶ್ಚರ್ಯವಾಗಿದೆ. ಏಕೆಂದರೆ ಬನ್ನಿಮಂಟಪದ ಎಲ್‌ಐಸಿ ವೃತ್ತಕ್ಕೆ ಟಿ.ಎನ್.ನರಸಿಂಹಮೂರ್ತಿ ವೃತ್ತ ಎಂದು 20 ವರ್ಷಗಳ ಹಿಂದೆ ಮೈಸೂರು ಮಹಾನಗರ ಪಾಲಿಕೆ ನಾಮಕರಣ ಮಾಡಿದೆ.

ಟಿ.ಎನ್. ನರಸಿಂಹಮೂರ್ತಿ ಅವರು ಬನ್ನಿಮಂಟಪ ವಾಸಿಯಾಗಿದ್ದರು. ಸುಮಾರು 30 ವರ್ಷಗಳ ಕಾಲ ವಿಧಾನ ಪರಿಷತ್ ಸದಸ್ಯರಾಗಿ, ಉಪಸಭಾಪತಿಯಾಗಿ, ಸಭಾಪತಿಯಾಗಿ, ವಿರೋಧ ಪಕ್ಷದ ನಾಯಕರಾಗಿ, ಸಚಿವರಾಗಿ, ಮೈಸೂರು ನಗರಕ್ಕೆ ಅವರದೇ ಆದ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ರಾಜ್ಯದಲ್ಲಿಯೂ ಪ್ರಭಾವಿ ನಾಯಕರೆನಿಸಿಕೊಂಡಿದ್ದ ನರಸಿಂಹಮೂರ್ತಿ ಅವರು ಜಯಚಾಮರಾಜೇಂದ್ರ ಒಡೆಯರ್ ಅವರಿಗೂ ನಿಕಟವಾಗಿದ್ದರು. ಅಲ್ಲದೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸಂಸದರಾಗಲು ಶ್ರಮಿಸಿದ್ದರು. ಅಲ್ಲದೆ ಬನ್ನಿಮಂಟಪಕ್ಕೆ ಹೊಂದಿಕೊಂಡಿರುವ ಎಸ್.ಆರ್. ಮೊಹಲ್ಲಾದ ದಲಿತ ವಿದ್ಯಾರ್ಥಿ ನಿಲಯಕ್ಕೆ ಅನೇಕ ವರ್ಷಗಳ ಕಾಲ ಅಧ್ಯಕ್ಷರಾಗಿ ಸಾವಿರಾರು ಮಕ್ಕಳ ಶೈಕ್ಷಣಿಕತೆಗೆ ಕಾರಣರಾಗಿ ಅನೇಕ ದಲಿತ ಕುಟುಂಬಗಳ ಬಾಳಿಗೆ ದಾರಿದೀಪವಾಗಿದ್ದರು. ಅಲ್ಲದೆ ಡಾ. ಬಿ.ಆರ್. ಅಂಬೇಡ್ಕರ್, ಜಗಜೀವನರಾಂ ಅನುಯಾಯಿಯಾಗಿದ್ದರಿಂದ ನಾಯಕತ್ವದ ಮಹತ್ವವನ್ನು ಅರಿತ ಮೈಸೂರು ಮಹಾನಗರ ಪಾಲಿಕೆಯಲ್ಲಿ ಹಿಂದೆಯೇ ಚರ್ಚಿಸಿ ಕೌನ್ಸಿಲ್ ನಿರ್ಣಯ ಮಾಡಿ ಟಿ.ಎನ್. ನರಸಿಂಹಮೂರ್ತಿ ವೃತ್ತ ಎಂದು ನಾಮಕರಣ ಮಾಡಿದೆ. ಬಹುಶಃ ಸಂಸದರಿಗೆ ಅವರ ಬಗ್ಗೆ ಅಷ್ಟಾಗಿ ಮಾಹಿತಿ ಇಲ್ಲ ಎಂದು ಭಾವಿಸಿದ್ದೇನೆ.ಮಾಹಿತಿ ಕೊರತೆಯಿಂದ ಬನ್ನಿಮಂಟಪ ಎಲ್‌ಐಸಿ ಕಚೇರಿಯ ಎದುರಿಗಿರುವ ವೃತ್ತಕ್ಕೆ ಅಂಬಾರಿ ಆನೆ ಅರ್ಜುನ ಹೆಸರಿಡಲು ಮಹಾನಗರ ಪಾಲಿಕೆಗೆ ಪತ್ರ ಬರೆದಿದ್ದೇನೆಂದು ಹೇಳಿದ್ದಾರೆ.

ಮೈಸೂರು ಅರಮನೆಯಿಂದ ಬನ್ನಿಮಂಟಪದವರೆಗೂ ಸಮರ್ಪಕವಾಗಿ ಅಂಬಾರಿ ಹೊರುತ್ತಿದ್ದ ಅರ್ಜುನ ಆನೆ ಹೆಸರಿಡುವ ಇಚ್ಛೆ ನನಗೂ ಇದೆ. ಆದರೆ ಈಗಾಗಲೇ ನಾಮಕರಣವಾಗಿರುವ ಟಿ.ಎನ್. ನರಸಿಂಹಮೂರ್ತಿ ವೃತ್ತಕ್ಕೆ ಅರ್ಜುನ ಆನೆ ಹೆಸರಿಡುವುದು ಬೇಡ. ಅರಮನೆಯಿಂದ ಬನ್ನಿಮಂಟಪದವರೆಗೆ ಇರುವ ರಸ್ತೆಯಲ್ಲಿ ಅಂದರೆ ಹೈವೇ ವೃತ್ತಕ್ಕೆ ಅರ್ಜುನ ಆನೆ ವೃತ್ತ ಎಂದು ಹೆಸರಿಡಲಿ. ಈ ಬಗ್ಗೆ ಸಂಸದರು ಪುನರ್ ಪರಿಶೀಲಿಸಲಿ.

– ಎಂ. ಶಿವಣ್ಣ ಕೋಟೆ, ಮಾಜಿ ಸಚಿವರು, ಮೈಸೂರು.

ಕುಮಾರಸ್ವಾಮಿಯವರು ಎಲ್ಲಾ ಜಿಲ್ಲೆಗಳಲ್ಲೂ ಉದ್ಯೋಗ ಮೇಳ ನಡೆಸಲಿ

ಮಾನ್ಯರೆ,

ಕೇಂದ್ರ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿಯವರು ಕೇವಲ ಮಂಡ್ಯಕ್ಕೆ ಸೀಮಿತವಾಗದೇ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಉದ್ಯೋಗ ಮೇಳ ನಡೆಸಲಿ. ನಂತರ ಉಳಿದ ರಾಜ್ಯಗಳಿಗೆ ಉದ್ಯೋಗ ಮೇಳ ವಿಸ್ತರಿಸಲಿ. ಅದರಲ್ಲೂ ಹಿಂದುಳಿದ ಜಿಲ್ಲೆಗಳ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಮೇಳ ನಡೆಸಿದರೆ ಹಲವು ಬಡ ಕುಟುಂಬಗಳು ಚೇತರಿಸಿಕೊಳ್ಳುತ್ತವೆ. ಮೋದಿಯವರ ಸರ್ಕಾರ ಕುಮಾರಸ್ವಾಮಿ ಯವರಿಗೆ ಒಂದು ಒಳ್ಳೆಯ ಖಾತೆ ನೀಡುವ ಮೂಲಕ ಇವರ ಸೇವೆಯನ್ನು ಗುರುತಿಸಿದೆ. ಈ ಅವಕಾಶವನ್ನು ಪೂರ್ಣ ಪ್ರಮಾಣದಲ್ಲಿ ಕುಮಾರಸ್ವಾಮಿಯವರು ಬಳಸಿಕೊಳ್ಳಬೇಕು. ತಮ್ಮ ಪಕ್ಷ ಸಂಘಟನೆಯನ್ನು ಅನುಭವಿ ಹಿರಿಯರಿಗೆ ನೀಡಿ ಎಲ್ಲಾ ವಿಚಾರಗಳಿಗೆ ಅನಗತ್ಯ ಕಾಮೆಂಟ್‌ಗಳನ್ನು ಮಾಡದೇ ಕೊಟ್ಟಿರುವ ಖಾತೆಯನ್ನು ಸಮರ್ಥವಾಗಿ ನಿರ್ವಹಿಸಿದಲ್ಲಿ ಭವಿಷ್ಯದಲ್ಲಿ ಉತ್ತಮ ನಾಯಕನಾಗಿ ಬೆಳೆಯುವ ಅವಕಾಶಗಳು ವಿಫುಲವಾಗಿವೆ.

ಮೊದಲು ಶ್ರೀಯುತರು ಬೃಹತ್ ಕಂಪನಿಗಳಿಗೆ ಭೇಟಿ ನೀಡಿ ಕಂಪನಿ ಸಿಇಓಗಳೊಂದಿಗೆ ಉದ್ಯೋಗ ಅವಕಾಶ ಹಾಗೂ ದೇಶದ ಆರ್ಥಿಕ ಅಭಿವೃದ್ಧಿ ಬಗ್ಗೆ ಚರ್ಚಿಸಿ ನಂತರ ಉದ್ಯೋಗ ಮೇಳ ನಡೆಸಿದ್ದಲ್ಲಿ ಹಲವಾರು ನಿರುದ್ಯೋಗಿಗಳಿಗೆ ಕೆಲಸ ದೊರೆಯುತ್ತದೆ. ಉದ್ಯೋಗ ದೊಡ್ಡದಿರಲಿ, ಚಿಕ್ಕದಿರಲಿ ನಿರುದ್ಯೋಗಿಗೆ ಉದ್ಯೋಗ ದೊರೆತರೆ ಆ ಕುಟುಂಬ ನೆಮ್ಮದಿ ಜೀವನ ನಡೆಸುತ್ತದೆ. ನಿರುದ್ಯೋಗ ಸಮಸ್ಯೆಯು ನಿವಾರಣೆಯಾಗುತ್ತದೆ. ಈ ಖಾತೆಯಲ್ಲಿ ಅವಿರತವಾಗಿ ಶ್ರಮಿಸಿ ಯಶಸ್ಸನ್ನು ಕಂಡರೆ ಮೇಡ್ ಇನ್ ಇಂಡಿಯಾ ಎಂಬ ಮೋದಿಯವರ ಘೋಷವಾಕ್ಯವನ್ನು ಉಜ್ವಲಗೊಳಿಸಿ ಭಾರತ ಆರ್ಥಿಕತೆಯಲ್ಲಿ ಮುನ್ನಡೆ ಸಾಧಿಸಬಹುದು. ಕುಮಾರಸ್ವಾಮಿಯವರು ಇತ್ತ ಗಮನಹರಿಸಲಿ ಎಂಬುದು ನನ್ನ ಆಶಯ.

– ಬಿ.ಜಿ. ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

ಪಾದಚಾರಿ ಮಾರ್ಗ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಶಿವರಾಂಪೇಟೆ ಹೃದಯ ಭಾಗದಲ್ಲಿದ್ದು, ರಾಜಕಮಲ್ ಟಾಕೀಸಿನಿಂದ ಚಿಕ್ಕಗಡಿಯಾರದವರೆಗೆ ರಸ್ತೆ ಬಹಳ ಕಿರಿದಾಗಿದೆ. ಇಂತಹ ಕಿರಿದಾದ ರಸ್ತೆಯಲ್ಲಿ ಪ್ರತಿನಿತ್ಯ ವಾಹನ ದಟ್ಟಣೆ, ಜನಸಂದಣಿ ಜಾಸ್ತಿ ಇರುತ್ತದೆ. ಅಲ್ಲದೆ ಈ ರಸ್ತೆಯಲ್ಲಿ ತಳ್ಳು ಗಾಡಿಗಳು, ರಸ್ತೆ ಬದಿ ಹಣ್ಣಿನ ವ್ಯಾಪಾರಿಗಳಿಂದ ಪಾದಚಾರಿಗಳು, ವಾಹನ ಸವಾರರಿಗೆ ತುಂಬಾ ತೊಂದರೆಯಾಗಿದೆ. ಈ ರಸ್ತೆಯಲ್ಲಿನ ಅಂಗಡಿ ಮಾಲೀಕರು ಪಾದಚಾರಿ ಮಾರ್ಗಕ್ಕೆ ಪದಾರ್ಥಗಳನ್ನು ಇಟ್ಟು ವ್ಯಾಪಾರ ಮಾಡುತ್ತಾರೆ. ಇದರಿಂದ ಪಾದಚಾರಿಗಳು ಓಡಾಡಲು ತುಂಬಾ ತೊಂದರೆಯಾಗುತ್ತಿದೆ. ಇದರ ಬಗ್ಗೆ ಟ್ರಾಫಿಕ್ ಪೊಲೀಸರಾಗಲೀ, ಪಾಲಿಕೆ ಅಧಿಕಾರಿಗಳಾಗಲೀ ಕ್ರಮ ಕೈಗೊಳ್ಳುತ್ತಿಲ್ಲ. ಕಾಣದ ಕೈಗಳು ಅಂಗಡಿ ಮಾಲೀಕರಿಗೆ ಅಭಯ ಹಸ್ತ ನೀಡಿ ಫುಟ್‌ಪಾತ್ ವ್ಯಾಪಾರಕ್ಕೆ ಅನುಕೂಲ ಮಾಡುತ್ತಿದ್ದಾರೆ. ಪೊಲೀಸರು ಸರಿಯಾದ ಕ್ರಮ ಕೈಗೊಂಡರೆ ಜನಸಂಚಾರ ಮತ್ತು ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬಹುದು. ದೇವರಾಜ ಟ್ರಾಫಿಕ್ ಪೊಲೀಸರು ಕ್ರಮ ಕೈಗೊಳ್ಳುವಂತೆ ಈ ಮೂಲಕ ಮನವಿ.

–ಶಿವರಾಂಪೇಟೆ ನಿವಾಸಿಗಳು, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮುಮ್ಮಡಿ ಕೃಷ್ಣರಾಜ ವಿರಚಿತ ಗ್ರಹನಿಧಿ



ಮೈಸೂರು ಸಂಸ್ಥಾನವನ್ನು ಒಡೆಯರ್ ವಂಶದ ರಾಜರಿಂದ ಕಸಿದುಕೊಂಡು ಹದಿನೆಂಟನೆಯ ಶತಮಾನದಲ್ಲಿ ಹೈದರನೂ ಅವನ ಮಗ ಟಿಪ್ಪು ಸುಲ್ತಾನನೂ ಆಳಿದರು. ಆ ಶತಮಾನದ ಕೊನೆಯ ವರ್ಷದಲ್ಲಿ (ಕ್ರಿ.ಶ. 1799) ಶ್ರೀರಂಗಪಟ್ಟಣದಲ್ಲಿ ಬ್ರಿಟಿಷರೊಡನೆ ಯುದ್ಧ ಮಾಡುತ್ತಾ ಟಿಪ್ಪು ಸುಲ್ತಾನನು ಹತನಾದನು. ವಿಜಯಿಗಳಾದ ಬ್ರಿಟಿಷರು ಸಂಸ್ಥಾನವನ್ನು ಅದರ ನಿಜವಾದ ವಾರಸುದಾರರಾದ ಯದುವಂಶ ಸಂಜಾತರಿಗೇ ಕೊಡಬೇಕೆಂದು ತೀರ್ಮಾನಿಸಿದರು. ರಾಜಪುತ್ರರಾಗಿದ್ದ ಮುಮ್ಮಡಿ ಕೃಷ್ಣರಾಜರಿಗೆ ಆಗ ಕೇವಲ ಆರು ವರ್ಷ ವಯಸ್ಸು ಅವರ ತಂದೆ ಖಾಸಾ ಚಾಮರಾಜ ಒಡೆಯರ್ ಮೊದಲೇ ದಿವಂಗತರಾಗಿದ್ದರು. ತಾಯಿಯೂ ಬದುಕಿರಲಿಲ್ಲ. ಅಜ್ಜಿಯಾಗಿದ್ದ ಮಹಾರಾಣಿ ಲಕ್ಷಮ್ಮಣ್ಣಿಯವರ ಪಾಲನೆ ಪೋಷಣೆಗಳಲ್ಲೇ ಬೆಳೆದ ಮುಮ್ಮಡಿಯವರು ಇನ್ನೂ ಬಾಲಕನಾಗಿದ್ದಾಗ ಪಟ್ಟಾಭಿಷೇಕವಾಯಿತು. ದಿವಾನ್ ಪೂರ್ಣಯ್ಯನವರ ನೇತೃತ್ವದಲ್ಲಿ ಮಹಾರಾಣಿ ಲಕ್ಷಮ್ಮಣ್ಣಿಯವರೇ ರಾಜ್ಯಭಾರವನ್ನು ನಡೆಸಿದರು. 1810 ರಲ್ಲಿ ಮುಮ್ಮಡಿ ಕೃಷ್ಣರಾಜರಿಗೆ ಆಡಳಿತಾಧಿಕಾರ ಪ್ರಾಪ್ತವಾಯಿತು. ಅಷ್ಟು ಹೊತ್ತಿಗೆ ಯೋಗ್ಯ ಗುರುಗಳಿಂದ ಶಿಕ್ಷಣವನ್ನು ಪಡೆದಿದ್ದ ಮುಮ್ಮಡಿಯವರು ಕನ್ನಡದಲ್ಲೂ, ಸಂಸ್ಕೃತದಲ್ಲೂ ಪಾಂಡಿತ್ಯವನ್ನು ಗಳಿಸಿದ್ದರು. ಪ್ರಜಾವತ್ಸಲರೂ, ವಿದ್ಯಾಪ್ರೇಮಿಗಳೂ ಆಗಿದ್ದ ಅವರು ಕವಿಗಳಿಗೂ, ಕಲಾವಿದರಿಗೂ ಪೋಷಕರಾಗಿ ಕೀರ್ತಿಯನ್ನು ಗಳಿಸಿದರು. 1868ರವರೆಗೂ ಜೀವಿಸಿದ್ದ ಮಹಾರಾಜ ಮುಮ್ಮಡಿ ಕೃಷ್ಣರಾಜರು ದೇವಭಾಷೆಯಲ್ಲೂ ದೇಶಭಾಷೆಯಲ್ಲೂ ಗ್ರಂಥಗಳನ್ನು ರಚಿಸಿ ಶಾಶ್ವತ ಯಶಸ್ಸಿಗೆ ಭಾಜನರಾದರು.

ಶ್ರೀ ತತ್ತ್ವನಿಧಿ: ಸಂಸ್ಕೃತದಲ್ಲಿ ಮುಮ್ಮಡಿ ಕೃಷ್ಣರಾಜರು ರಚಿಸಿರುವ ಅದ್ಭುತ ಕೃತಿ ಶ್ರೀ ತತ್ತ್ವನಿಧಿ. ಇದರಲ್ಲಿ ವೇದ, ಆಗಮ, ಪುರಾಣ, ಇತಿಹಾಸ, ಶಾಸ್ತ್ರ, ಕಾವ್ಯ ಮುಂತಾದವುಗಳಿಂದ ಶ್ಲೋಕಗಳನ್ನು ಸಂಗ್ರಹಿಸಿ ತಾವೇ ವಿವರಣೆಗಳನ್ನು ಮಹಾರಾಜರು ಕೊಟ್ಟಿದ್ದಾರೆ. ಅರಮನೆಯ ಕಲಾವಿದರಿಂದ ಆ ಶ್ಲೋಕಗಳಲ್ಲಿರುವ ವರ್ಣನೆಗೆ ಅನುಗುಣವಾದ ಸುಂದರ ಚಿತ್ರಗಳನ್ನು ಬರೆಸಿದ್ದಾರೆ. ಹೀಗೆ ಈ ಗ್ರಂಥವು ಜಿಜ್ಞಾಸುಗಳಿಗೆ ಉಪಕಾರಕವಾಗಿದೆ. ಇದರಲ್ಲಿ ಒಂಬತ್ತು ಭಾಗಗಳಿದ್ದು ಒಂದೊಂದಕ್ಕೂ ನಿಧಿಯೆಂಬ ಹೆಸರನ್ನು ಕೊಡಲಾಗಿದೆ. ಶಕ್ತಿನಿಧಿ (ಚಾಮುಂಡಿ ಮುಂತಾದ ಶಕ್ತಿ ದೇವತೆಗಳನ್ನು ಪ್ರಧಾನವಾಗಿ ವರ್ಣಿಸುವ ಭಾಗ), ವಿಷ್ಣು ನಿಧಿ (ವಿಷ್ಣುವಿನ ನಾನಾ ರೂಪಗಳನ್ನೂ, ಅವತಾರಗಳನ್ನೂ ವರ್ಣಿಸುವ ಭಾಗ), ಶಿವನಿಧಿ (ಶಿವರೂಪಗಳನ್ನೂ, ತತ್ಸಂಬಂಧಿಗಳಾದ ಗಣೇಶ, ಸ್ಕಂದ ಮುಂತಾದವರನ್ನೂ ವರ್ಣಿಸುವ ಭಾಗ), ಬ್ರಹ್ಮನಿಧಿ (ಬ್ರಹ್ಮನ, ಸರಸ್ವತಿಯ ಮತ್ತು ವಿದ್ಯೆಗಳ, ಕಲೆಗಳ ವರ್ಣನೆ ಇರುವ ಭಾಗ), ಗ್ರಹನಿಧಿ, ವೈಷ್ಣವ ನಿಧಿ (ವಿಷ್ಣು ಸಂಬಂಧಿ ದಿವ್ಯಯಾತ್ರಾ ಸ್ಥಳಗಳನ್ನು ವರ್ಣಿಸುವ ಭಾಗ), ಶೈವನಿಧಿ (ಶಿವನಿಗೆ ಸಂಬಂಧಿಸಿದ ಪವಿತ್ರ ಸ್ಥಳಗಳು, ದ್ವಾದಶ ಜ್ಯೋತಿರ್ಲಿಂಗಗಳನ್ನು ವರ್ಣಿಸುವ ಭಾಗ), ಆಗಮ ನಿಧಿ (ಪಾಂಚರಾತ್ರ, ವೈಖಾನಸ ಇತ್ಯಾದಿ ಆಗಮಗಳ ಚಿಂತನೆಯನ್ನು ಪ್ರಸ್ತುತಪಡಿಸುವ ಭಾಗ) ಮತ್ತು ಕೌತುಕ ನಿಧಿ (ಮಹಾರಾಜರು ಅನ್ವೇಷಿಸಿದ ವಿವಿಧ ಆಟಗಳ ಸ್ವರೂಪ ವರ್ಣನೆಯ ಭಾಗ. ಇವು ಇಲ್ಲಿರುವ ನವನಿಧಿಗಳು. ಇವುಗಳಲ್ಲಿ ಶಕ್ತಿನಿಧಿ, ವಿಷ್ಣು ನಿಧಿ, ಶಿವನಿಧಿ, ಬ್ರಹ್ಮನಿಧಿ ಎಂಬ ನಾಲ್ಕು ಸಂಪುಟಗಳು ಇಂಗ್ಲಿಷ್ ಮತ್ತು ಕನ್ನಡ ಅನುವಾದಗಳೊಂದಿಗೆ ಪ್ರಾಚ್ಯ ವಿದ್ಯಾ ಸಂಶೋಧನಾಲಯದಿಂದ ಹಿಂದೆ ಪ್ರಕಟಿತವಾಗಿದ್ದುವು.

ಗ್ರಹನಿಧಿ : ಐದನೆಯದಾದ ಗ್ರಹನಿಧಿಯನ್ನು ಕನ್ನಡಾನುವಾದ ಸಹಿತವಾಗಿ ಪ್ರಾಚ್ಯ ವಿದ್ಯಾ ಸಂಶೋಧನಾಲಯವು ಪ್ರಕಟಿಸುತ್ತಿದೆ. ಕನ್ನಡಾನುವಾದವನ್ನು ಪ್ರಸಿದ್ಧ ವಾಗ್ಮಿಗಳೂ ನಾನಾ ಶಾಸ್ತ್ರಜ್ಞರೂ ಆಗಿರುವ ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ ತಲಕಾಡು ಅವರು ಮಾಡಿದ್ದಾರೆ. ಸಚಿತ್ರವಾದ ಈ ಗ್ರಂಥದ ಪ್ರಕಟನೆಗೆ ಅಪೇಕ್ಷಿತವಾದ ದ್ರವ್ಯ ಸಾಹಾಯ್ಯವನ್ನು (ಹಣದ ನೆರವನ್ನು) ಬೆಂಗಳೂರಿನ ಮಿಥಿಕ್ ಸೊಸೈಟಿ ಎಂಬ ಸಂಸ್ಥೆಯು ನೀಡಿ ಸಂಸ್ಕೃತಿ ಪ್ರಿಯರ ಕೃತಜ್ಞತೆಗೆ ಪಾತ್ರವಾಗಿದೆ. ಈ ನಿಧಿಯಲ್ಲಿ ಜ್ಯೋತಿಶ್ಶಾಸ್ತ್ರದ ಮುಖ್ಯ ವಿಷಯಗಳು ಅಡಕಗೊಂಡಿರುವುದರಿಂದ ಇಲ್ಲಿ ಅನುವಾದಕರ ಜ್ಯೋತಿಃಶಾಸ್ತ್ರ ಜ್ಞಾನವೂ ಅಭಿವ್ಯಕ್ತವಾಗಿದೆ. ಗ್ರಹನಿಧಿಯು ದೀರ್ಘ ವಿಚಾರಗಳನ್ನು ಒಳಗೊಂಡಿರುವುದರಿಂದ ಇದರಲ್ಲಿರುವ ಚಿತ್ರಗಳ ಸಂಖ್ಯೆ ಒಂಬೈನೂರೈವತ್ತಕ್ಕಿಂತ ಹೆಚ್ಚಾಗಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದೇನೆಂದರೆ ಮುಮ್ಮಡಿ ಕೃಷ್ಣರಾಜರ ಜ್ಞಾನವೈಶಾಲ್ಯ. ಇಷ್ಟೊಂದು ವಿಷಯಗಳನ್ನು ಕ್ರಮಶಃ ಹೇಳಬೇಕಾದರೆ ಅವರು ಎಷ್ಟು ಗ್ರಂಥಗಳನ್ನು ಓದಿ ಅರಗಿಸಿಕೊಂಡಿರಬೇಕು! ಅವರ ಅಧ್ಯಯನ ಶೀಲತೆಗೆ ನಾವೆಲ್ಲರೂ ನಮಸ್ಕಾರ ಸಹಸ್ರಗಳನ್ನು ಸಮರ್ಪಿಸಬೇಕಲ್ಲವೆ?

ಗ್ರಹಗಳು

ಶ್ರೀತತ್ತ್ವನಿಧಿಯ ಒಂದು ಭಾಗವಾಗಿರುವ ಗ್ರಹನಿಧಿಯಲ್ಲಿ ಸಂಪ್ರದಾಯಕ್ಕೆ ಅನುಗುಣವಾಗಿ–

ನಮಸ್ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ।
ಗುರುಶುಕ್ರ ಶನಿಭ್ಯಶ್ಚ ರಾಹವೇ ಕೇತವೇ ನಮಃ॥

ಎಂದು ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು ಎಂಬ ಒಂಬತ್ತು ಗ್ರಹಗಳನ್ನು ಪೂಜಿಸುವ ವಿಧಾನವನ್ನೂ, ಶಾಂತಿಗಳನ್ನೂ ಹೇಳಲಾಗಿದೆ.

ಆಧುನಿಕ ವಿಜ್ಞಾನಿಗಳು ಸೂರ್ಯನು ನಕ್ಷತ್ರ, ಚಂದ್ರನು ಉಪಗ್ರಹ. ಆದ್ದರಿಂದ ಇವು ಗ್ರಹಗಳಲ್ಲ. ರಾಹು ಮತ್ತು ಕೇತು ಎಂಬ ಯಾವ ಆಕಾಶಕಾಯವೂ ಇಲ್ಲ ಎಂದು ಹೇಳುತ್ತಾರೆ. ಭೂಮಿಯ ಮೇಲೆ ವಾಸಿಸುವ ಜೀವಿಗಳ ಮೇಲೆ ಪರಿಣಾಮವನ್ನು ಬೀರುವ ಮತ್ತು ಸಾಪೇಕ್ಷವಾಗಿ ಚಲನೆಯನ್ನು ಹೊಂದಿರುವುವು ಗ್ರಹಗಳು ಎಂಬುದು ಪ್ರಾಚೀನರ ದೃಷ್ಟಿ ಇರಬಹುದು. ಅದಕ್ಕೆ ಅನುಗುಣವಾಗಿ ಗ್ರಹನಿಧಿಯಲ್ಲಿ ವಿವರಣೆಗಳನ್ನು ಕಾಣುತ್ತೇವೆ. ಅಶ್ವಿನೀ ಮೊದಲಾಗಿ ರೇವತಿಯವರೆಗಿನ ಇಪ್ಪತ್ತೇಳು ನಕ್ಷತ್ರಗಳ, ಯೋಗಗಳ ಮತ್ತು ಕರಣಗಳ ಬಗೆಗೂ ಗ್ರಹನಿಧಿಯಲ್ಲಿ ಹೆಚ್ಚು ಮಾಹಿತಿ ಇದೆ.

ಶಿಕ್ಷಾ ವ್ಯಾಕರಣಂ ಛಂದೋ ನಿರುಕ್ತಂ ಜ್ಯೌತಿಷಂ ತಥಾ।
ಕಲ್ಪಶ್ಚೇತಿ ಷಡಂಗಾನಿ ವೇದಸ್ಯಾಹುರ್ಮನೀಕ್ಷಿಣಃ॥

ಎಂಬುದಕ್ಕೆ ಅನುಸಾರವಾಗಿ ಜ್ಯೋತಿಶಾಸ್ತ್ರವು ವೇದಾಂಗಗಳಲ್ಲಿ ಒಂದು ವೇದೋಕ್ತವಾದ ಯಜ್ಞಗಳನ್ನು ನಿಯತವಾದ ಋತುವಿನಲ್ಲಿ ನಿಶ್ಚಿತ ಕಾಲದಲ್ಲಿ ಮಾಡಬೇಕು. ಆ ಕಾಲವನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳಲು ಜ್ಯೋತಿಶ್ಶಾಸ್ತ್ರವು ಬೇಕು. ಜ್ಯೋತಿಸ್ಸುಗಳ ಅಧ್ಯಯನ ಖಗೋಳ ವಿಜ್ಞಾನದ ಬೆಳವಣಿಗೆಗೆ ಕಾರಣವಾಯಿತು. ತನ್ಮೂಲಕ ನಮ್ಮ ದೇಶದಲ್ಲಿ ಅಂಕ ಗಣಿತ, ಜ್ಯಾಮಿತಿ, ತ್ರಿಕೋಣ ಮಿತಿಗಳೂ ಬೆಳೆದುವು.

ನಮ್ಮ ದೇಶದಲ್ಲಿ ಪ್ರಭವಾದಿ ಅಕ್ಷಯಾಂತವಾದ ಅರುವತ್ತು ವರ್ಷಗಳ ಗಣನೆಯಿದೆ. ಒಂದೊಂದು ವರ್ಷದ ರಾಜ, ಮಂತ್ರಿ, ಸಸ್ಯಾಧಿಪತಿ ಮುಂತಾದ ನಾಯಕರ ಗಣನೆಯಿದೆ. ಇವೆಲ್ಲವನ್ನೂ ಗ್ರಹನಿಧಿಯಲ್ಲಿ ಮಹಾರಾಜರು ವಿವರಿಸಿದ್ದಾರೆ. ಆರು ಋತುಗಳಾದ ವಸಂತ, ಗ್ರೀಷ್ಮ, ವರ್ಷಾ, ಶರತ್, ಹೇಮಂತ, ಶಿಶಿರ ಎಂಬವು ಪ್ರಕೃತಿಯ ಮೇಲೂ ಮನುಷ್ಯರ ಮೇಲೂ, ಬೆಳೆಗಳ ಮೇಲೂ ಬೀರುವ ಪ್ರಭಾವ ಸುವಿದಿತ. ಆರೋಗ್ಯ ಪಾಲನೆಗಾಗಿಯೂ ಇವುಗಳ ಜ್ಞಾನ ಅಪೇಕ್ಷಿತ. ಈ ಕಾಲದಲ್ಲಿ ಮಾಡಬೇಕಾದ ಧಾರ್ಮಿಕ ಕಾರ್ಯಗಳನ್ನೂ ಮಹಾರಾಜ ಮುಮ್ಮಡಿಯವರು ಗ್ರಹನಿಧಿಯಲ್ಲಿ ತಿಳಿಸಿದ್ದಾರೆ.

ಅಶ್ವಿನ್ಯಾದಿ ನಕ್ಷತ್ರಗಳಲ್ಲಿ, ಮೇಷಾದಿ ದ್ವಾದಶ ರಾಶಿಗಳಲ್ಲಿ ಹುಟ್ಟಿದ ಜನರ ಗುಣಗಳನ್ನೂ ಸ್ವಭಾವಗಳನ್ನೂ ಮುಮ್ಮಡಿಯವರು ಹೇಳಿದ್ದಾರೆ. ಇದು ಎಷ್ಟು ವೈಜ್ಞಾನಿಕವೋ ತಿಳಿಯದು. ಶಾಸ್ತ್ರಗಳಲ್ಲಿ ಹೇಳಿರುವುದನ್ನು ಅವರೂ ಪುನರುಚ್ಚರಿಸಿದ್ದಾರೆ ಎನ್ನಬಹುದು.

ಮುಮ್ಮಡಿ ಕೃಷ್ಣರಾಜ ಒಡೆಯರು ಪ್ರಾಣಿಶಾಸ್ತ್ರ (Zoology) ದಲ್ಲೂ ಸಾಕಷ್ಟು ಜ್ಞಾನವನ್ನು ಪಡೆದಿದ್ದರೆಂದು ಹೇಳಬೇಕು. ನಾನೂರು ಚಿತ್ರಗಳಲ್ಲಿ ಅನೇಕ ಪ್ರಾಣಿ–ಪಕ್ಷಿ–ಸರೀಸೃಪ–ಕೀಟ ಮುಂತಾದ ಜೀವಿಗಳನ್ನು ಅವರು ತೋರಿಸಿದ್ದಾರೆ. ಅದೇ ರೀತಿಯಾಗಿ ಸಸ್ಯಶಾಸ್ತ್ರ (Botany) ದಲ್ಲೂ ಅವರಿಗೆ ಆಸಕ್ತಿಯಿತ್ತು. ಕಾಯಿ, ಹಣ್ಣು, ಕಂದ, ಮೂಲ ಇತ್ಯಾದಿಗಳನ್ನೆಲ್ಲ ಅವರು ಉಲ್ಲೇಖಿಸಿದ್ದಾರೆ.

ಒಂದು ವಿಧದಲ್ಲಿ ಶ್ರೀ ತತ್ತ್ವನಿಧಿಯು ಸಚಿತ್ರ ವಿಶ್ವಕೋಶ. ಮುಮ್ಮಡಿ ಕೃಷ್ಣರಾಜರು ತಮ್ಮ ಜೀವಿತಕಾಲದ ಯಾವ ದಿನವನ್ನೂ ವ್ಯರ್ಥ ಮಾಡದೆ ಜ್ಞಾನಾರ್ಜನೆಗಾಗಿಯೂ, ಗ್ರಂಥ ರಚನೆಗಾಗಿಯೂ ವಿನಿಯೋಗಿಸಿದುದರಿಂದ ಕನ್ನಡ–ಸಂಸ್ಕೃತ ಸಾಹಿತ್ಯಗಳಿಗೆ ಸಿರಿವಂತಿಕೆಯನ್ನು ತಂದುಕೊಟ್ಟು ಎಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಎಲ್ಲ ಜನರೂ ಅವರ ಅಪಾರ ಜ್ಞಾನ–ಪ್ರಜಾ ವಾತ್ಸಲ್ಯಗಳ ಪರಿಚಯವನ್ನು ತಿಳಿಯಲು ಅನುಕೂಲವಾಗುವಂತೆ ಈ ಗ್ರಂಥದ ಕನ್ನಡಾನು ಸಹಿತವಾದ ಸುಂದರ ಮುದ್ರಣವಾಗಿ ಇಂದು (12.2.2025) ಒಂದು ಸಂಪುಟ ಗ್ರಹನಿಧಿ ಪ್ರಕಟಗೊಳ್ಳುತ್ತಿದೆ. ಉಳಿದ ನಾಲ್ಕು ಸಂಪುಟಗಳ ಮುದ್ರಣಕ್ಕಾಗಿ ಮತ್ತು ಪ್ರಕಟನೆಗಾಗಿಯೂ ಆರ್ಥಿಕ ನೆರವನ್ನು ನೀಡಲು ಬೆಂಗಳೂರಿನ ಮಿಥಿಕ್ ಸೊಸೈಟಿಯವರು ಮುಂದೆ ಬಂದಿರುವುದು ದೇವಿ ಸರಸ್ವತಿಯ ಉಲ್ಲಾಸಕ್ಕೆ ಕಾರಣವಾಗಿದೆ. ಗ್ರಹನಿಧಿಯನ್ನು ಮಹಾರಾಣಿ ಪ್ರಮೋದಾದೇವಿ ಅವರು ಬಿಡುಗಡೆ ಮಾಡಿ ಲೋಕಾರ್ಪಣೆ ಮಾಡಲು ಒಪ್ಪಿದಿರುವುದು ಅತ್ಯಂತ ಉಚಿತವಾಗಿದೆ. ಇದೆಲ್ಲ ಸಂಸ್ಕೃತಿಪ್ರಿಯರಿಗೆ ಸಂಭ್ರಮದ ಸಮಯ. ಇದಕ್ಕೆ ಕಾರಣರಾದ ಅನುವಾದಕ ಡಾ. ಟಿ.ವಿ. ಸತ್ಯನಾರಾಯಣರನ್ನೂ, ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಪಿ.ಮಧುಸೂದನ್ ಆಚಾರ್ಯರನ್ನೂ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್‌ರನ್ನೂ ಅಭಿನಂದಿಸೋಣ.



ಸಂಗ್ರಹ ಚಿತ್ರ

ಗ್ರಾಮೀಣ ಸಂಸ್ಕೃತಿ ಬಿಂಬಿಸುವ 'ಬನ್ನೂರು ಬಂಡಿ ಜಾತ್ರೆ'

ಇಂದು ಶ್ರೀಹೇಮಾದ್ರಾಂಬ ದೇವಿಯ ಸುಪ್ರಸಿದ್ಧ 'ಬನ್ನೂರು ಬಂಡಿ ಜಾತ್ರೆ'



ಭತ್ತ ಮತ್ತು ಕಬ್ಬಿನ ಬೆಳೆಗೆ ನಾಡಿನಾದ್ಯಂತ ಹೆಸರಾಗಿರುವ ಬನ್ನೂರಿನ ಧ್ಯೇಯವಾಕ್ಯವೇ 'ಹಸಿಬತ್ತ ಬಿಸಿಬೆಲ್ಲ'. ಬಹುಪಾಲು ಬೇಸಾಯಗಾರರೇ ಇರುವ ಇಲ್ಲಿ ಒಂದು ರೀತಿ ಕಬ್ಬು ಮತ್ತು ಭತ್ತವನ್ನು ಬೆಳೆಯದ ರೈತರೇ ಇಲ್ಲವೆನ್ನಬಹುದು. ಇತರ ಬೆಳೆಗಳಿದ್ದರೂ ಅವು ಗೌಣ. ಭತ್ತ–ಕಬ್ಬುಗಳೇ ಇಲ್ಲಿ ಪ್ರಧಾನ ಬೆಳೆ. ಮುಖ್ಯವಾಗಿ ಇವೆರಡು ಬೆಳೆಗಳು ಬನ್ನೂರು ರೈತಾಪಿ ಜನರ ಉಸಿರಾಗಿದ್ದು ಅವರ ಬದುಕಿನ ಹಸಿರೂ ಸಹ ಆಗಿದೆ. ತಿ.ನರಸೀಪುರ ತಾಲೂಕಿನ ಬಹು ವೈಶಿಷ್ಟ್ಯ ಹೋಬಳಿ ಕೇಂದ್ರ ಬನ್ನೂರು. ಜೀವನದಿ ಕಾವೇರಿ ಸೆರಗಿನಲ್ಲಿರುವ ಈ ಗ್ರಾಮ ಪೌರಾಣಿಕ, ಚಾರಿತ್ರಿಕ, ಜನಪದೀಯವಾಗಿ ಹಲವು ಮಹತ್ತುಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಸುವರ್ಣಯುಗವನ್ನು ಕಂಡ ವಿಜಯನಗರ ಸಾಮ್ರಾಜ್ಯದ ರತ್ನ ಸಿಂಹಾಸನವನ್ನೇರಿದ ಏಕೈಕ ಯತಿವರ್ಯರೆಂಬ ಗೌರವಕ್ಕೆ ಭಾಜನರಾಗಿದ್ದ ವ್ಯಾಸರಾಯರ ಅರ್ಥಾತ್ ವ್ಯಾಸತೀರ್ಥರ ಜನ್ಮಸ್ಥಳವಿದು. ಇವತ್ತಿಗೂ ಇದಕ್ಕೆ ಪೂರಕವಾದ ಅನೇಕ ಐತಿಹ್ಯಗಳು ಸಾಕಷ್ಟು ಇಲ್ಲಿವೆ. ಭರತ ಖಂಡದ ವಿವಿಧ ಭಾಗಗಳಲ್ಲಿ ಒಟ್ಟು 732 ಆಂಜನೇಯ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ವ್ಯಾಸರಾಯರೇ ತಮ್ಮ ಜನ್ಮಸ್ಥಳದಲ್ಲಿ ಸ್ವತಃ ತಾವೇ ಸ್ಥಾಪಿಸಿರುವ ಜನ್ಮಾಂಜನೇಯ ದೇವಸ್ಥಾನ ಇಲ್ಲಿದ್ದು, ಇಷ್ಟೊಂದು ಐತಿಹಾಸಿಕ ಮತ್ತು ಪೌರಾಣಿಕ ಮಹತ್ವವಿರುವ ವಹ್ನಿಪುರವೆಂಬ ಬನ್ನೂರಿನಲ್ಲಿ ತಾಯಿ ಹೇಮಾ ರಾಮದೇವಿಯ ಪೂಜಾ ಮಹೋತ್ಸವದ ದ್ಯೋತಕವಾಗಿದೆ ಬನ್ನೂರು ಬಂಡಿ ಜಾತ್ರೆ.

"ಸ್ವರ್ಣಮೂರ್ತಿ ಲತಾತನ್ವಿಟ
ನಾಬೌ ಶ್ರೀ ಚಕ್ರಮೇವಚಟಟ
ವಾಮ ಹಸ್ತ ಚಕ್ರಧರೇ ಟ
ದಕ್ಷಿಣೇನ ವರ ಪ್ರದೇ ಟಟ
ವಿದ್ಯಾರಣ್ಯಾರ್ಚಿತೇ ದೇವಿ ಟ
ಸ್ವರ್ಣವೃಷ್ಟಿ ಪ್ರದಾಯಿನೇ ಟಟ
ವಹ್ನಿಪುರ ಸ್ಥಿತೇ ದೇವಿ ಟ ಹೇಮಾದ್ರಿ
ನಾಮಧಾರಿಣೇ ಟಟ "

ಹೇಮಾದ್ರಿ ಬನ್ನೂರಿಗೆ ಬಂದ ಬಗೆ: ಹೇಮಾದ್ರಮ್ಮ ಮೂಲತಃ ಹೆಮ್ಮಿಗೆ ಗ್ರಾಮದಿಂದ ಬಂದು ಬನ್ನೂರಿನಲ್ಲಿ ನೆಲೆನಿಂತ ದೇವಿ. ಈ ತಾಯಿ ತಿರುಮಕೂಡಲು ನರಸೀಪುರದ ಬಳಿಯ ಹೆಮ್ಮಿಗೆ ಗ್ರಾಮದಲ್ಲಿ ಚಿನ್ನದ ಮೂರ್ತಿ ರೂಪದಲ್ಲಿದ್ದ ತಾಯಿ ವಿಗ್ರಹವನ್ನು ಏಳು ಮಂದಿ ಕಳ್ಳರು ಕದ್ದುಕೊಂಡು ಅದನ್ನು ಬನ್ನೂರಿಗೆ ಬರುತ್ತಾರೆ. ಹೀಗೆ ಬಂದವರೇ ಸುರಕ್ಷಿತ ಜಾಗದಲ್ಲಿ ಅದನ್ನು ಕೆಚ್ಚಿ ಹಂಚಿಕೊಳ್ಳಲು ಮುಂದಾಗುತ್ತಾರೆ. ಆದರೆ ಆಗ ಯಾರೋ ಸುಳಿದಂತೆ ಅವರಿಗೆ ಭಾಸವಾಗುತ್ತದೆ. ಹಾಗಾಗಿ ಮುಂದೆ ಮುಂದೆ ಹೋಗುತ್ತಾರೆ. ಕೊನೆಗೆ ಈಗ ದೇವಿತೋಪು ಎಂದು ಕರೆಯಲ್ಪಡುವ ಬನ್ನೂರು ಸಮೀಪದ ತೋಪಿಗೆ ನುಗ್ಗುತ್ತಾರೆ. ಅಲ್ಲಿ ಹರಿಯುತ್ತಿದ್ದ ಕಾವೇರಿ ನದಿಯ ಮಧ್ಯ ಭಾಗದಲ್ಲಿದ್ದ ಒಂದು ಬೃಹತ್ ಕಲ್ಲು ಬಂಡೆಯ ಮೇಲೆ ಕೂತು, ಹೇಮಾದ್ರಮ್ಮನ ಚಿನ್ನದ ವಿಗ್ರಹವನ್ನು ಚೂರು ಮಾಡಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಹೀಗೆ ದೇವಿಯ ವಿಗ್ರಹವನ್ನು ಒಡೆಯುವಾಗ ಕೈಜಾರಿ ನದಿಯ ಮಡುವಿಗೆ ಬೀಳುತ್ತದೆ. ಆಗ ಏಳು ಮಂದಿ ಕಳ್ಳರೂ ಮಡುವಿಗೆ ಹಾರುತ್ತಾರೆ. ಕೊನೆಗೆ ಮೇಲೆ ಬರಲಾಗದೆ ಅಲ್ಲಿಯೇ ಮರಣವನ್ನಪ್ಪುತ್ತಾರೆ. ಹೀಗೆ ಕಳ್ಳರಿಂದ ಪಾರಾಗಿ ನದಿಯಲ್ಲಿ ಮುಳುಗಿದ ಹೇಮಾದ್ರಮ್ಮ, ಅದೇ ದಿನ ರಾತ್ರಿ ಊರ ಗೌಡರ ಕನಸಿಗೆ ಬಂದು ತನ್ನ ವೃತ್ತಾಂತ ಹೇಳಿ ತಾನು ನಿಮ್ಮೂರಿನಲ್ಲಿ ನೆಲೆಸಬೇಕೆಂದರೆ ಹೆಜ್ಜೆಗೊಂದು ಮನುಷ್ಯನ ತಲೆಯನ್ನು ಬಲಿ ಕೊಡಬೇಕೆಂದು ಹೇಳುತ್ತಾಳೆ. ಆಗ ಊರಗೌಡರು ಚಿಂತಾಕ್ರಾಂತರಾಗುತ್ತಾರೆ.

ಗೌಡರ ಚಿಂತೆಯನ್ನು ಕಂಡ ದೇವಿ ಭಕ್ತನೊಬ್ಬ ನಮ್ಮೂರಿಗೆ ಒಳ್ಳೆಯದಾಗುವುದಾದರೆ ದೇವಿಗೆ ತನ್ನ ತಲೆಯನ್ನು ಕೊಡುವುದಾಗಿ ತಕ್ಷಣವೇ ತನ್ನ ಶಿರವನ್ನು ಕತ್ತರಿಸಿ ದೇವಿಗೆ ಸಮರ್ಪಿಸುತ್ತಾನೆ. ಕೂಡಲೇ ಅವನು ಕತ್ತರಿಸಿದ ಶಿರವು ಸಿಡಿದು, ಬನ್ನೂರಿನ ಹೊರ ಭಾಗಕ್ಕೆ ಹೋಗಿ ಬೀಳುತ್ತದೆ. ಹೀಗೆ ಅವನ ಶಿರ ಬಿದ್ದ ಸ್ಥಳದಲ್ಲಿ 'ಸಿಡಿದಲೆ ವೀರ' ಗದ್ದಿಗೆ ಸೃಷ್ಟಿಯಾಗುತ್ತದೆ. ಈ ಕಾರಣಕ್ಕೆ ಅಲ್ಲಿ 'ಸಿಡಿದಲಯ್ಯನ ಹಬ್ಬ' ಕೂಡ ಪ್ರತಿವರ್ಷ ಆಚರಣೆಯಲ್ಲಿದೆ. ಆ ದೈವ ಭಕ್ತನ ಭಕ್ತಿಗೆ ಮೆಚ್ಚಿದ ಹೇಮಾದ್ರಿ ದೇವಿ ಸಂತಸಗೊಂಡು ನನಗೆ ನರರ ಶಿರಬಲಿ ಬೇಡವೆನ್ನುತ್ತಾಳೆ. ಆಗ ಊರ ಗೌಡರು ಎಳನೀರು ತುಂಬಿದ ತೆಂಗಿನ ಕಾಯಿಗಳನ್ನು ಹೆಜ್ಜೆಗೊಂದು ನೀಡುವುದಾಗಿ ಕೈ ಮುಗಿದು ಬೇಡಿ, ದೇವಿಯು ಬನ್ನೂರಿನಲ್ಲಿ ನೆಲೆಸುವಂತೆ ಮಾಡುತ್ತಾರೆ. ಹಾಗೆಯೇ ಆ ಭಕ್ತನ ಪರಮ ಭಕ್ತಿಯ ಪರಾಕಾಷ್ಠೆಗೆ ದೇವಿ ಪರವಶಳಾಗಿ ತನ್ನ ಭಕ್ತನಿಗೆ ಏನು ವರಬೇಕೆಂದು ಕೇಳುತ್ತಾಳೆ. ಪ್ರತಿ ವರ್ಷ ನೀನು ನಮ್ಮ ಸಮುದಾಯಕ್ಕೆ ಬಂದು ನಮ್ಮಲ್ಲಿ ಊಟ ಮಾಡಿ ಹರಸಬೇಕೆಂದು ಕೋರುತ್ತಾನೆ. ದೇವಿ ತಥಾಸ್ತು ಎನ್ನುತ್ತಾಳೆ. ಅದರಂತೆ ಇವತ್ತಿಗೂ ಕೂಡ ಪ್ರತಿ ವರ್ಷದ ಬಂಡಿ ಹಬ್ಬದಲ್ಲೂ ಮೊದಲ ನೈವೇದ್ಯ ಆ ಭಕ್ತನ ಸಮುದಾಯದ್ದೇ ಆಗಿದ್ದು, ಇಂದಿಗೂ ಹಾಗೆಯೇ ನಡೆದುಕೊಂಡು ಬರುತ್ತಿದೆ. ಇಲ್ಲಿ ದೇವಿಗೆ ಆ ಭಕ್ತನ ಸಮುದಾಯದ್ದೇ ಅಗ್ರಪೂಜೆ. ಹೀಗೆ ಬನ್ನೂರಿನಲ್ಲಿ ನೆಲೆನಿಂತ ಹೇಮಾದ್ರಮ್ಮ ದೇವಿಗೆ ಅಂದಿನಿಂದ ಪ್ರತಿವರ್ಷ ಮಾಘಮಾಸ ಹುಣ್ಣಿಮೆಯ ದಿನದಿಂದ ಸುಮಾರು ಒಂದು ವಾರ ಕಾಲ ಬನ್ನೂರಿನಲ್ಲಿ ಜಾತ್ರೆಯ ಪೂಜಾ ಮಹೋತ್ಸವ ಜರುಗುತ್ತದೆ. ಈ ಸಂದರ್ಭದಲ್ಲಿ ನಡೆಯುವ 'ಬನ್ನೂರು ಬಂಡಿ' ಉತ್ಸವ ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿದೆ.

ಹಳ್ಳಿಕಾರ್ ತಳಿ ಉಳಿಸಲು ಸಂಕಲ್ಪ: ವಿಶೇಷವಾಗಿ ಬನ್ನೂರು ಬಂಡಿ ಜಾತ್ರೆಯಲ್ಲಿ ದನಗಳ ಜಾತ್ರೆ ನಡೆಯುತ್ತಿದ್ದು ಈ ವರ್ಷ ಗ್ರಾಮೀಣ ಸೊಗಡಿನ ಹಳ್ಳಿಕಾರ್ ತಳಿಯ ದನಗಳ ಜಾತ್ರೆ ನಡೆಯುತ್ತಿದೆ. "ಹಳ್ಳಿಕಾರ್ ಉಳಿಸಿ, ಹಳ್ಳಿಕಾರ್ ಬೆಳೆಸಿ" ಘೋಷಣೆಯಡಿಯಲ್ಲಿ ಆಯೋಜಿಸಿರುವ ಈ ದನಗಳ ಜಾತ್ರೆಯಲ್ಲಿ ಅಳಿವಿನ ಅಂಚಿನಲ್ಲಿರುವ ಹಳ್ಳಿಕಾರ್ ತಳಿಯನ್ನು ಪುನಶ್ಚೇತನಗೊಳಿಸುವ ಸಲುವಾಗಿ ಹಸುಗಳ ವಿಭಾಗ, ಬೀಜದ ಹೋರಿಗಳ ವಿಭಾಗ ಮತ್ತು ಎತ್ತುಗಳ ವಿಭಾಗದಲ್ಲಿ ಸ್ಪರ್ಧೆಗಳನ್ನು ಶ್ರೀಹೇಮಾದ್ರಾಂಬ ಜಾತ್ರಾ ಮಹೋತ್ಸವ ಸಮಿತಿಯಿಂದ ನಡೆಸಲಾಗುತ್ತಿದ್ದು ವಿಜೇತರಿಗೆ ಬಹುಮಾನಗಳನ್ನು ನೀಡಲಾಗುತ್ತಿದೆ. ಇದು ಈ ವರ್ಷದ ಹೇಮಾದ್ರಾಂಬ ಜಾತ್ರೆಯ ಬಂಡಿ ಉತ್ಸವದ ವಿಶೇಷ ಆಕರ್ಷಣೆಯಾಗಿದೆ.

ಬನ್ನೂರು ಬಂಡಿ ಜಾತ್ರೆಯದೇ ಒಂದು ವಿಶೇಷತೆ. ಇದನ್ನು ಕಣ್ಣಾರೆ ಕಂಡು ಆಸ್ವಾದಿಸಿದಾಗಲೇ ಇದರ ಗ್ರಾಮೀಣ ವೈಭವ, ವೈಭೋಗ ಅರಿವಾಗುವುದು. ಸಂಪ್ರದಾಯದಂತೆ ಬನ್ನೂರಿನ ಪ್ರತಿಯೊಂದು ಜಾತಿ, ಜನಾಂಗವೂ ಸುಮಾರು 2 ವಾರಗಳ ಕಾಲ ಸಂಪೂರ್ಣವಾಗಿ ಮಾಂಸಾಹಾರ ತ್ಯಜಿಸಿರುತ್ತಾರೆ. ಜಾತ್ರೆ ಸಂದರ್ಭದಲ್ಲಿ ಎಣಬಗಾರರೆಂಬ ನಾಮಾಂಕಿತ ಹೊಂದಿರುವ ದೇವಿಯ ಭಕ್ತರ ಒಂದು ವರ್ಗದ ಜನರಂತೂ ಹೋಟೆಲ್‌ಗಳು ಸೇರಿದಂತೆ ಬೇರೆಯವರ ಮನೆಯಲ್ಲಿ ಒಂದು ತೊಟ್ಟು ನೀರನ್ನು ಸಹ ಕುಡಿಯುವಂತಿಲ್ಲ. ಅಂತಹ ಕಟ್ಟುನಿಟ್ಟಿನ ಹಬ್ಬವಿದು.

ವ್ಯಾಸ ಪೂರ್ಣಿಮೆಯ ಹಿಂದಿನ ದಿನ ಹಿಂದೆ ತನ್ನ ತಲೆಯನ್ನೇ ದೇವಿಗೆ ಅರ್ಪಿಸಿದ್ದ ಮಹಾಭಕ್ತನ ಸಮುದಾಯದವರು ದೇವಿಯನ್ನು ತಮ್ಮಲ್ಲಿಗೆ ಭೋಜನಕ್ಕೆ ಆಹ್ವಾನಿಸುತ್ತಾರೆ. ಅಷ್ಟರಲ್ಲಿ ಇಡೀ ಊರು ಮಡಿ ಮಾಡಿಕೊಂಡು ಹೊಸ ಮಡಕೆಗಳನ್ನು ತೆಗೆದುಕೊಳ್ಳುವ ಸಂಪ್ರದಾಯ ಆಚರಿಸುತ್ತಾರೆ. ವ್ಯಾಸ ಪೂರ್ಣಿಮೆ ದಿನ ದೇವಿಯನ್ನು ಮತ್ತೊಮ್ಮೆ ಭೋಜನಕ್ಕೆ ಕರೆದೊಯ್ಯುವ ಸಂಭ್ರಮ. ದೇವಾಲಯದಿಂದ ಅರ್ಚಕರು ದೇವಿಯನ್ನು ಹೊತ್ತು ಏಳು ಹೆಬ್ಬಾರಗಳ ಹಿಂದೆ ಓಡುತ್ತಾರೆ. ಇದು ದೇವಿಯನ್ನು ಕದ್ದುಕೊಂಡು ಬಂದಿದ್ದ ಏಳು ಮಂದಿ ಕಳ್ಳರ ಸಂಕೇತ. "ಚೌಕಾ, ಚೌಕಾ... ಹೇಮಾದ್ರಾಂಬ ಚೌಕ" ವಿಶಿಷ್ಟ ಘೋಷಣೆಯೊಡನೆ ವೀಳ್ಯದೆಲೆಗಳನ್ನು ದೇವಿಗೆ ಭಕ್ತರು ಎರಚುತ್ತಾ ಸಂಭ್ರಮಿಸುವುದೇ ಒಂದು ಚಂದ!


ಆಗ ಎಣಬಗಾರರು ಒಬ್ಬರಿಗೊಬ್ಬರು ತಲೆ ಬದಲಿಸುತ್ತಾ ದೇವಿಯನ್ನು ಹೊತ್ತು ದೇವಿ ತೋಪಿನತ್ತ ಇನ್ನೂ ವೇಗವಾಗಿ ಓಡುತ್ತಾರೆ. ಇದು ಹಿಂದೆ ಏಳು ಮಂದಿ ಕಳ್ಳರು ದೇವಿಯನ್ನು ಕದ್ದೊಯ್ದ ಹಾದಿ. ಈಗ ಇದನ್ನು ದೇವರ ಹಾದಿ ಎಂದು ಕರೆಯಲಾಗುತ್ತದೆ. ಹೀಗೆ ದೇವಿಯನ್ನು ದೇವಿ ತೋಪಿಗೆ ಹೊತ್ತು ಬಂದ ನಂತರ ಅಲ್ಲಿ ವಿಶೇಷ ಪೂಜೆಯೊಡನೆ ಸಿದ್ಧಗೊಳಿಸಿ ಮಾಡಿರುವ ಮಡಿಯಲ್ಲಿ ದೇವಿ ಮೊದಲಿಗೆ ಭೋಜನ ಸ್ವೀಕರಿಸುವಳು. ಇದನ್ನು ಕೂಳಿಗೆ ಬೀಳುವುದು ಎನ್ನುತ್ತಾರೆ. ತದನಂತರ ಬಗೆ ಬಗೆಯ ತಿಂಡಿ ತೀರ್ಥಗಳನ್ನು ಮಾಡಿಕೊಂಡು ವಿವಿಧ ಸಮುದಾಯದ ಎಲ್ಲಾ ಭಕ್ತ ಜನರೂ ದೇವಿ ಪೂಜೆಯಲ್ಲಿ ನಿರತರಾಗುವರು. ಈ ನಡುವೆ ಅತ್ತ ಊರಿನ ಒಳಗೆ ಬಹು ವಿಜೃಂಭಣೆಯಿಂದ ಬಂಡಿ ಜಾತ್ರೆ ನಡೆಯುತ್ತಿರುತ್ತದೆ. ಎರಡು ಸುಭದ್ರವಾದ ಅಲಂಕೃತ ಬಂಡಿಗಳು ಅಷ್ಟೇ ದಷ್ಟಪುಷ್ಟವಾದ ಎರಡು ಜೊತೆ ಎತ್ತುಗಳೊಡನೆ ಬಂಡಿಗಳನ್ನು ಎಳೆದುಕೊಂಡು ವೇಗವಾಗಿ ಓಡುತ್ತಿರುತ್ತವೆ. ಸೂರ್ಯ ಮುಳುಗಿದ ನಂತರ ಸಂಜೆ ದೇವಿ ತೋಪಿನಿಂದ ಹೇಮಾದ್ರಿ ಅಮ್ಮ ಊರಿಗೆ ಪ್ರವೇಶ ಮಾಡುವ ತನಕವೂ ಬಂಡಿ ಓಟ ನಡೆಯುತ್ತಿರುತ್ತದೆ. ಇದೇ ಬನ್ನೂರು ಬಂಡಿ ಜಾತ್ರೆ ವಿಶೇಷ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ನಾಲ್ಕನೇ ವರ್ಷದ ಸವಿನೆನಪು



ಶ್ರೀಯುತ ಹೆಚ್ ಲಿಂಗಯ್ಯರವರು
ನಿವೃತ್ತ ಚೀಫ್ ಮ್ಯಾನೇಜರ್ ಕಾವೇರಿ ಗ್ರಾಮೀಣ ಬ್ಯಾಂಕ್
ಹಾಗೂ ಸಂಸ್ಥಾಪಕ ಧರ್ಮದರ್ಶಿಗಳು ಪ್ರಗತಿ ವಿದ್ಯಾಸಂಸ್ಥೆ, ಸರಗೂರು

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ
ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು
ಪತ್ನಿ : ಬಿ. ರಾಜಮ್ಮರವರು, ಮಕ್ಕಳು, ಸೊಸೆಯಂದಿರು, ಕುಟುಂಬಸ್ಥರು
ಹಾಗೂ ಪ್ರಗತಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಮತ್ತು ಶಿಕ್ಷಕ ವರ್ಗ.

ಆರನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷ ಕಳೆದರೂ ಸದಾ
ಶ್ರೀಮತಿ ತಿಮ್ಮಮ್ಮ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು ಲೇಟ್ ಕಲಾಟಿ ಪೊಳ್ಳಪ್ಪನವರ ಕುಟುಂಬ, ಲೇಟ್ ಬಳ್ಳನ ಕರಿಯಪ್ಪನವರ ಕುಟುಂಬ, ಕೆ.ಜಿ.ಕೊಪ್ಪಲು, ಮೈಸೂರು

50% ರಿಯಾಯಿತಿ
ಕಾಂಚೀಪುರಂ ರೇಷ್ಮೆ ಸೀರೆಗಳು
ಮಾರಾಟ ಮತ್ತು
ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಈ ಅವಕಾಶ ಕೆಲವೇ ದಿನಗಳು ಮಾತ್ರ
ಹೋಟೆಲ್ ಮಯೂರ ಹೊಯ್ಸಳ
ಜೆಎಲ್‌ಬಿ ರಸ್ತೆ, ಮೈಸೂರು
ಮೊ. : 9481820079

WANTED
1) Truck Driver
2) Car Driver
3) Farm Supervisor
4) Accountant
5) Office Assistant
Send your resume to WhatsApp
Ph: 63660 42375

ಐದನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಮಂಗಳ ರವಿ
ನಿಧನ: 12-2-2020
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಸುಶೀಲಮ್ಮ, ಎನ್.ರವಿ RIMC, ಎನ್.ವಿಜಯ, ಎನ್.ಸುಧಾಕರ್, ಎಂ.ಆರ್. ದರ್ಶಿತ, ಬಿ.ಹೆಚ್.ದಿನೇಶ್, ಮೊಮ್ಮಕ್ಕಳು : ಕಾರುಣ್ಯ ಪ್ರಿಯ, ರೋಹಿತ್ ಕೃಷ್ಣ.

11 ನೇ ವರ್ಷದ ಪುಣ್ಯಸ್ಮರಣೆ



ನಿಮ್ಮ ಆಶೀರ್ವಾದ ಸದಾ ಹೀಗೆ ಇರಲಿ ಎಂದು ಕೇಳಿಕೊಳ್ಳುತ್ತೇವೆ ಮತ್ತು 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳುಗಳು, ಶ್ರೀಮತಿ ಪುಷ್ಪಲತಾ ನಂದಕುಮಾರ್
ಡ್ರಾಮಾ ಮಾಸ್ಟರ್ ರಂಗರಾಮಯ್ಯ, ಬಿದರಗೂಡು

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821-2474475, ಫ್ಯಾಕ್ಸ್ ನಂ.0821-2474476,
ಇ-ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2024-25/IND1256	ಒಕ್ಕೂಟಕ್ಕೆ ಅಗತ್ಯವಿರುವ ಮುಸುಕಿನ ಜೋಳ ಮತ್ತು ಮೇವಿನ ಜೋಳವನ್ನು ಖರೀದಿಸುವ ಬಗ್ಗೆ	24.02.2025 ಸಂಜೆ 5.30 ಗಂಟೆಯವರೆಗೆ
2	KMF/2024-25/IND1257	ಒಕ್ಕೂಟಕ್ಕೆ ಅಗತ್ಯವಿರುವ 500 ಲೀ ಸಾಮರ್ಥ್ಯದ ರಾಗಿ ಅಂಬಲಿ ಕೆಟಲ್ ಅನ್ನು ಖರೀದಿಸಿ, ಅಳವಡಿಸುವ ಬಗ್ಗೆ	19.02.2025 ಸಂಜೆ 5.30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.

ಸಹಿ/-, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

SPACIOUS 3 BHK FLAT FOR RESALE
Semi furnished flat measuring 1800 Sq.ft is ready to move in and has 3 Beds, 3 bathrooms, a modular kitchen, 1 balcony, and a big Pooja room and 1 car park. @ Prime location
Jayalakshmi Puram, Mysore.
99455 14297

HOUSE FOR SALE
2BHK HOUSE,
North Facing, Site Dimension
30x45=1,350 sqft
Door No:243, 4th Block,
Ramaswamy Layout,
Nanjangud Town.
Contact :
98459 87554 / 91081 06260

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಗುಂಡ್ಲುಪೇಟೆ

ಅಸಲು ದಾವಾ ಸಂಖ್ಯೆ : 241/2024
ವಾದಿಗಳು:
ಸಿದ್ದಮ್ಮ ಮತ್ತು ಇತರರು
ವಿರುದ್ಧ
ಪ್ರತಿವಾದಿಗಳು
ಮಹದೇವಮ್ಮ ಮತ್ತು ಇತರರು
2ನೇ ಪ್ರತಿವಾದಿ :
ನಾಗಮ್ಮ ಬಿನ್ ಲೇಟ್ ಬಳ್ಳಾರಿ ಮಲ್ಲಪ್ಪ ಕೋಂ ಶಿವಪ್ಪ ಸುಮಾರು 64 ವರ್ಷ ವಯಸ್ಸು
ವಾಸ:-ನೀಲಕಂಠನಗರ, ನಂಜನಗೂಡು ಟೌನ್, ನಂಜನಗೂಡು, ಮೈಸೂರು ಜಿಲ್ಲೆ.

ಪ್ರಕಟಣೆಗಾಗಿ

ದಾವೆಯಲ್ಲಿ ವಾದಿಗಳು ಪ್ರತಿವಾದಿಗಳ ವಿರುದ್ಧ ಪ್ರತ್ಯೇಕ ಭಾಗ ಮತ್ತು ಸ್ವಾಧೀನವನ್ನು ಕೋರಿ ಗೌರವಾನ್ವಿತ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು, ಸದರಿ ದಾವೆಯಲ್ಲಿ 2ನೇ ಪ್ರತಿವಾದಿಯಾದ ನಾಗಮ್ಮ ರವರು ಮೇಲ್ಕಂಡ ದಾವೆಯು ಸುನಾವಣೆ ದಿನಾಂಕ: 17/02/2025 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮೂಲಕವಾಗಲಿ: ಗೌರವಾನ್ವಿತ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮ ತಕರಾರನ್ನು ಸಲ್ಲಿಸ ತಕ್ಕದ್ದು, ತಪ್ಪಿದ್ದಲ್ಲಿ ಈ ದಾವೆಯಲ್ಲಿ ನಿಮ್ಮ ಪರ ಯಾವುದೇ ತಕರಾರು ಇರುವುದಿಲ್ಲ ಎಂದು ಹಾಗೂ ನಿಮ್ಮ ಗೈರುಹಾಜರಾತಿಯಲ್ಲಿ ಏಕಪಕ್ಷೀಯವಾಗಿ ನಿರ್ಣಯಿಸಲಾಗುವುದು ಎಂದು ಈ ಪತ್ರಿಕೆ 'ಪ್ರಕಟಣೆ ಮೂಲಕ ನಿಮಗೆ ತಿಳಿಯಪಡಿಸಲಾಗಿದೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಸಹಿ/- ಶಿರಸ್ತೇದಾರರು
ಘನ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಗುಂಡ್ಲುಪೇಟೆ
ಸಹಿ/- ನಾಗೇಂದ್ರ, ಎಂಎ, ಎಲ್‌ಎಲ್‌ಬಿ
ವಕೀಲರು
ಸ್ಥಳ: ಗುಂಡ್ಲುಪೇಟೆ ದಿ: 18-1-2025

6ನೇ ವರ್ಷದ ಪುಣ್ಯಸ್ಮರಣೆ



ಶ್ರೀಮಾನ್ ಎಂ.ಕೆ.ಕೆಂಪಣ್ಣ (ಕೆ.ಇ.ಬಿ)ರವರು
(ನಿವೃತ್ತ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು (ಅತ್ತಹಳ್ಳಿ))
ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು : ಮೃತರ ಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಬಂಧುಮಿತ್ರರು

ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು
ಸಿಎಫ್‌ಟಿಆರ್‌ಐ ಶಾಲೆ
ಸಿಎಫ್‌ಟಿಆರ್‌ಐ ಆವರಣ, ಯಾದವಗಿರಿ, ಮೈಸೂರು
ಫೋನ್: 0821-2515381

ದಿನಾಂಕ: 12.02.2025


ಟೆಂಡರ್‌ಗಾಗಿ ಆಹ್ವಾನ

ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆಯ ಶಾಲಾ ಕಟ್ಟಡದ ತಾರಸಿಗೆ ಎಪಿಪಿ ಮೆಂಬ್ರೇನ್ ವಾಟರ್ ಪ್ರೂಫ್ ಟ್ರೀಟ್‌ಮೆಂಟ್ ಒದಗಿಸುವ ಬಗ್ಗೆ, ಕೇಂದ್ರೀಯ / ರಾಜ್ಯ ಲೋಕೋಪಯೋಗಿ ಸಂಸ್ಥೆಗಳು/ ರೈಲ್ವೆ / MES / ಅಂಚೆ ಮತ್ತು ಟೆಲಿಗ್ರಾಫ್, ಅರೆ ಸರ್ಕಾರಿ/ ಸರ್ಕಾರಿ ಸಂಸ್ಥೆಗಳೊಂದಿಗೆ ಕೆಲಸ ಮಾಡಿದ ಸೂಕ್ತ ವರ್ಗದ ನೋಂದಾಯಿತ ಸಂಸ್ಥೆಗಳು ಅಥವಾ ಗುತ್ತಿಗೆದಾರರಿಂದ ಕೆಲಸಕ್ಕಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಸಿಎಫ್‌ಟಿಆರ್‌ಐ ಶಾಲೆಯ ಪ್ರಾಂಶುಪಾಲರಿಂದ ದಿನಾಂಕ:-12.02.2025 ರಿಂದ 24.02.2025 ರವರೆಗೆ ಕಛೇರಿ ಸಮಯದಲ್ಲಿ ಬೆಳಗ್ಗೆ 10.00 ರಿಂದ ಮಧ್ಯಾಹ್ನ 3.30 ರವರೆಗೆ ಸಂಗ್ರಹಿಸಬಹುದು. ಟೆಂಡರ್ ದಾಖಲೆಗಳನ್ನು ದಿನಾಂಕ:-16.02.2025 ಮತ್ತು 23.02.2025 (ಭಾನುವಾರ) ನೀಡಲಾಗುವುದಿಲ್ಲ ಹಾಗೂ ಸ್ವೀಕರಿಸಲಾಗುವುದಿಲ್ಲ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:-24.02.2025 ಸಂಜೆ 4.00 ಗಂಟೆಯವರೆಗೆ.
ಟೆಂಡರ್ ತೆರೆಯುವ ದಿನಾಂಕ:- 25.02.2025 ಬೆಳಗ್ಗೆ 10.30 ಗಂಟೆಗೆ.

ಸಹಿ/- ಗೌರವ ಕಾರ್ಯದರ್ಶಿಗಳು, ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು

ವೈಕುಂಠ ಸಮಾರಾಧನೆ



ಶ್ರೀ ಎಂ.ಬಿ. ಪ್ರಕಾಶ್
(ಲೇ|| ಎಂ.ಆರ್. ಬಾಲಯ್ಯನವರ ಮಗ)
ಇವರು ತಾ|| 1-2-2025ರಂದು ದೈವಾಧೀನರಾಗಿದ್ದು ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯನ್ನು ತಾ|| 13-2-2025ರ ಗುರುವಾರ, ಮೈಸೂರಿನ ಡಿ. ದೇವರಾಜ ಅರಸು ರಸ್ತೆಯ ಲೋಕಾಭಿರಾಮ ಸಮುದಾಯ ಭವನ ಇಲ್ಲಿ ಏರ್ಪಡಿಸಲಾಗಿದೆ.
ದುಃಖತಪ್ತರು : ಶ್ರೀಮತಿ ಭಾಗ್ಯಲಕ್ಷ್ಮಿ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ನಿಧಾನಿಸಿ!
ಸುರಕ್ಷತೆಗಾಗಿ ವೇಗದ ಮಿತಿಯನ್ನು ಅನುಸರಿಸಿ



ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು


ಈ ಕೆಳಕಂಡ ಅಂಕಿ-ಅಂಶಗಳಿಗೆ ಕರ್ನಾಟಕವು ಸಾಕ್ಷಿಯಾಗಿದೆ

- 2022ರಲ್ಲಿ ಭಾರತದಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ರಾಜ್ಯವು 8.6%ರಷ್ಟು ಮರಣ ಪ್ರಮಾಣ ದಾಖಲಿಸಿದೆ
- 2021ರಲ್ಲಿ ಹೋಲಿಸಿದರೆ 2022ರಲ್ಲಿ ಮರಣ ಪ್ರಮಾಣದಲ್ಲಿ 17%ರಷ್ಟು ಮತ್ತು ಗಾಯಾಳುಗಳ ಪ್ರಮಾಣದಲ್ಲಿ 18%ರಷ್ಟು ರಾಜ್ಯದಲ್ಲಿ ಏರಿಕೆಯಾಗಿದೆ.
- 2022ರಲ್ಲಿ ರಾಜ್ಯದಲ್ಲಿ 93% ರಷ್ಟು ಅಪಘಾತ ಮರಣಗಳು ಮತ್ತು 91%ರಷ್ಟು ಗಾಯಗಳು ಉಂಟಾಗಲು ಅತೀ ವೇಗದ ಚಾಲನೆ ಕಾರಣವಾಗಿರುತ್ತದೆ.

* ಕೃಪೆ ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ 2021,2022 ರ ವರದಿ.
ಕರ್ನಾಟಕ ರಾಜ್ಯ ಪೊಲೀಸ್ ವರದಿ : 2023

ವಾಹನಗಳ ಅತೀ ವೇಗದ ಚಾಲನೆಗೆ ಮೋಟಾರು ವಾಹನ ಕಾಯಿದೆ 1988ರ ಕಲಂ 183 ಅಡಿಯಲ್ಲಿ ದಂಡವನ್ನು ವಿಧಿಸಬಹುದಾಗಿರುತ್ತದೆ.





ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭ

ನಿಮ್ಮ ವೇಗದಲ್ಲಾಗೋ ಸ್ವಲ್ಪವೇ ವ್ಯತ್ಯಾಸ, ಅಪಘಾತ ಆಗೋದನ್ನು ಅದರ ತೀವ್ರತೆಯನ್ನು ಹಾಗೂ ನಿಮ್ಮ ಸಾವು ಬದುಕನ್ನು ನಿರ್ಧರಿಸುತ್ತದೆ.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ರಸ್ತೆ ಸುರಕ್ಷತೆ - ನಮ್ಮ ಆದ್ಯತೆ

ಡಾ|| ಎನ್.ವಿ. ಪ್ರಸಾದ್ ಐ.ಎ.ಎಸ್.
ಕಾರ್ಯದರ್ಶಿಗಳು
ಸಾರಿಗೆ ಇಲಾಖೆ

ಶ್ರೀ ಎ.ಎಂ. ಯೋಗೀಶ್ ಐ.ಎ.ಎಸ್.
ಆಯುಕ್ತರು
ಸಾರಿಗೆ ಮತ್ತು ರಸ್ತೆ ಸುರಕ್ಷತೆ

ಶ್ರೀ ಜಿ. ಪುರುಷೋತ್ತಮ್
ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಮೈಸೂರು ಮಿತ್ರ

ಭಾರತೀನಗರದ ಬಳಿ ಹಾಡಹಗಲೇ ಜೆಡಿಎಸ್ ಮುಖಂಡನ ಕತ್ತು ಕೊಯ್ದು ಕಗ್ಗೊಲೆ

ರಕ್ಷಣೆಗೆ ಬಂದ ಗ್ರಾಮಸ್ಥರಿಗೂ ಚಾಕು ತೋರಿಸಿ ಪರಾರಿಯಾದ ದುಷ್ಕರ್ಮಿಗಳು



ಭಾರತೀನಗರ, ಫೆ11–ಜೆಡಿಎಸ್ ಮುಖಂಡರೊಬ್ಬರನ್ನು ದುಷ್ಕರ್ಮಿಗಳು ಹಾಡಹಗಲೇ ಕತ್ತು ಕೊಯ್ದು ಕೊಲೆ ಮಾಡಿರುವ ಘಟನೆ ಇಲ್ಲಿಗೆ ಸಮೀಪದ ಲಕ್ಷ್ಮೀಗೌಡನ ದೊಡ್ಡಿ ಗ್ರಾಮದಲ್ಲಿ ಸಂಭವಿಸಿದೆ.

ಲಕ್ಷ್ಮೀ ಗೌಡನ ದೊಡ್ಡಿ ಗ್ರಾಮದ ಲೇ॥ ಲಕ್ಷ್ಮೀಗೌಡ ಪುತ್ರ ಎಲ್.ಕೃಷ್ಣ(47) ಕೊಲೆಯಾದ ದುರ್ದೈವಿ.

ಈತ ಜೆಡಿಎಸ್ ಪಕ್ಷದ ಮುಖಂಡನಾಗಿದ್ದು ವ್ಯವಸಾಯ ಮಾಡಿಕೊಂಡು ಕುರಿ, ಮೇಕೆ, ಹಸು ಸಾಕಿಕೊಂಡು ಜೀವನ ಸಾಗಿಸುತ್ತಿದ್ದ. ಈತ ಪ್ರತಿದಿನ ಗ್ರಾಮದ ಡೇರಿಗೆ ಹಾಲು ಹಾಕಿ ನಂತರ ಹಸು ಕರುಗಳನ್ನು ತಮ್ಮ ಮನೆಯ ಬಳಿ ಕಟ್ಟಿ ಹಾಕುತ್ತಿದ್ದ. ಮಂಗಳವಾರ ಬೆಳಿಗ್ಗೆಯೂ ಸಹ ಮನೆ ಹತ್ತಿರ ಎಮ್ಮೆ ಕಟ್ಟಿ ಹಾಕುತ್ತಿದ್ದಾಗ ಮೂವರು ದುಷ್ಕರ್ಮಿಗಳು ಬೈಕ್‌ನಲ್ಲಿ ಬಂದು ಏಕಾಏಕಿ ಕೃಷ್ಣನ ಚಾಕುವಿನಿಂದ ಕತ್ತು ಕೊಯ್ದಿದ್ದಾರೆ.

ಕೃಷ್ಣನ ಚೀರಾಟವನ್ನು ಕೇಳಿ ಅಕ್ಕಪಕ್ಕದವರು ರಕ್ಷಣೆಗೆ ಮುಂದಾದರಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಅವರಿಗೂ ಸಹ ದುಷ್ಕರ್ಮಿಗಳು ಚಾಕು ತೋರಿಸಿ ನೀವು ಮುಂದೆ ಬಂದರೆ ನಿಮಗೂ ಇದೇ ಗತಿಯಾಗುತ್ತದೆ ಎಂದು ಎಚ್ಚರಿಸಿ ಬೈಕ್‌ನಲ್ಲಿ ಪರಾರಿಯಾಗಿದ್ದಾರೆ. ಘಟನೆಯಿಂದ ಗ್ರಾಮಸ್ಥರು ಬೆಚ್ಚಿ ಬಿದ್ದಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಪೊಲೀಸರ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

ಹಣಕಾಸು ವಿಚಾರಕ್ಕೆ ಕಲಹ ಉಂಟಾಗಿ ಕೊಲೆಯಾಗಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೃಷ್ಣನ ಮೃತ ದೇಹವನ್ನು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಪಂಚನಾಮೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು. ನಂತರ ಗ್ರಾಮದಲ್ಲಿ ಸಂಜೆ ಅಂತ್ಯಕ್ರಿಯೆ ಜರುಗಿತು.

ಶ್ರೀರಂಗಪಟ್ಟಣ ಪುರಸಭೆ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ಯಶೋಧಮ್ಮ, ಉಪಾಧ್ಯಕ್ಷರಾಗಿ ದಿನೇಶ್ ಆಯ್ಕೆ

● ಕೈಕೊಟ್ಟ ಜೆಡಿಎಸ್, ಬಿಜೆಪಿ, ಪಕ್ಷೇತರ ಸದಸ್ಯರು ● ಬಹುಮತವಿದ್ದರೂ ಅಧಿಕಾರ ಸಿಗದೆ ಜೆಡಿಎಸ್‌ಗೆ ಮುಖಭಂಗ



ಶ್ರೀರಂಗಪಟ್ಟಣ ಪುರಸಭೆಯ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಲಾಯಿತು.

ಕಾಂಗ್ರೆಸ್ ಬೆನ್ನಿಗೆ ನಿಂತ ಜೆಡಿಎಸ್, ಬಿಜೆಪಿ ಸದಸ್ಯರು

ಒಟ್ಟು 23 ಸಂಖ್ಯಾ ಬಲವಿರುವ ಪಟ್ಟಣ ಪುರಸಭೆಯಲ್ಲಿ ಜೆಡಿಎಸ್ ಪಕ್ಷದ 12, ಕಾಂಗ್ರೆಸ್‌ನ 8, ಬಿಜೆಪಿ 1 ಹಾಗೂ 2 ಪಕ್ಷೇತರ ಸದಸ್ಯರು ಇದ್ದಾರೆ. ಕಳೆದ ಅವಧಿಯಲ್ಲಿ ಜೆಡಿಎಸ್ ಪಕ್ಷದ 12, ಬಿಜೆಪಿ 1 ಹಾಗೂ ಪಕ್ಷೇತರ 1 ಸೇರಿದಂತೆ ಅಂದು ಶಾಸಕರಾಗಿದ್ದ ರವೀಂದ್ರ ಶ್ರೀಕಂಠಯ್ಯ ಅವರ ಬೆಂಬಲದೊಂದಿಗೆ 15 ಜನರ ಬಹುಮತ ಪಡೆದಿದ್ದ ಜೆಡಿಎಸ್ ಪಕ್ಷ ಅಂದು ಪ್ರಪ್ರಥಮ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿದು ನಿರ್ಮಲಾ ವೇಣುಗೋಪಾಲ್ ಅಧ್ಯಕ್ಷರ ಗದ್ದುಗೆಯಲ್ಲಿ 30 ತಿಂಗಳ ಕಾಲ ಆಡಳಿತ ನಡೆಸಿದ್ದು, ಅದೇ ಪಕ್ಷದ ಹಲವರು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಆದರೆ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಒಗ್ಗಟ್ಟಿನ ಮುನ್ನಡೆ, ಸಮನ್ವಯತೆ ಹಾಗೂ ನಾಯಕತ್ವದ ಕೊರತೆಯಿಂದ ಸ್ವಪಕ್ಷ ಹಾಗೂ ಬೆಂಬಲ ನೀಡಿದ್ದ ಸದಸ್ಯರ ಮನಸ್ಥಿತಿಯೂ ಕೊಂಚ ಬದಲಾವಣೆಗೊಂಡು ಸ್ಥಳ ಪಲ್ಲಟದಿಂದ ಸದಸ್ಯರ ಸಂಖ್ಯೆ ಕುಸಿದಿತ್ತು.

ಶ್ರೀರಂಗಪಟ್ಟಣ, ಫೆ11– ತೀವ್ರ ಕುತೂಹಲ ಕೆರಳಿಸಿದ್ದ ಶ್ರೀರಂಗಪಟ್ಟಣ ಪುರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ ಕೊನೆಗೂ ಕಾಂಗ್ರೆಸ್ ಪಾಲಾಗಿದೆ ಈ ಮೂಲಕ ಬಹುಮತವಿದ್ದರೂ ಪಕ್ಷದ ಸದಸ್ಯರು, ಬಿಜೆಪಿ ಮತ್ತು ಪಕ್ಷೇತರರು ಕೈಕೊಟ್ಟ ಪರಿಣಾಮ ಜೆಡಿಎಸ್ ಪಕ್ಷಕ್ಕೆ ತೀವ್ರ ಮುಖಭಂಗವಾಗಿದೆ.

ಪಟ್ಟಣ ಪುರಸಭೆಗೆ ನೂತನ ಅಧ್ಯಕ್ಷೆಯಾಗಿ 8ನೇ ವಾರ್ಡಿನ ಯಶೋಧಮ್ಮ ಹಾಗೂ ಉಪಾಧ್ಯಕ್ಷರಾಗಿ 11 ವಾರ್ಡಿನ ಎಂ.ಎಲ್. ದಿನೇಶ್ ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣ ಪುರಸಭೆಯ ಅಧ್ಯಕ್ಷೆ ಸ್ಥಾನ ಸಾಮಾನ್ಯ ಮಹಿಳೆಗೆ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಪುರಸಭೆಯಲ್ಲಿದ್ದ 8 ಮಂದಿ ಕಾಂಗ್ರೆಸ್ ಸದಸ್ಯರಿಗೆ ಜೆಡಿಎಸ್ ಪಕ್ಷದ ನಾಲ್ವರು ಸದಸ್ಯರುಗಳಾದ ನಿರ್ಮಲ ವೇಣುಗೋಪಾಲ್, ಗಂಜಾಂ ನರಸಿಂಹೇಗೌಡ, ಎಂ.ನಂದೀಶ್ ಮತ್ತು ವನಿತಾ, ಜತೆಗೆ ಬಿಜೆಪಿ ಪಕ್ಷದ ಪೂರ್ಣಿಮಾ ಪರಶಿವ ಹಾಗೂ ಪಕ್ಷೇತರ ಸದಸ್ಯರುಗಳಾದ ಎಸ್.ನಂದೀಶ್ ಮತ್ತು ಪೂರ್ಣಿಮಾ ಪ್ರಕಾಶ್ ಸಂಪೂರ್ಣ ಬೆಂಬಲ ನೀಡಿದ್ದು, ಕ್ಷೇತ್ರದ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡರ ಬೆಂಬಲದೊಂದಿಗೆ 16 ಜನರ ಬೆಂಬಲವಿತ್ತು.

ಹೀಗಾಗಿ ಅಧ್ಯಕ್ಷೆ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಯಶೋಧಮ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಹಿರಿಯ ಸದಸ್ಯ ಎಂ.ಎಲ್.ದಿನೇಶ್ ಈ ಇಬ್ಬರು ಮಾತ್ರ ಚುನಾವಣಾಧಿಕಾರಿಯಾದ ತಾಲೂಕು ದಂಡಾಧಿಕಾರಿ ಪರಶುರಾಮ್ ಸತ್ತಿಗೇರಿ ಅವರಿಗೆ ಉಮೇದುವಾರಿಕೆ ಸಲ್ಲಿಸಿದ್ದರು. ಅಧ್ಯಕ್ಷೆಗೆ 5ನೇ ವಾರ್ಡಿನ ಜೆಡಿಎಸ್ ಸದಸ್ಯ ಎಂ.ನಂದೀಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ 3ನೇ ವಾರ್ಡಿನ ಕಾಂಗ್ರೆಸ್ ಸದಸ್ಯ ಎಸ್.ಎನ್.ದಯಾನಂದ್ ಸೂಚಕರಾಗಿ ಕಾರ್ಯನಿರ್ವಹಿಸಿದ್ದು, ಕಣದಲ್ಲಿದ್ದ ಸ್ಪರ್ಧಿಗಳ ವಿರುದ್ಧವಾಗಿ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಘೋಷಿಸಲಾಯಿತು.

ಅದೇ ಸಮಯಕ್ಕೆ ವಿಧಾನಸಭಾ ಚುನಾವಣೆ ನಂತರದಲ್ಲಿ ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಪ್ರಕಟವಾದ ಮೀಸಲಾತಿಯೂ ಬದಲಾಗಿದ್ದು, ಈ ಬಗ್ಗೆ ಪ್ರಶ್ನಿಸಿ ಕೆಲ ಸದಸ್ಯರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಹೀಗಾಗಿ 1.5 ವರ್ಷಗಳ ಕಾಲ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳ ಕುರ್ಚಿಗಳು ಖಾಲಿ ಉಳಿದು ಅಧಿಕಾರ ನೆನೆಗುದಿಗೆ ಬಿದ್ದಿತ್ತು.

ನೂತನ ಅಧ್ಯಕ್ಷೆ ಹಾಗೂ ಉಪಾಧ್ಯಕ್ಷರಿಗೆ ಕ್ಷೇತ್ರದ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ ನೇತೃತ್ವದಲ್ಲಿ ಸದಸ್ಯರು ಹಾಗೂ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹೂಮಾಲೆಗಳ ಸುರಿಮಳೆಗೈದು ಅಭಿನಂದಿಸಿ ಶುಭಾಶಯಕೋರಿದ್ದು, ಪುರಸಭೆಯ ಆವರಣ ಸಂಭ್ರಮ ಸಡಗರದಲ್ಲಿ ಮುಳುಗಿತ್ತು.

ಕಾಂಗ್ರೆಸ್ ಜಿಲ್ಲಾ ಮಾಧ್ಯಮ ಸಂಚಾಲಕ ಡಾ.ಎಂ.ಪುಟ್ಟೇಗೌಡ, ಮನ್‌ಮುಲ್ ನಿರ್ದೇಶಕ ಬೋರೇಗೌಡ, ಪಿಎಲ್‌ಡಿ ಬ್ಯಾಂಕ್ ಬಾಲಕೃಷ್ಣ, ನಗರಘಟಕದ ಅಧ್ಯಕ್ಷ ಎಂ.ಲೋಕೇಶ್, ಕಸಬಾ ಸೊಸೈಟಿ ಮಾಜಿ ನಿರ್ದೇಶಕ ಸೋಮಸುಂದರ್, ಕಾಂಗ್ರೆಸ್ ಹಿರಿಯ ಮುಖಂಡರಾದ ನಗುವನಹಳ್ಳಿ ಚೆಲುವರಾಜು, ತಡಗವಾಡಿ ಯತೀಶ್, ಬಿ.ಎಸ್.ಚಂದ್ರಶೇಖರ್, ಶಿವಾಜಿ ರಾವ್, ಗಂಜಾಂ ನಾಗರಾಜು, ಆರ್.ಕೃಷ್ಣ, ಕ್ಷೇತ್ರದ ಯೂತ್ ಕಾಂಗ್ರೆಸ್ ಅಧ್ಯಕ್ಷ ಸಂಜಯ್, ನಗರ ಘಟಕದ ಅಧ್ಯಕ್ಷ ರಜನಿಕಾಂತ್, ಸುರೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗ್ರಾಮ ಆಡಳಿತಾಧಿಕಾರಿಗಳ ಪ್ರತಿಭಟನೆ ಎರಡನೆ ದಿನಕ್ಕೆ



ತಾಲೂಕು ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಸದಸ್ಯರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಎರಡನೇ ದಿನವೂ ಪ್ರತಿಭಟನೆ ನಡೆಸುತ್ತಿರುವುದು.

ಕೆಆರ್.ಪೇಟೆ, ಫೆ11– ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ತಾಲೂಕು ಗ್ರಾಮ ಆಡಳಿತ ಅಧಿಕಾರಿಗಳು ಕೆ.ಆರ್.ಪೇಟೆ ಪಟ್ಟಣದ ತಾಲೂಕು ಕಚೇರಿಯ ಆವರಣದಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರವು ಎರಡನೇ ದಿನಕ್ಕೆ ಕಾಲಿಟ್ಟಿದ್ದು, ಸರ್ಕಾರ ಕೂಡಲೇ ತಮ್ಮ ಬೇಡಿಕೆಗಳನ್ನು ಈಡೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾನಿರತ ಗ್ರಾಮ ಆಡಳಿತಾಧಿಕಾರಿಗಳು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮಂಡ್ಯ ಜಿಲ್ಲಾ ಗ್ರಾಮ ಆಡಳಿತಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಿ.ಪಿ.ಹರೀಶ್ ಹಾಗೂ ಗ್ರಾಮ ಆಡಳಿತಾಧಿಕಾರಿಗಳ ಸಂಘದ ಅಧ್ಯಕ್ಷ ದಶರಥ ಪೂಜಾರಿ ಮತ್ತು ಇತರೆ ಪದಾಧಿಕಾರಿಗಳ ನೇತೃತ್ವದಲ್ಲಿ ಎರಡನೇ ದಿನವೂ ಸಹ ಕೈಗೆ ಕಪ್ಪು ಪಟ್ಟಿ ಧರಿಸಿ, ಮಹಾತ್ಮಾ ಗಾಂಧೀಜೀ ಮತ್ತು ಡಾ.ಬಿ. ಆರ್.ಅಂಬೇಡ್ಕರ್ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿ, ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸಿ ಸರ್ಕಾರದ ಗಮನ ಸೆಳೆದರು.

ತಾಲೂಕು ಗ್ರಾಮ ಆಡಳಿತಾಧಿಕಾರಿಗಳ ಸಂಘದ ಅಧ್ಯಕ್ಷ ದಶರಥ ಪೂಜಾರಿ, ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ತಾಲೂಕು ಉಪಾಧ್ಯಕ್ಷ ರಾಘವೇಂದ್ರ, ತಾಲೂಕು ಗೌರವ ಸಲಹೆಗಾರ ಸುಧಾಕರ್, ಜಿಲ್ಲಾ ಉಪಾಧ್ಯಕ್ಷ ಕೆ.ಎಸ್.ಸೋಮಾಚಾರಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸುನಿಲ್ ಗಾಣೀಗೇರ್, ತಾಲೂಕು ಮಹಿಳಾ ಘಟಕದ ಉಪಾಧ್ಯಕ್ಷೆ ಕೆ.ಸಾವಿತ್ರಿ, ಕಾರ್ಯದರ್ಶಿ ಬಿ.ಹೊನ್ನೇಶ್, ಖಜಾಂಚಿ ಕಾವ್ಯಗೌಡ, ನಿರ್ದೇಶಕರಾದ ಮಧು, ಶ್ವೇತ, ಪೂಜಾ, ಕಾಂತೇಶ್, ಮಮತಾಜಯರಾಮೇಗೌಡ ಸೇರಿದಂತೆ ತಾಲೂಕಿನ ಎಲ್ಲಾ ವೃತ್ತಗಳ ಗ್ರಾಮ ಆಡಳಿತ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಮಾಡಿ, ಮೈಕ್ರೋ ಫೈನಾನ್ಸ್‌ಗಳಿಂದ ದೂರವಿರಿ

ಸಾಲ ಕಟ್ಟುವಂತೆ ಕಿರುಕುಳ ನೀಡಿದರೆ ನಮಗೆ ಕರೆ ಮಾಡಿ: ತಹಸೀಲ್ದಾರ್



ತಹಸೀಲ್ದಾರ್ ಲೋಕೇಶ್ ಗ್ರಾಮಸ್ಥರ ಸಭೆ ನಡೆಸಿ ತಿಳುವಳಿಕೆ ನೀಡಿದರು.

ಹಲಗೂರು,ಫೆ.11– ಮೈಕ್ರೋ ಫೈನಾನ್ಸ್‌ಗಳ ಕಿರುಕುಳ ತಾಳಲಾರದೆ ಕೊನ್ನಾಪುರ ಗ್ರಾಮದ ಪ್ರೇಮಾ ಮತ್ತು ಇವರ ಮಗ ರಂಜಿತ್ ಅವರು ಆತ್ಮಹತ್ಯೆಗೆ ಶರಣಾದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಲೋಕೇಶ್ ಗ್ರಾಮದಲ್ಲಿ ಬಹಿರಂಗ ಸಭೆ ನಡೆಸಿದರು.

ಮೃತರ ಮನೆಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಭೇಟಿ ನೀಡಿ ಮಳವಳ್ಳಿ ತಾಲೂಕಿನ ತಹಶಿಲ್ದಾರ್ ಲೋಕೇಶ್ ಅವರಿಗೆ ತುರ್ತು ಸಭೆ ಕರೆಯುವಂತೆ ಮೌಖಿಕವಾಗಿ ಹೇಳಿದ್ದರು. ಅದರಂತೆ ಬಹಿರಂಗ ಸಭೆ ಕರೆದು ಸಾರ್ವಜನಿಕವಾಗಿ ತಿಳುವಳಿಕೆ ನೀಡಲಾಯಿತು.

ಈ ವೇಳೆ ಮಾತನಾಡಿದ ತಹಸೀಲ್ದಾರ್ ಲೋಕೇಶ್ ಆರ್‌ಬಿಐ ನಿಯಮಾನುಸಾರ 50 ಮೈಕ್ರೋ ಫೈನಾನ್ಸ್ ಕಂಪನಿಗಳಿದ್ದು, ಇದರ ಜೊತೆಗೆ ಅನಧಿಕೃತ ಮೈಕ್ರೋ ಫೈನಾನ್ಸ್ ಕಂಪನಿಗಳು ಬಡ ಮತ್ತು ಮಧ್ಯಮ ವರ್ಗದವರ ಟಾರ್ಗೆಟ್ ಮಾಡಿ ಕೊಂಡು ಬರಿ ಬಯೋ ಮೆಟ್ರಿಕ್ ಆಧಾರದ ಮೇಲೆ ಸಾಲ ನೀಡುವ ಮೂಲಕ ಬಡ ಮಧ್ಯಮ ವರ್ಗದವರ ಮೇಲೆ ಅಧಿಕ ಬಡ್ಡಿ ವಿಧಿಸಿ ಸಾಲ ವಸೂಲಿ ಮಾಡುತ್ತಿವೆ. ಆದ್ದರಿಂದ ನೀವು ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಳ್ಳಬೇಕು, ಆ ಮೂಲಕ ಮೈಕ್ರೋ ಫೈನಾನ್ಸ್ ಕಂಪನಿಗಳಿಂದ ದೂರ ಇರಬೇಕು ಎಂದರು.

ಮೈಕ್ರೋ ಫೈನಾನ್ಸ್ ಹಾವಳಿ ತಡಗಟ್ಟಲು ಸರ್ಕಾರ ಸುಗ್ರೀವಾಜ್ಞೆ ಹೊಡಿಸಿದೆ. ಅದು ರಾಜ್ಯಪಾಲರ ಹಂತದಲ್ಲಿದೆ. ಸರ್ಕಾರ ಗೈಡ್ ಲೈನ್ ರೂಪಿಸುತ್ತಿದ್ದು ಕಡಿವಾಣ ಹಾಕಲಾಗುತ್ತೆ. ಅಲ್ಲಿಯವರೆಗೆ ಯಾವುದೇ ಮೈಕ್ರೋ ಫೈನಾನ್ಸ್ ಕಂಪನಿಯ ಯಾರಾದರೂ ಬಂದು ಸಾಲ ವಸೂಲಿ ಮಾಡುವುದಾಗಲಿ, ಮನೆಯ ಹತ್ತಿರ ಬಂದು ಕಿರುಕುಳ ನೀಡುವುದಾಗಲಿ, ಸಾಲಕಟ್ಟುವಂತೆ ಫೋನ್ ಕರೆ ಮಾಡಿ ತೊಂದರೆ ಕೊಡುವುದಾಗಲಿ, ಬಲವಂತವಾಗಿ ಸಾಲ ಕಟ್ಟುವಂತೆ ಒತ್ತಾಯ ಮಾಡಿದರೆ ಜಿಲ್ಲಾಡಳಿತ ಸಹಾಯವಾಣಿ ಸಂಖ್ಯೆಗೆ 082322–24655 ಕರೆ ಮಾಡಬಹುದಾಗಿದೆ ಎಂದು ಹೇಳಿದರು.

ಇದೇ ವೇಳೆ ಹಲಗೂರು ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರಾದ ಮಹೇಂದ್ರರವರು ಮಾತನಾಡಿ, ಮೈಕ್ರೋ ಫೈನಾನ್ಸ್‌ಗಳು ಸರ್ಕಾರದ ಮಾರ್ಗಸೂಚಿಗಳಿಗೆ ವಿರುದ್ಧ ನಡೆದುಕೊಂಡರೆ ಅಂತವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಕಂದಾಯ ರಾಜಸ್ವನಿರೀಕ್ಷಕರಾದ ಮಧುಸೂಧನ್, ಗ್ರಾಪಂ ಕಾರ್ಯದರ್ಶಿ ಶಿವಕುಮಾರ್, ಬಿಲ್ ಕಲೆಕ್ಟರ್ ಆನಂದ, ಗ್ರಾಮ ಸಹಾಯಕರಾದ ಪುಟ್ಟಸ್ವಾಮಿ, ನಂದನ್, ಶಿವಪ್ರಕಾಶ, ಅನೀಲ್, ನವೀನ್, ಮುಖಂಡರಾದ ಆನಂದ ಕುಮಾರ್, ಮರಿಸ್ವಾಮಿ, ಅಂದಾನಯ್ಯ, ಬೋರಲಿಂಗಯ್ಯ, ಅನ್ನದಾನಿ, ಜಯಶಂಕರ್, ಕೆ.ಬಿ. ಸುರೇಶ್, ಮಧುಸೂದನ್, ಇತರರು ಇದ್ದರು.

ಮೂರನೇ ಪುಟದಿಂದ

ಠಾಣಾ ವ್ಯಾಪ್ತಿ ಸಹಜ ಸ್ಥಿತಿ

ಅವರ ಕಾರು ಸೇರಿದಂತೆ ನಾಲ್ಕು ವಾಹನಗಳ ಗಾಜು ಒಡೆದಿದ್ದು, ಉದಯಗಿರಿ ಠಾಣೆಯ ಕಿಟಕಿ–ಗಾಜುಗಳು ಪುಡಿಯಾಗಿವೆ. ಉದ್ರಿಕ್ತ ಗುಂಪು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿ, ನಂತರ ಅಶ್ರುವಾಯು ಪ್ರಯೋಗಿಸಿದ್ದಾರೆ ಎಂದು ಆಯುಕ್ತರು, ಎಡಿಜಿಪಿ ಅವರಿಗೆ ವಿವರಿಸಿದರು. ಅವಹೇಳನಕಾರಿ ಪೋಸ್ಟರ್ ಹರಿಯ ಬಿಟ್ಟ ಬಗ್ಗೆ ಸುಮೊಟೋ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿತ್ತು. ಆರೋಪಿಯನ್ನು ವಿಚಾರಣೆ ಮಾಡಿ ಬಿಟ್ಟು ಕಳುಹಿಸುತ್ತಾರೆ ಎಂದು ತಪ್ಪು ಗ್ರಹಿಕೆಯಿಂದ ಜನರಲ್ಲಿ ಗೊಂದಲ ಉಂಟಾಗಿ ಠಾಣೆ ಬಳಿ ಜಮಾಯಿಸಿ, ಪೊಲೀಸರತ್ತ ಕಲ್ಲು ತೂರಾಟ ಮಾಡಿದ್ದರಿಂದ ಪರಿಸ್ಥಿತಿ ನಿಯಂತ್ರಣಕ್ಕೆ ನಾವು ಲಾಠಿ ಪ್ರಹಾರ ಮಾಡಿ, ಅಶ್ರುವಾಯು ಸಿಡಿಸಿ, ಗುಂಪು ಚದುರಿಸಲಾಯಿತು. ನಂತರ ಕಲ್ಲು ತೂರಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಗಾಯಗೊಳಿಸಿದವರನ್ನು ಸಿಸಿ ಕ್ಯಾಮರಾ ಫುಟೇಜ್‌ಗಳ ಮೂಲಕ ಪತ್ತೆ ಮಾಡಿ ಬಂಧಿಸಲು ತನಿಖಾ ತಂಡಗಳನ್ನು ರಚಿಸಲಾಗಿದ್ದು, ಶೋಧ ಕಾರ್ಯ ನಡೆಯುತ್ತಿದೆ ಎಂದು ಅವರು, ಎಡಿಜಿಪಿಗೆ ಮಾಹಿತಿ ನೀಡಿದರು.

ಬಳಿಕ ನಜರ್‌ಬಾದ್‌ನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಎಡಿಜಿಪಿ ಹಿತೇಂದ್ರ, ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಲಾಗಿದೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆಯೇ ಅದನ್ನು ಪೋಸ್ಟ್ ಮಾಡಿದ ವ್ಯಕ್ತಿಯನ್ನು ತಕ್ಷಣ ಬಂಧಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕಾಗಿತ್ತು ಎಂದರು. ಇದು ತೀವ್ರ ಸೂಕ್ಷ್ಮ ವಿಚಾರವಾದ್ದರಿಂದ ಎಚ್ಚೆತ್ತು ಬ್ಯಾರಿಕೇಡ್ ಅಳವಡಿಸಿ ಕೆಎಸ್‌ಆರ್‌ಪಿ, ಸಿಎಆರ್, ಮೌಂಟೆಡ್, ಸಿವಿಲ್ ಹಾಗೂ ಸಂಚಾರ ಪೊಲೀಸ್ ಸಿಬ್ಬಂದಿಗಳನ್ನು ಕರೆಸಿಕೊಂಡು ಗುಂಪು ಸೇರಲು ಅವಕಾಶ ಕೊಡಬಾರದಿತ್ತು. ಆದರೂ ಸಾವಿರಾರು ಮಂದಿ ಸೇರುತ್ತಿದ್ದಂತೆಯೇ ಆರಂಭದಲ್ಲೇ ಅವರನ್ನು ವಾಪಸ್ ಕಳುಹಿಸದೇ ಗಂಟೆಗಟ್ಟಲೆ ಠಾಣೆ ಬಳಿ ಜಮಾಯಿಸಲು ಅವಕಾಶ ನೀಡಿದ್ದೇ ಕಲ್ಲು ತೂರಾಟಕ್ಕೆ ಆಸ್ಪದವಾಗಿದೆ ಎಂದೂ ಎಡಿಜಿಪಿರವರು ಪೊಲೀಸ್ ಅಧಿಕಾರಿಗಳಲ್ಲಿ ಅರಿವು ಮೂಡಿಸಿದರು. ಕಲ್ಲು ತೂರುತ್ತಿದ್ದಂತೆಯೇ ವಿಡೀಯೋ ಮಾಡಿಕೊಂಡು ಕೃತ್ಯ ಎಸಗಿದವರನ್ನು ವಶಕ್ಕೆ ಪಡೆದು, ಅದೇ ವೇಳೆ ಗುಂಪನ್ನು ಚದುರಿಸುವ ಕೆಲಸ ಮಾಡಬೇಕಿತ್ತು. ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೆ ಪೊಲೀಸ್ ಠಾಣೆ ಎದುರೇ ಕಲ್ಲು ತೂರಿ ಗಾಯಗೊಳಿಸಿದವರ ವಿರುದ್ಧ ತಕ್ಷಣವೇ ಕಾನೂನು ರೀತಿಯ ಕ್ರಮ ವಹಿಸಬೇಕು. ಇಲ್ಲದಿದ್ದರೆ ಸಮಾಜದಲ್ಲಿ ಅರಾಜಕತೆ ಸೃಷ್ಟಿಯಾಗುವುದಲ್ಲದೆ, ಕಾನೂನು–ಸುವ್ಯವಸ್ಥೆ ತಹಬದಿಗೆ ತರಲಾಗದು ಎಂದು ಎಚ್ಚರಿಸಿದ್ದಾರೆ.

ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ವಹಿಸಿ ವೈಯಕ್ತಿಕ ನಿಂದನೆ, ಸಮುದಾಯದ ಸಾಮರಸ್ಯ ಕದಡುವ ಹಾಗೂ ಕೋಮು ಸಂಘರ್ಷ ಉಂಟು ಮಾಡುವ ಪೋಸ್ಟರ್‌ಗಳು, ಹೇಳಿಕೆಗಳು ವೈರಲ್ ಆಗುತ್ತಿದ್ದಂತೆಯೇ ಕ್ರಮ ವಹಿಸಬೇಕು. ಮುಂದೆ ಆ ರೀತಿಯ ಪ್ರಸಂಗ ನಡೆಯದಂತೆ ಎಚ್ಚರ ವಹಿಸಬೇಕು ಎಂದೂ ಸಲಹೆ ನೀಡಿದರು.

ಘಟನೆ ಹಿನ್ನೆಲೆಯಲ್ಲಿ ಉದಯಗಿರಿ ಪೊಲೀಸ್ ಠಾಣೆ ಬಳಿ ದಿನದ 24 ಗಂಟೆಯೂ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಕಟ್ಟೆಚ್ಚರ ವಹಿಸಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ನಿಗಾ ವಹಿಸಿ ಎಂದೂ ಹಿತೇಂದ್ರ ಅವರು ಅಧೀನ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ದಕ್ಷಿಣ ವಲಯ ಡಿಐಜಿ ಡಾ.ಬೋರಲಿಂಗಯ್ಯ, ಎಸ್ಪಿ ಎನ್.ವಿಷ್ಣುವರ್ಧನ, ಡಿಸಿಪಿಗಳಾದ ಎಂ.ಮುತ್ತುರಾಜು, ಎಸ್.ಜಾಹ್ನವಿ, ಎ.ನಾಗಪ್ಪ, ಎಲ್ಲಾ ಉಪವಿಭಾಗಗಳ ಎಸಿಪಿಗಳು ಹಾಗೂ ಇನ್‌ಸ್ಪೆಕ್ಟರ್‌ಗಳು ಈ ಸಂದರ್ಭ ಉಪಸ್ಥಿತರಿದ್ದರು.

ಪೌರಕಾರ್ಮಿಕರು



ನಿರತರಾಗಿದ್ದಾರೆ. ಠಾಣೆಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ಹಾಗೂ ಸುತ್ತಮುತ್ತಲ ಮಳಿಗೆಗಳಲ್ಲಿರುವ ಸಿಸಿ ಕ್ಯಾಮರಾಗಳ ಫುಟೇಜ್ ಸಂಗ್ರಹಿಸಿದ್ದಾರೆ. ಈಗಾಗಲೇ ಸಿಸಿ ಕ್ಯಾಮರಾ ನೆರವಿನಿಂದ 15–20 ಮಂದಿಯನ್ನು ಗುರುತಿಸಿದ್ದಾರೆ ಎನ್ನಲಾಗಿದೆ. ಅವರನ್ನು ಪತ್ತೆಹಚ್ಚಿ ವಿಚಾರಣೆಗೆ ಒಳಪಡಿಸಿದರೆ ಮತ್ತಷ್ಟು ಮಂದಿಯ ಗುರುತು ಸಿಗಲಿದೆ.

ಪೂರ್ವ ನಿಯೋಜಿತವೇ?: ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಂಚಿದ ಆರೋಪದಡಿ ಪೊಲೀಸರು ಸುಮೊಟೋ ಕೇಸ್ ದಾಖಲಿಸಿಕೊಂಡು, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಸಂದರ್ಭದಲ್ಲೇ ಠಾಣೆಯತ್ತ ಕಲ್ಲು ತೂರಿದ್ದನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಪ್ರತಿಭಟನೆ ನೆಪದಲ್ಲಿ ಇದ್ದಕ್ಕಿದ್ದಂತೆ ಕಲ್ಲು ತೂರಾಟ ನಡೆಸಿರುವುದು ಪೂರ್ವ ನಿಯೋಜಿತವೇ ಎಂಬ ಆಯಾಮದಲ್ಲೂ ತನಿಖೆ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಬೂದಿ ಮುಚ್ಚಿದ ಕೆಂಡ: ಸೋಮವಾರ ತಡರಾತ್ರಿವರೆಗೂ ಉದಯಗಿರಿಯಲ್ಲಿ ಪ್ರಕ್ಷುಬ್ಧ ವಾತಾವರಣವಿತ್ತು. ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗದ ಮೂಲಕ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರು. ಆದರೂ ಇಂದು ಕೂಡ ಅಘೋಷಿತ ಬಂದ್ ವಾತಾವರಣ ಕಂಡು ಬಂದಿತು. ಪೊಲೀಸ್ ಬಂದೋಬಸ್ತ್ ಗಟ್ಟಿಯಾಗಿತ್ತು. ಪೊಲೀಸ್ ಠಾಣೆ ಆಸುಪಾಸಿನ ಅಂಗಡಿ ಮುಂಗಟ್ಟುಗಳು ಬಂದ್ ಆಗಿದ್ದವು. ಪೊಲೀಸ್ ನಿರಂತರ ಗಸ್ತು ಇದ್ದಿದ್ದರಿಂದ ಶಾಲಾ–ಕಾಲೇಜುಗಳಲ್ಲಿ ಎಂದಿನಂತೆ ತರಗತಿಗಳನ್ನು ನಡೆಸಲಾಯಿತು. ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದೆಯಾದರೂ ಉದಯಗಿರಿ ಹಾಗೂ ಸುತ್ತಮುತ್ತಲ ಬಡಾವಣೆ ಜನರಲ್ಲಿ ಆತಂಕ ಕಡಿಮೆಯಾಗಿಲ್ಲ. ಬೂದಿ ಮುಚ್ಚಿದ ಕೆಂಡ ಮತ್ತೆಲ್ಲಿ ಭುಗಿಲೇಳುವುದೋ ಎಂಬ ಭಯ ಇನ್ನೂ ಇದೆ. ಆದರೆ ಪೊಲೀಸರು ಮಾತ್ರ ಪರಿಸ್ಥಿತಿ ಶಾಂತವಾಗಿದೆ, ಯಾರೂ ಆತಂಕಕ್ಕೆ ಒಳಗಾಗಬೇಡಿ ಎಂದು ಅಭಯ ನೀಡಿದ್ದಾರೆ.

ಬದಲಾವಣೆ ಇಲ್ಲ

ಸ್ಥಾನದಿಂದ ಕೆಳಗಿಳಿಸಬೇಕೆಂಬ ಪ್ರಯತ್ನದಲ್ಲಿದ್ದ ಭಿನ್ನರಿಗೆ ಮುಖಭಂಗವಾಗಿದೆ. ವಿಜಯೇಂದ್ರ ಸ್ಥಾನಕ್ಕೆ ಬಸವರಾಜ ಬೊಮ್ಮಾಯಿ ಇಲ್ಲವೇ ಮುರುಗೇಶ್ ನಿರಾಣಿಯನ್ನು ತರಲು ಭಿನ್ನರು ಮತ್ತು ತಟಸ್ಥ ಗುಂಪು ದೆಹಲಿಯಲ್ಲಿ ಲಾಭಿ ನಡೆಸಿತ್ತು. ಆದರೆ, ಅವರಿಗೆ ಚಿಕ್ಕಬಳ್ಳಾಪುರ ಜಿಲ್ಲಾ ಘಟಕ ವಿಷಯ ಹೊರತುಪಡಿಸಿ ಯಾವುದೇ ಲಾಭವಾಗಿಲ್ಲ. ಬಂಡಾಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ಜಾರಿಯಾಗಿದ್ದು, ಅವರು ನೀಡುವ ಉತ್ತರದ ಮೇಲೆ ಮುಂದಿನ ಕ್ರಮ ಅವಲಂಭಿಸಿದೆ.

ಕಾವೇರಿ ದೀಪಾರತಿ

ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ನಿರ್ಮಿಸಿರುವ ನಾಲ್ಕು ವೇದಿಕೆಗಳಲ್ಲಿ ಭರತ ನಾಟ್ಯ ಕಲಾವಿದರು ತಮ್ಮ ನೃತ್ಯ ಪ್ರದರ್ಶನದ ಮೂಲಕ ಮನರಂಜನೆಯ ರಸದೌತಣವನ್ನೇ ಬಡಿಸಿದರು. ಗಂಗಾರತಿ ವೀಕ್ಷಿಸಲು ನದಿಯ ದಂಡೆಗೆ ಜನಸಾಗರವೇ ಹರಿದು ಬಂತು. ಜನಜಂಗುಳಿ ನಿಯಂತ್ರಿಸಲು ಪೊಲೀಸರು ಪರದಾಡುವಂತಾಯಿತು. ನಾಳೆ ಬುಧವಾರ ಕುಂಭಮೇಳದ ಕಡೇ ದಿನವಾಗಿದ್ದು ಹಾಗೂ ಮಾಘ ಮಾಸದ ಹುಣ್ಣಿಮೆ ಇರುವುದರಿಂದ ಪುಣ್ಯ ಸ್ನಾನಕ್ಕೆ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ತಹಶೀಲ್ದಾರ್ ಸುರೇಶಾಚಾರ್, ಡಿಐಜಿ ಡಾ.ಎಂ.ಬಿ.ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಪುರಸಭೆ ಅಧ್ಯಕ್ಷೆ ವಸಂತ ಶ್ರೀಕಂಠ, ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಮಾಜಿ ಉಪಾಧ್ಯಕ್ಷ ಪ್ರೇಮಾ ಮರಯ್ಯ, ತಾ.ಪಂ.ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಪುರಸಭಾ ಸದಸ್ಯರಾದ ಸಿ.ಪ್ರಕಾಶ್, ರೂಪಾ ಕರಿಯಪ್ಪ, ಮಾಜಿ ಉಪಾಧ್ಯಕ್ಷ ಪುಟ್ಟು, ಆರ್.ಚೇತನ್, ಲಕ್ಷ್ಮಣ ದೀಪಾರತಿ ವೇಳೆ ಹಾಜರಿದ್ದರು.

ಸಭೆ ಮತ್ತೆ ಮುಂದೂಡಿಕೆ

ದಿನಾಂಕ ಮುಂದೂಡಲಾಗಿದೆ. ಮುಂದಿನ ದಿನಾಂಕ ವನ್ನು ತಿಳಿಸಲಾಗುವುದು ಎಂದು ತಿಳಿಸಿದ್ದಾರೆ. ಚಾಮರಾಜನಗರದಲ್ಲಿ ಈಗಾಗಲೇ ಸಮಾವೇಶಕ್ಕಾಗಿ ಭರದಿಂದ ಸಿದ್ಧತೆ ನಡೆಯುತ್ತಿದ್ದು, ಭಾಗಶಃ ಶಾಮಿಯಾನ ಹಾಕುವ ಕಾರ್ಯ ಮುಕ್ತಾಯಗೊಂಡಿದೆ. ಬೃಹತ್ ಮಟ್ಟದ ಸಮಾವೇಶ ನಡೆಸಲು ಉದ್ದೇಶಿಸಲಾಗಿದ್ದು,

20 ಸಾವಿರಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇತ್ತು. ಮಲೆ ಮಹದೇಶ್ವರ ಬೆಟ್ಟದಲ್ಲಿ ಕ್ಯಾಬಿನೆಟ್ ಸಭೆ ಗೂ ಸಿದ್ಧತೆ ನಡೆಯುತ್ತಿದ್ದು, ಜರ್ಮನ್ ಟೆಂಟ್ ಹಾಕಲಾಗಿದೆ. ತಾತ್ಕಾಲಿಕ ಹೆಲಿಪ್ಯಾಡ್, ರಸ್ತೆಗಳು, ಮೂಲಸೌಕರ್ಯವನ್ನು ಅಚ್ಚುಕಟ್ಟಾಗಿ ಮಾಡಲಾಗುತ್ತಿದೆ. ಈಗ ಕ್ಯಾಬಿನೆಟ್ ಸಭೆ ಮೂರು ಬಾರಿ ಮುಂದೂಡಿಕೆ ಆದಂತಾಗಿದೆ. ಜನವರಿ ಮೊದಲನೇ ವಾರದ ಬಳಿಕ ಫೆ14, 15 ಅದಾದ ಬಳಿಕ ಫೆ17, 18ರಂದು ನಿಗದಿಯಾಗಿತ್ತು. ನಂತರ, ಫೆ.16ರಂದು ಚಾಮರಾಜನಗರದಲ್ಲಿ ಸಮಾವೇಶ, 17ಕ್ಕೆ ಸಂಪುಟ ಸಭೆ ಎಂದು ನಿರ್ಧರಿಸಲಾಗಿತ್ತು. ಈಗ ಈ ದಿನಾಂಕವೂ ಮುಂದೂಡಿಕೆಯಾಗಿದೆ.

ಇನ್‌ವೆಸ್ಟ್ ಕರ್ನಾಟಕ 2025: ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ



ಬೆಂಗಳೂರು, ಫೆ.11– ನಗರದ ಅರಮನೆ ಆವರಣದಲ್ಲಿ ಆಯೋಜಿಸಲಾಗಿರುವ ಇನ್‌ವೆಸ್ಟ್ ಕರ್ನಾಟಕ 2025 ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಮಂಗಳವಾರ ಚಾಲನೆ ನೀಡಿದರು. ಮೂರು ದಿನಗಳ ಸಮಾವೇಶ ಪ್ರತಿಷ್ಠಿತ ಕಂಪನಿಗಳೊಂದಿಗೆ ಹೂಡಿಕೆ ಒಪ್ಪಂದ, ವಿಚಾರ ಸಂಕಿರಣ, ನೀತಿ ಘೋಷಣೆಗೆ ಸಾಕ್ಷಿಯಾಗಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್, ಕೇಂದ್ರ ಆಹಾರ ಮತ್ತು ನಗರ ಪೂರೈಕೆ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮಹೀಂದ್ರ ಸಮೂಹದ ಮುಖ್ಯಸ್ಥ ಆನಂದ್ ಮಹೀಂದ್ರ, ಜೆಎಸ್‌ಡಬ್ಲ್ಯೂ ಗ್ರೂಪ್ ಮುಖ್ಯಸ್ಥ ಸಜ್ಜನ್ ಜಿಂದಾಲ್, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ, ಕಿರ್ಲೋಸ್ಕಾರ್ ಸಿಸ್ಟಮ್ ಮುಖ್ಯಸ್ಥೆ ಗೀತಾಂಜಲಿ ಕಿರ್ಲೋಸ್ಕರ್, ಹೀರೋ ಫ್ಯೂಚರ್ ಎನರ್ಜಿ ಮುಖ್ಯಸ್ಥ ರಾಹುಲ್ ಮುಂಜಲ್ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ನಾವೀನ್ಯತೆ, ಕೈಗಾರಿಕಾ ಅಭಿವೃದ್ಧಿ ಮತ್ತು ಜಾಗತಿಕ ಪಾಲುದಾರಿಕೆ ಉತ್ತೇಜಿಸುವಲ್ಲಿ ಕರ್ನಾಟಕದಲ್ಲಿನ ಕಾರ್ಯತಂತ್ರದ ಅನುಕೂಲಗಳನ್ನು ಎತ್ತಿ ತೋರಿಸುವ ಗುರಿಯನ್ನು ಹೊಂದಿರುವ ಮೂರು ದಿನಗಳ ಜಾಗತಿಕ ಹೂಡಿಕೆದಾರರ ಸಭೆಯು ಫೆ.14ರವರೆಗೆ ನಡೆಯಲಿದೆ.

'ಪ್ರಗತಿಯ ಮರು ಕಲ್ಪನೆ' ಥೀಮ್ ನೊಂದಿಗೆ ನಡೆಯುತ್ತಿರುವ ಸಮಾವೇಶದಲ್ಲಿ 10 ಲಕ್ಷ ಕೋಟಿ ರೂ. ಮೊತ್ತದ ಹೂಡಿಕೆ ಪ್ರಸ್ತಾಪಗಳನ್ನು ಆಕರ್ಷಿಸುವ ನಿರೀಕ್ಷೆಯಿದೆ. 75ಕ್ಕೂ ಹೆಚ್ಚು ಮಳಿಗೆಗಳು, 25ಕ್ಕೂ ಹೆಚ್ಚು ತಾಂತ್ರಿಕ ಸೆಷನ್ಗಳು, 10 ಕ್ಕೂ ಹೆಚ್ಚು ದೇಶದ ಸೆಷನ್ಸ್ ಮತ್ತು SME ಸಂಬಂಧಿತ ಚರ್ಚೆಗಳನ್ನು ಒಳಗೊಂಡಿರುವ ಸಮಾವೇಶವು ಜಾಗತಿಕ ಆರ್ಥಿಕ ಪ್ರವೃತ್ತಿಗಳು, ಹೊಸ ತಂತ್ರಜ್ಞಾನಗಳ ಬಗ್ಗೆ ಮಹತ್ವದ ಮಾಹಿತಿ ನೀಡಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

12 ವಿಶೇಷ ಹೂಡಿಕೆ ವಲಯ ಸ್ಥಾಪನೆ

ಬೆಂಗಳೂರು: ರಾಜ್ಯದಲ್ಲಿ ಸಮಗ್ರ ಕೈಗಾರಿಕಾ ಬೆಳವಣಿಗೆ ಸಾಧಿಸಲು ಈಗ ಇರುವ 200ಕ್ಕೂ ಹೆಚ್ಚು ಕೈಗಾರಿಕಾ ಪ್ರದೇಶಗಳ ಜೊತೆಗೆ 30 ಸಾವಿರ ಎಕರೆ ವಿಸ್ತೀರ್ಣದಲ್ಲಿ 12 ವಿಶೇಷ ಹೂಡಿಕೆ ವಲಯಗಳನ್ನು ಸ್ಥಾಪಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ತಿಳಿಸಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ಇದಕ್ಕಾಗಿ ಇತ್ತೀಚೆಗೆ ಅಧಿಸೂಚನೆ ಹೊರಡಿಸಿದ್ದು, ಇಲ್ಲೆಲ್ಲ ವಿಶ್ವ ದರ್ಜೆಯ ಮೂಲಸೌಕರ್ಯ ಒದಗಿಸಲಾಗುವುದು. ಕೆಐಎಡಿಬಿ ರಾಜ್ಯದಲ್ಲಿ ಈಗಾಗಲೇ 85 ಸಾವಿರ ಎಕರೆಗೂ ಹೆಚ್ಚು ವಿಸ್ತೀರ್ಣದ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಿದ್ದು, ಇಲ್ಲಿ 25 ಸಾವಿರ ಕೈಗಾರಿಕೆಗಳು ನೆಲೆಯೂರಿವೆ ಎಂದಿದ್ದಾರೆ. ಉತ್ಪಾದನಾ ವೆಚ್ಚ ಕಡಿಮೆಯಾಗಿ, ದಕ್ಷತೆ ಹೆಚ್ಚಾಗಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ಇದನ್ನು ಸಾಧಿಸಲು 'ಕ್ಲಸ್ಟರ್ ಆಧಾರಿತ ನೀತಿ' ಅಳವಡಿಸಿಕೊಳ್ಳಲಾಗಿದೆ. ಹೀಗಾಗಿ ಬೇರೆಬೇರೆ ಭಾಗಗಳಲ್ಲಿ ಏರೋಸ್ಪೇಸ್ ಮತ್ತು ಡಿಫೆನ್ಸ್, ಇ.ವಿ.ತಯಾರಿಕೆ ಕ್ಲಸ್ಟರ್, ಫಾರ್ಮಾ, ಡೀಪ್–ಟೆಕ್ ಮತ್ತು ಡ್ರೋನ್ ಪಾರ್ಕ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಕೈಗಾರಿಕಾ ಪ್ರದೇಶಗಳಿಗೆ ಹತ್ತಿರದ ನದಿ ಮೂಲಗಳಿಂದ ಶುದ್ಧ ಕುಡಿಯುವ ನೀರು ಪೂರೈಸಲು 3,800 ಕೋಟಿ ರೂ. ಮೊತ್ತದ ಬೃಹತ್ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಚೀನಾದಿಂದ ತೀವ್ರ ಸವಾಲು ಎದುರಾಗಿದ್ದು, ತಯಾರಿಕೆ ವಲಯದ ಚಿತ್ರಣವೇ ಬದಲಾಗಬೇಕಾದ ಅನಿವಾರ್ಯತೆ ಇದೆ. ಜೊತೆಗೆ ಜಾಗತಿಕ ಅಸ್ಥಿರತೆಯ ಸಮಸ್ಯೆಯೂ ಇದೆ ಎಂದರು.

ಉದಯಗಿರಿಯಲ್ಲಿ ಮಂಗಳವಾರ ರಾತ್ರಿ ಪೊಲೀಸ್ ಗಸ್ತು...



ಕಲ್ಲು ತೂರಾಟದಿಂದ ಪ್ರಕ್ಷುಬ್ಧಗೊಂಡಿದ್ದ ಉದಯಗಿರಿಯಲ್ಲಿ ಮಂಗಳವಾರ ರಾತ್ರಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ, ಎಸಿಪಿಗಳು ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾಲ್ನಡಿಗೆಯಲ್ಲಿ ಸಂಚರಿಸಿ, ಸಾರ್ವಜನಿಕರಿಗೆ ಧೈರ್ಯ ತುಂಬಿದರು.

ತ್ರಿವೇಣಿ ಸಂಗಮದಲ್ಲಿ ಡಿ.ಕೆ.ಶಿವಕುಮಾರ್ ಪುಣ್ಯಸ್ನಾನ

ಕಾವೇರಿ ಆರತಿ ಕಣ್ತುಂಬಿಕೊಂಡ ಡಿಕೆಶಿ



ತ್ರಿವೇಣಿ ಸಂಗಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುಣ್ಯಸ್ನಾನ ಮಾಡಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಫೆ.11– ದಕ್ಷಿಣದ ಪ್ರಯಾಗ್ ರಾಜ್ ಎಂದೇ ಪ್ರಸಿದ್ಧವಾಗಿರುವ ತಿರುಮಕೂಡಲಿನ ತ್ರಿವೇಣಿ ಸಂಗಮಕ್ಕೆ ಮಂಗಳವಾರ ರಾತ್ರಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ನೀಡಿ ಪುಣ್ಯಸ್ನಾನ ಮಾಡಿದರು.

ಬೆಂಗಳೂರಿನಿಂದ ತ್ರಿವೇಣಿ ಸಂಗಮಕ್ಕೆ ರಸ್ತೆ ಮೂಲಕ ನೇರವಾಗಿ ಆಗಮಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥಸ್ವಾಮೀಜಿ ಬರಮಾಡಿಕೊಂಡರು. ಬಳಿಕ ಕಾವೇರಿ, ಕಪಿಲ, ಸ್ಫಟಿಕ ಸರೋವರಗಳು ಸೇರುವ ತ್ರಿವೇಣಿ ಸಂಗಮದ ಕಾವೇರಿ ನದಿಯಲ್ಲಿ ಪುಣ್ಯಸ್ನಾನ ಮಾಡಿದ ಡಿ.ಕೆ.ಶಿವಕುಮಾರ್, ನಂತರ ನದಿಯಲ್ಲಿರುವ ನಡುಹೊಳೆ ಬಸಪ್ಪನಿಗೆ ಹಾಗೂ ಕಾವೇರಿ ಮಾತೆಗೆ ವಿಶೇಷ ಪೂಜೆ ಸಲ್ಲಿಸಿದರು. ಅಲ್ಲದೇ ವಾರಣಾಸಿ ಗಂಗಾರತಿ ಮಾದರಿ ನಡೆದ ಕಾವೇರಿ ಆರತಿ ಕಣ್ತುಂಬಿಕೊಂಡರು. ನಂತರ ಅಗಸ್ತ್ಯೇಶ್ವರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ಈ ವೇಳೆ ಶಾಸಕರಾದ ಗಣಿಗ ರವಿಕುಮಾರ್, ಉದಯ್, ದರ್ಶನ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ಅಗಸ್ತ್ಯೇಶ್ವರ ದೇವಾಲಯದ ಪಾರುಪತ್ತೇಗಾರ ಚೇತನ್, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಪುರಸಭಾ ಸದಸ್ಯ ಸಿ.ಪ್ರಕಾಶ್, ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ಆರ್.ಚೇತನ್, ಪೊಲೀಸ್ ಇಲಾಖೆ ಅಧಿಕಾರಿಗಳು ಸೇರಿದಂತೆ ಇತರರಿದ್ದರು.

ಫೆ.15, ಪ್ರಗತಿ ಪರಿಶೀಲನಾ ಸಭೆ

ಮೈಸೂರು, ಫೆ.11– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 'ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನೆ' ಸಭೆಯನ್ನು ಫೆಬ್ರವರಿ 15 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ, ಸಿದ್ಧಾರ್ಥನಗರ ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಗಿದೆ. ಸದರಿ ಸಭೆಗೆ ವಿವಿಧ ಕನ್ನಡಪರ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತೀಯ ಕಲೆಗಳು ವಿವಿಧ ರೋಗ ನಿವಾರಣೆಗೂ ಪೂರಕ

- ಆಯಿಷ್ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಅಭಿಮತ
- ತನುಶ್ರೀ ಎಸ್.ಚಿನ್ನಯ್ಯ ಭರತನಾಟ್ಯ ರಂಗಪ್ರವೇಶ



ಮೈಸೂರಿನ ಕಲಾಮಂದಿರದಲ್ಲಿ ತನುಶ್ರೀ ಚಿನ್ನಯ್ಯ ಅವರ ಭರತನಾಟ್ಯ ರಂಗ ಪ್ರವೇಶ ಕಾರ್ಯಕ್ರಮವನ್ನು ಚಿತ್ರನಟ ಮಂಡ್ಯ ರಮೇಶ್ ಉದ್ಘಾಟಿಸಿದರು.

ಮೈಸೂರು,ಫೆ.11(ಪಿಎಂ)– ಭಾರತೀಯ ಕಲೆಗಳು ಕೇವಲ ಆತ್ಮಾನಂದಕ್ಕೆ ಮಾತ್ರ ಸೀಮಿತವಲ್ಲ. ಅವುಗಳು ವಿವಿಧ ರೋಗಗಳ ನಿವಾರಣೆಗೂ ಪೂರಕವಾಗಿವೆ ಎಂದು ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್) ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ವತಿಯಿಂದ ಭಾನುವಾರ ಆಯೋಜಿಸಿದ್ದ ಯುವ ಕಲಾವಿದೆ ತನುಶ್ರೀ ಎಸ್.ಚಿನ್ನಯ್ಯ ಅವರ ಭರತನಾಟ್ಯ ರಂಗ ಪ್ರವೇಶ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ನಿರಂತರ ಅಭ್ಯಾಸ, ಪರಿಶ್ರಮದಿಂದ ಕಲೆಗಳು ಒಲಿಯುವ ಜೊತೆಗೆ ಅವು ಉಳಿಯಲೂ ಸಾಧ್ಯ. ಇಂತಹ ಕಲಾ ಸಾಧಕರು ಮಾಡುವ ಕಲಾಪ್ರದರ್ಶನಗಳನ್ನು ಆಸ್ವಾದಿಸಿದಾಗ ಅನೇಕ ಒತ್ತಡಗಳು ನಿವಾರಣೆಯಾಗುತ್ತವೆ. ಪಾಲಕರು ಮಕ್ಕಳಿಗೆ ಕಲೆ ಮತ್ತು ಸಾಹಿತ್ಯದ ಅಭಿರುಚಿಗಳನ್ನು ಬೆಳೆಸಬೇಕು ಎಂದರು.

ಕಲೆಗಳು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಪೂರಕವಾಗಲಿವೆ. ಸಂಗೀತ ಮತ್ತು ನೃತ್ಯ ಕಲೆಗಳು ವಿದ್ಯಾರ್ಥಿಯ ಸಮಗ್ರ ವಿಕಸನಕ್ಕೂ ಕಾರಣವಾಗಲಿವೆ. ಈ ನಿಟ್ಟಿನಲ್ಲಿ ತನುಶ್ರೀಯಂತಹ ಉದಯೋನ್ಮುಖ ಭರತನಾಟ್ಯ ಕಲಾವಿದೆಯನ್ನು ನಮ್ಮ ಸಂಸ್ಥೆ ಹೊಂದಿರುವುದು ವಿಶೇಷ ಎಂದರು.

ರಂಗಕರ್ಮಿ, ಚಿತ್ರನಟ ಮಂಡ್ಯ ರಮೇಶ್ ಮಾತನಾಡಿ, ತನುಶ್ರೀ ಚಿನ್ನಯ್ಯ ಅವರಿಗೆ ಅತ್ಯುತ್ತಮ ಕಲಾಭಿವ್ಯಕ್ತಿ ಇದೆ. ಪದವಿ ಪೂರ್ಣಗೊಂಡ ನಂತರ ಅವರು ವಾಕ್ ಮತ್ತು ಶ್ರವಣ ತಜ್ಞೆ ಆಗಲಿದ್ದು, ಅವರ ವೃತ್ತಿಗೆ ಭರತನಾಟ್ಯ ಮತ್ತು ಸಂಗೀತ ಪ್ರವೃತ್ತಿಗಳು ಪೂರಕವಾಗಲಿವೆ ಎಂದರು.

ಗುರುವಂದನೆ: ಇದೇ ವೇಳೆ ಹಿರಿಯ ವಿದುಷಿಯರಾದ ಡಾ.ಆರ್.ಎನ್.ಶ್ರೀಲತಾ, ಡಾ.ಕೃಪಾ ಫಡ್ಕೆ (ನೃತ್ಯ ಗಿರಿ ಸಂಸ್ಥೆ ನಿರ್ದೇಶಕರು) ಅವರಿಗೆ ಗುರುವಂದನೆ ಸಮರ್ಪಿಸಲಾಯಿತು. ತನುಶ್ರೀ ರಂಗ ಪ್ರವೇಶದ ಭರತನಾಟ್ಯ ಪ್ರದರ್ಶನಕ್ಕೆ ವಿದ್ವಾಂಸರಾದ ಪೂಜಾ ಸುಗಂ (ನಟುವಾಂಗ) ಆರ್.ರಾಜೀವ್ (ಗಾಯನ), ಜಿ.ಎಸ್.ನಾಗರಾಜ್ (ಮೃದಂಗ) ಮತ್ತು ಎ.ಪಿ.ಕೃಷ್ಣಪ್ರಸಾದ್ (ಕೊಳಲು) ಪಕ್ಕವಾದ್ಯದಲ್ಲಿ ಸಹಕಾರ ನೀಡಿದರು. ನೂರಾರು ಕಲಾರಸಿಕರು ಮತ್ತು ಕಲಾಭಿಮಾನಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಮುಖ್ಯ ಶಿಕ್ಷಕ ಚಿನ್ನಯ್ಯ, ಅಭಿಯೋಜನಾ ಇಲಾಖೆ ಎಫ್‌ಡಿಸಿ ಸುಮಲತಾ ಮತ್ತಿತರರು ಹಾಜರಿದ್ದರು.

ಮೊಬೈಲ್, ಟಿವಿ ಬಿಟ್ಟು ಕಷ್ಟಪಟ್ಟು ಓದಿದರೆ ಬದುಕಿನ ದಿಕ್ಕೆ ಬದಲಾಗುತ್ತೆ

ವ್ಯಕ್ತಿತ್ವ ವಿಕಸನದ ಕಾರ್ಯಕ್ರಮ ಉದ್ಘಾಟಿಸಿದ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯತ್ರಿ ಸಲಹೆ



ಮೈಸೂರಿನ ಕುವೆಂಪುನಗರದ ಬಿಸಿಎಂ ಹಾಸ್ಟೆಲ್ ಆವರಣದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವೃತ್ತಿಪರ ಕೋರ್ಸ್‌ಗಳ ಶೈಕ್ಷಣಿಕ ಮಾರ್ಗದರ್ಶನ ಮತ್ತು ಸಿ.ಇ.ಟಿ. ಕೌನ್ಸೆಲಿಂಗ್ ಪ್ರಕ್ರಿಯೆ ಕುರಿತ ಕಾರ್ಯಾಗಾರ ಹಾಗೂ ವ್ಯಕ್ತಿತ್ವ ವಿಕಸನದ ಕಾರ್ಯಕ್ರಮವನ್ನು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಉದ್ಘಾಟಿಸಿದರು.

ಮೈಸೂರು, ಫೆ.11(ಜಿಎ)–ವಿದ್ಯಾರ್ಥಿಗಳು ಮೊಬೈಲ್, ಟಿವಿ, ಹೊರಗೆ ಸುತ್ತಾಡುವ ಆಕರ್ಷಣೆಯಿಂದ ದೂರವಿದ್ದು ಕಷ್ಟಪಟ್ಟು ಓದಿದರೆ ಬದುಕಿನ ದಿಕ್ಕೆ ಬದಲಾವಣೆಯಾಗುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ತಿಳಿಸಿದರು.

ಮೈಸೂರಿನ ಕುವೆಂಪುನಗರದ ಬಿಸಿಎಂ ಹಾಸ್ಟೆಲ್ ಆವರಣದಲ್ಲಿ ಸೋಮವಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವೃತ್ತಿಪರ ಕೋರ್ಸ್‌ಗಳ ಶೈಕ್ಷಣಿಕ ಮಾರ್ಗದರ್ಶನ ಮತ್ತು ಸಿ.ಇ.ಟಿ. ಕೌನ್ಸೆಲಿಂಗ್ ಪ್ರಕ್ರಿಯೆ ಕುರಿತ ಕಾರ್ಯಾಗಾರ ಹಾಗೂ ವ್ಯಕ್ತಿತ್ವ ವಿಕಸನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಈ ಸಮಯವನ್ನು ಓದಿಗೆ ಮಾತ್ರ ಮೀಸಲಿಟ್ಟು, ಆತ್ಮವಿಶ್ವಾಸ ವಿಟ್ಟುಕೊಂಡು ಪರಿಶ್ರಮದಿಂದ ಗುರಿ ಇಟ್ಟುಕೊಂಡು ನಿಮ್ಮ ಬದುಕನ್ನು ಕಟ್ಟಿಕೊಳ್ಳಲು ನೀವೇ ನಿರ್ಧರಿಸಬೇಕು. ಈ ಹಿಂದೆ ಈಗಿರುವಷ್ಟು ಸೌಲಭ್ಯಗಳು ಇಲ್ಲದಿದ್ದರೂ ಬಿಸಿಎಂ ಹಾಸ್ಟೆಲ್‌ನಲ್ಲಿ ಓದಿದ ವಿದ್ಯಾರ್ಥಿಗಳು ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಪನ್ಮೂಲ ವ್ಯಕ್ತಿಗಳು ಹೇಳುವ ವಿಷಯವನ್ನು ಸಂಗ್ರಹಿಸಿಕೊಂಡು ನಿಮ್ಮದೇ ಆದ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದರು.

ನಿಮ್ಮ ತಂದೆ–ತಾಯಿಯವರು ಕನಸನ್ನು ಕಟ್ಟಿಕೊಂಡು ನಿಮ್ಮನ್ನು ಹಾಸ್ಟೆಲ್‌ಗೆ ಕಳಿಸಿದ್ದಾರೆ. ನಿಲಯಪಾಲಕರು, ಅಧಿಕಾರಿಗಳು ನಿಮ್ಮ ಬಗ್ಗೆ ಕಾಳಜಿವಹಿಸಿ ಕೆಲಸ ಮಾಡುತ್ತಿದ್ದಾರೆ. ಬಿಸಿಎಂ ಹಳೆ ವಿದ್ಯಾರ್ಥಿ ಸಂಘ ನಿಮ್ಮ ಭವಿಷ್ಯ ರೂಪಿಸಲು ಕಾರ್ಯಾಗಾರ ಮಾಡುತ್ತಿದ್ದಾರೆ. ಈ ಕಾರ್ಯಾಗಾರ ಯಶಸ್ವಿಯಾಗಲಿ ಎಂದರು.

ಮೈಸೂರು ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು ಹಾಗೂ ರಾಜ್ಯ ಕೆಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಮಾತನಾಡಿ, ಹಿರಿಯರ ಸಲಹೆ ಮೇರೆಗೆ ಸಂಘವನ್ನು ಸ್ಥಾಪನೆ ಮಾಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯರವರು ಉದ್ಘಾಟಿಸಿದ್ದಾರೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನದ ಅವಶ್ಯಕತೆ ಅರಿತು ಈ ಕಾರ್ಯಾಗಾರವನ್ನು ಮಾಡುತ್ತಿದ್ದೇವೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಅಂಕ ಕಡಿಮೆ ಬಂದಿದೆ ಎಂದು ಹತಾಶರಾಗಬಾರದು, ದುಃಖಪಡಬಾರದು. ಭಯ, ಆತಂಕ ಬಿಟ್ಟು ಮರಳಿ ಯತ್ನವ ಮಾಡಿದರೆ ಶ್ರಮಕ್ಕೆ ಪ್ರತಿಫಲ ಇದ್ದೇ ಇರುತ್ತದೆ ಎಂದು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದರು.

ಸಂಪನ್ಮೂಲ ವ್ಯಕ್ತಿಗಳು ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಡಾ.ಎ.ಎಸ್.ರವಿ ಮಾತನಾಡಿ, ಪಿಯುಸಿ ವಿದ್ಯಾರ್ಥಿಗಳು ಎರಡು ವರ್ಷ ತಪಸ್ಸು ಮಾಡಬೇಕು. ನಾನು ಪರೀಕ್ಷೆ ಬರೆಯಬೇಕು ಎಂಬ ಮನಸ್ಥಿತಿ ಇರಬೇಕು. ನಾನು ಸಮರ್ಥನಿದ್ದೇನೆ ಎಂದು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಮೆಡಿಕಲ್, ಇಂಜಿನಿಯರಿಂಗ್ ಸೀಟ್ ಸಿಗಲಿಲ್ಲ ಎಂದು ನಿರಾಶರಾಗುವ ಅವಶ್ಯಕತೆ ಇಲ್ಲ. ಜೀವನವನ್ನು ರೂಪಿಸಿಕೊಳ್ಳಲು ಬಹಳಷ್ಟು ಕೋರ್ಸ್‌ಗಳಿವೆ. ನಿಮ್ಮ ಆಸಕ್ತಿಗೆ ಅನುಗುಣವಾಗಿ ಓದಿ ಗುರಿ ಸಾಧಿಸಿ ಎಂದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ರಾಘವೇಂದ್ರ, ವಾಲ್ಮೀಕಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಶಿವಕುಮಾರ್, ಹುಣಸೂರು ತಾಲೂಕು ತಹಸೀಲ್ದಾರ್ ಮಂಜುನಾಥ್, ಡಾ.ಜಗದೀಶ್, ತಾಲೂಕು ಕಲ್ಯಾಣಾಧಿಕಾರಿ ಚಂದ್ರಕಲಾ, ಸಿಂಡಿಕೇಟ್ ಸದಸ್ಯ ಮಹೇಶ್ ಸೋಸಲೆ, ಅಹಿಂದ ಜವರಪ್ಪ, ಬ್ಯಾಡ್ರಳ್ಳಿ ನಂದೀಶ, ಕಾರ್ಯದರ್ಶಿ ಬಿ.ಪಿ.ರಾಜೇಶ್, ಖಜಾಂಚಿ ರುಕ್ಮಾಂಗದ, ನವೀನ್, ನಿಲಯಪಾಲಕರಾದ ಜಗದೀಶ್ ಕೋರಿ, ನಾಗರಾಜ್ ವಡ್ಗಲ್ ಮತ್ತಿತರರು ಉಪಸ್ಥಿತರಿದ್ದರು.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಜನ್ಮ ದಿನಾಚರಣೆ

ಸಾಹಿತ್ಯಾಸಕ್ತರಿಂದ ಶ್ರೀಯುತರ ಗುಣಗಾನ



ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಜನ್ಮ ದಿನವನ್ನು ಮಂಗಳವಾರ ಆಚರಿಸಲಾಯಿತು.

ಮೈಸೂರು, ಫೆ.11(ಎಸ್‌ಪಿಎನ್)– ಇಲ್ಲಿನ ರಾಮ ಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾ ಲಯ ಆವರಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಕನ್ನಡ ಸಾಹಿತ್ಯ ಕಲಾಕೂಟ ಸಹಯೋಗದೊಂದಿಗೆ ಏರ್ಪಡಿಸಿದ್ದ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಜನ್ಮ ದಿನವನ್ನು ಮಂಗಳವಾರ ಆಚರಿಸಲಾಯಿತು.

ಸಾಹಿತಿ ದೇವರಾಜು ಪಿ.ಚಿಕ್ಕಹಳ್ಳಿ ಮಾತನಾಡಿ, ಕನ್ನಡ ಅಧ್ಯಯನ ಕೇಂದ್ರದಲ್ಲಿ ಮೊದಲ ಬಾರಿಗೆ ಹಸ್ತಪ್ರತಿ ವಿಭಾಗ ಸ್ಥಾಪಿಸಿದ ಜಿಎಸ್‌ಎಸ್, ನಾಲ್ಕು ವರ್ಷಗಳಲ್ಲಿ 3 ಸಾವಿರಕ್ಕೂ ಹೆಚ್ಚು ಓಲೆಗರಿ ಹಾಗೂ ಸಾವಿರಕ್ಕೂ ಹೆಚ್ಚು ಹಸ್ತಪ್ರತಿಗಳ ಸಂಗ್ರಹ ಕೀರ್ತಿಗೆ ಪಾತ್ರರಾಗಿದ್ದರು ಎಂದು ತಿಳಿಸಿದರು.

ನಂತರ ಮಾತನಾಡಿದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ರಾಷ್ಟ್ರಕವಿಗಳಾದ ಗೋವಿಂದ ಪೈ, ಕುವೆಂಪು ನಂತರ 2006ರ ನ.1ರಂದು ಸುವರ್ಣ ಕರ್ನಾಟಕ ಮಹೋತ್ಸವ ಸಂದರ್ಭದಲ್ಲಿ ಜಿಎಸ್‌ಎಸ್ ಅವರಿಗೆ 'ರಾಷ್ಟ್ರಕವಿ' ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಘೋಷಿಸಿತು ಎಂದು ಅಭಿಪ್ರಾಯಪಟ್ಟರು. ಜಿ.ಎಸ್.ಶಿವರುದ್ರಪ್ಪ ಅವರು, ವಿಮರ್ಶಕರಾಗಿ, ಕವಿಯಾಗಿ ಆಧುನಿಕ ಕನ್ನಡ ನವ್ಯಕಾವ್ಯಕ್ಕೆ ಹೊಸ ಹುರುಪು ತಂದುಕೊಡುವಲ್ಲಿ ಅವರ ಬರಹಗಳು ಯಶಸ್ವಿಯಾಗಿವೆ. ಅಲ್ಲದೆ, ಕವಿ ಜಿ.ಎಸ್. ಶಿವರುದ್ರಪ್ಪ ಅವರು 1976ರ ಫೆ.7ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಈಸೂರಿನಲ್ಲಿ ಗುಗ್ಗರಿ ಶಾಂತವೀರಪ್ಪ ಮತ್ತು ವೀರಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಶಿಕಾರಿಪುರದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪೂರೈಸಿ, ಕನ್ನಡದಲ್ಲಿ ಎಂ.ಎ ಪದವಿ ಮುಗಿಸಿದರು. ನಂತರ 1986ರಲ್ಲಿ ಬೆಂಗಳೂರು ವಿವಿ ಪ್ರಾಧ್ಯಾಪಕರಾಗಿ ಸೇವೆಗೆ ಸೇರಿ ದರು. ನಂತರ ದಾವಣಗೆರೆ, ಶಿವಮೊಗ್ಗ, ಮೈಸೂರು ಸೇರಿದಂತೆ ಇತರೆಡೆ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅಂತೆಯೇ 1987–90ರ ಅವಧಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾ ಗಿಯೂ ಸೇವೆ ಸಲ್ಲಿಸಿದ್ದಾರೆ ಎಂದರು.

ಪ್ರಾಚೀನ ಕನ್ನಡ ಸಾಹಿತ್ಯವನ್ನು ಸಂಧಾನ ಮಾಡಿದ ವಿದ್ವಾಂಸರ ತಂಡದಲ್ಲಿ ಜಿಎಸ್‌ಎಸ್ ಪ್ರಮುಖರಾಗಿದ್ದರು. ಇವರ ಸಂಪಾದಕತ್ವದಲ್ಲಿ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಆರು ಸಂಪುಟಗಳಲ್ಲಿ ಪ್ರಕಟಗೊಂಡಿರುವುದು ಕನ್ನಡ ಸಾಹಿತ್ಯ ಚರಿತ್ರೆಗೆ ಮಹತ್ವದ ಕೊಡುಗೆಯಾಗಿದೆ ಎಂದರು. ಜಿ.ಎಸ್.ಎಸ್ ರಚಿಸಿದ ಕವನ ಸಂಕಲನಗಳಾದ ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಕಾರ್ತಿಕ, ಚಕ್ರಗತಿ, ಅನಾವರಣ, ತೆರೆದ ದಾರಿ, ಪ್ರೀತಿ ಇಲ್ಲದ ಮೇಲೆ, ಕಾಡಿನ ಕತ್ತಲಲ್ಲಿ, ಜಾರಿದ ಹೂವು, ಎದೆ ತುಂಬಿ ಹಾಡಿದೆನು ಸೇರಿದಂತೆ ಇತರೆ ಕವನ ಸಂಕಲನವನ್ನು ಹೊರತಂದಿದ್ದಾರೆ. ಜಿ.ಎಸ್.ಶಿವರುದ್ರಪ್ಪ ಅವರು ಕನ್ನಡಕ್ಕೆ ಸಲ್ಲಿಸಿರುವ ಅಮೂಲ್ಯ ಸಾಧನೆಗೆ 1974ರಲ್ಲಿ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, 1982ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, 1984ರಲ್ಲಿ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1997ರಲ್ಲಿ ಪ್ರೊ.ಭೂಸನೂರ ಮಠ ಪ್ರಶಸ್ತಿ ಮತ್ತು ಗೊರೂರು ಪ್ರಶಸ್ತಿ, 1998ರಲ್ಲಿ ಪಂಪ ಪ್ರಶಸ್ತಿ, 2000ರಲ್ಲಿ ಮಾಸ್ತಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಲಭಿಸಿದೆ ಎಂದು ತಿಳಿಸಿದರು.

ನಂತರ ಜಿಎಸ್‌ಎಸ್ ರಚಿತ ಕವಿತೆಗಳನ್ನು ಜಾನಪದ ಗಾಯಕ ಮಹಾಲಿಂಗು ಮತ್ತು ತಂಡದ ಕಲಾವಿದರು ಹಾಡಿದರು. ವೇದಿಕೆಯಲ್ಲಿ ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಪರಮಹಂಸ ಯೋಗ ಮಹಾವಿದ್ಯಾಲಯದ ಸಂಸ್ಥಾಪಕ ಶಿವಪ್ರಕಾಶ್, ಮೈಸೂರು ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ಸಿಇಓ ಕೆಆರ್.ಯೋಗಾನರಸಿಂಹನ್, ಲೇಖಕಿ ಲತಾ ಮೋಹನ್, ವ್ಯಂಗ್ಯ ಚಿತ್ರಕಾರ ಎಂ.ವಿ.ನಾಗೇಂದ್ರ ಬಾಬು, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ಮೈಸೂರು: ದೇವನೂರು ವಿದ್ಯುತ್ ವಿತರಣಾ ಕೇಂದ್ರದಿಂದ ಹೊರ ಹೊಮ್ಮುವ 11 ಕೆ.ವಿ. ಫೀಡರ್‌ನಲ್ಲಿ ತುರ್ತು ಕಾಮಗಾರಿ ನಿಮಿತ್ತ ಫೆ.12 ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ರಾಘವೇಂದ್ರನಗರ, ಶಕ್ತಿ ನಗರ, ಯರಗನಹಳ್ಳಿ, ಸಾಯಿಬಾಬಾ ಟೆಂಪಲ್ ರಸ್ತೆ, ಉರ್ದು ಟೀಚರ್ಸ್ ಬಡಾವಣೆ, ದೇವೇಗೌಡ ವೃತ್ತ, ಟೀಚರ್ಸ್ ಬಡಾವಣೆ, ಸಾತಗಳ್ಳಿ, ವಿದ್ಯಾಶಂಕರ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯಾಗಲಿದೆ. ಅಂತೆಯೇ ಸೌತ್ (ದಕ್ಷಿಣ) ವಿದ್ಯುತ್ ವಿತರಣಾ ಕೇಂದ್ರ ಗಳಿಂದ ಹೊರ ಹೊಮ್ಮುವ 11 ಕೆ.ವಿ. ಕೃಷ್ಣಮೂರ್ತಿಪುರಂ ಫೀಡರ್‌ನಲ್ಲಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಫೆ.13 ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆ ಯವರೆಗೆ ಅಶೋಕಪುರಂ 1ನೇ ಕ್ರಾಸ್‌ನಿಂದ 13ನೇ ಕ್ರಾಸ್‌ವರೆಗೆ, ಕೃಷ್ಣ ಮೂರ್ತಿಪುರಂ 1ನೇ ಕ್ರಾಸ್‌ನಿಂದ 7ನೇ ಕ್ರಾಸ್‌ವರೆಗೆ, ಕೆ.ಆರ್ ಪುರಂ ರೈಲ್ವೆ ವರ್ಕ್ ಶಾಪ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯಾಗ ಲಿದ್ದು, ಸಾರ್ವಜನಿಕರು, ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಚೆಸ್ಕಾಂನ ಪ್ರಕಟಣೆ ತಿಳಿಸಿದೆ.

ಫೆ.15, 16 ಮೈಸೂರಲ್ಲಿ ನಟ ಡಾಲಿ ಧನಂಜಯ್ ಅದ್ದೂರಿ ವಿವಾಹ

ಸಿದ್ಧತೆಗಳ ಪರಿಶೀಲನೆ, ಅಭಿಮಾನಿಗಳಿಗೆ ಮುಕ್ತ ಅವಕಾಶ



ಮೈಸೂರು, ಫೆ.11(ಜಿಎ)–ಮೈಸೂರಿನ ವಸ್ತುಪ್ರದರ್ಶನದ ಮೈದಾನದಲ್ಲಿ ನಡೆಯುವ ಸ್ಯಾಂಡಲ್‌ವುಡ್ ನಟ ಡಾಲಿ ಧನಂಜಯ್ ಅವರ ಅದ್ದೂರಿ ವಿವಾಹ ಮಹೋತ್ಸವಕ್ಕೆ ಅಭಿಮಾನಿಗಳು ಪಾಲ್ಗೊಳ್ಳಲು ಮುಕ್ತ ಅವಕಾಶ ನೀಡಲಾಗಿದೆ.

ಫೆ.15ಮತ್ತು 16ರಂದು ಮೈಸೂರಿನ ವಸ್ತುಪ್ರದರ್ಶನ ಮೈದಾನದ ಆವರಣದಲ್ಲಿ ನಟ ಡಾಲಿ ಧನಂಜಯ್ ವಿವಾಹ ಮಹೋತ್ಸವ ಅದ್ದೂರಿಯಾಗಿ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಡಾಲಿ ಧನಂಜಯ್ ಮಂಗಳವಾರ ಮೈದಾನದಲ್ಲಿ ನಡೆಯುತ್ತಿರುವ ಸಿದ್ಧತೆಗಳನ್ನು ಪರಿಶೀಲಿಸಿ, ನಂತರ ಮಾಧ್ಯಮಗಳೊಂದಿಗೆ ಮಾತನಾಡಿದರು.



ಮೈಸೂರಿನ ವಸ್ತುಪ್ರದರ್ಶನ ಮೈದಾನದ ಆವರಣದಲ್ಲಿ ನಟ ಡಾಲಿ ಧನಂಜಯ್ ವಿವಾಹ ಮಹೋತ್ಸವ ಅದ್ದೂರಿಯಾಗಿ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಡಾಲಿ ಧನಂಜಯ್ ಮೈದಾನದಲ್ಲಿ ನಡೆಯುತ್ತಿರುವ ಸಿದ್ಧತೆಗಳನ್ನು ಪರಿಶೀಲಿಸಿದರು.

ದೇಶ, ವಿದೇಶ, ರಾಜ್ಯ, ಅಂತರಾಜ್ಯದಲ್ಲಿರುವ ಎಲ್ಲಾ ಸ್ನೇಹಿತರು, ಚಿತ್ರರಂಗದ ಗಣ್ಯರು, ರಾಜಕಾರಣಿಗಳು ಹಾಗೂ ಅಭಿಮಾನಿಗಳಿಗೆ ಆಮಂತ್ರಣ ಪತ್ರ ನೀಡಲಾಗಿದೆ. ಮತ್ತೊಂದೆಡೆ ಮದುವೆಗೆ ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಮೈಸೂರಿನಲ್ಲೇ ಮದುವೆ ಆಗಬೇಕು ಎನ್ನುವುದು ನಮ್ಮ ಕನಸು. ನನ್ನ ವಿದ್ಯಾಭ್ಯಾಸ, ಚಿತ್ರರಂಗಕ್ಕೆ ಕಾಲಿಟ್ಟಿದ್ದು ಎಲ್ಲವು ಮೈಸೂರಿನಿಂದಲೇ. ತಾಯಿ ಚಾಮುಂಡೇಶ್ವರಿ ಆಶೀರ್ವಾದ ಸಿಗಲಿ ಎಂಬ ಉದ್ದೇಶದಿಂದ ಮೈಸೂರಿನಲ್ಲಿ ಮದುವೆ ಆಗುತ್ತಿದ್ದೇವೆ ಎಂದು ಹೇಳಿದರು.

> "ನನಗೆ ಮಂತ್ರ ಮಾಂಗಲ್ಯ, ವಚನ ಮಾಂಗಲ್ಯ, ರಿಜಿಸ್ಟರ್ ಮದುವೆ ಆಗುವ ಆಸೆ ಇತ್ತು. ನಮ್ಮ ಕುಟುಂಬದ ಸದಸ್ಯರು, ಚಿತ್ರರಂಗ, ಸ್ನೇಹಿತರು ಎಲ್ಲರಿಗೂ ಊಟ ಹಾಕಿಸಬೇಕು. ಹೀಗಾಗಿ ಒಂದೇ ವೇದಿಕೆಯಲ್ಲಿ ಎಲ್ಲರಿಗೂ ಊಟ ಹಾಕಿ ಆಶೀರ್ವಾದ ಪಡೆಯೋಣ ಎಂಬ ಆಸೆಯಿಂದ ಇಲ್ಲಿ ಮದುವೆ ಆಗುತ್ತಿದ್ದೇನೆ. –ಡಾಲಿ ಧನಂಜಯ

ಪ್ರಮುಖವಾಗಿ ಅಭಿಮಾನಿಗಳು ಮದುವೆಯನ್ನು ಕಣ್ತುಂಬಿಕೊಳ್ಳಬೇಕು ಎಂಬ ಉದ್ದೇಶದಿಂದ ಅವರಿಗೆ ಯಾವುದೇ ತೊಂದರೆಯಾಗದಂತೆ ವೇದಿಕೆ ಮುಂದೆ ಬಂದು ನಮಗೆ ಆಶೀರ್ವಾದ ಮಾಡಲು ಮದುವೆಯಲ್ಲಿ ಪಾಲ್ಗೊಳ್ಳಲು ಮುಕ್ತ ಅವಕಾಶ ನೀಡಿದ್ದೇವೆ. ಅಭಿಮಾನಿಗಳಿಗಾಗಿ ವಿದ್ಯಾಪತಿ ದ್ವಾರ ಮೂಲಕ ಎಂಟ್ರಿ ಇರುತ್ತದೆ. ಚಿತ್ರರಂಗ, ರಾಜಕೀಯ ನಾಯಕರು ಎಲ್ಲರನ್ನು ಮದುವೆಗೆ ಕರೆದಿದ್ದೇನೆ. ಎಲ್ಲರೂ ಬಂದು ಆಶೀರ್ವಾದ ಮಾಡಬೇಕು ಎಂಬುದು ನಮ್ಮ ಬಯಕೆ. ಅಹ್ವಾನ ನೀಡಿರುವವರು ಬರುತ್ತಾರೆ ಎಂಬ ನಿರೀಕ್ಷೆ ಇದೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯ ಮಾದರಿಯಲ್ಲಿ ವೇದಿಕೆ ನಿರ್ಮಾಣ ಆಗುತ್ತಿದೆ. ದಕ್ಷಿಣ ಭಾರತದ ಮಾದರಿಯ ಊಟದ ವ್ಯವಸ್ಥೆ ಇದೆ. ಅಭಿಮಾನಿಗಳು, ವಿಐಪಿಗಳಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರಿಗೂ ಒಂದೇ ಮಾದರಿಯ ಊಟ ಇರುತ್ತದೆ. ಆದರೆ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಮಾಡಲಾಗಿದೆ. ಎಲ್ಲರೂ ಮದುವೆಗೆ ಬನ್ನಿ ಹಾರೈಸಿ ಎಂದು ನಟ ಡಾಲಿ ಧನಂಜಯ ಮನವಿ ಮಾಡಿದರು.

ನಟ ದರ್ಶನ್‌ಗೆ ವಿವಾಹ ಆಮಂತ್ರಣ ಪತ್ರಿಕೆ ನೀಡುವ ವಿಚಾರ ಕುರಿತು ಪ್ರತಿಕ್ರಿಯಿಸಿ, ನನ್ನ ಮದುವೆಗೆ ದರ್ಶನ್ ಅವರು ಬಂದರೆ ನನಗೆ ತುಂಬಾ ಸಂತೋಷ. ಈಗಿನ ಪರಿಸ್ಥಿತಿಯಲ್ಲಿ ಅವರನ್ನು ಭೇಟಿ ಮಾಡಲು ಆಗುತ್ತಿಲ್ಲ. ಕನ್ನಡ ಚಿತ್ರರಂಗದ ಎಲ್ಲರನ್ನೂ ಕರೆದಿದ್ದೇನೆ. ದರ್ಶನ್ ಅವರನ್ನು ಕರೆಯಲು ಪ್ರಯತ್ನ ಮಾಡುತ್ತಿದ್ದೇನೆ. ದರ್ಶನ್ ಅವರು ಸಿಗುತ್ತಿಲ್ಲ. ಖಂಡಿತವಾಗಿ ದರ್ಶನ್ ನನ್ನ ಮದುವೆಗೆ ಬಂದರೆ ನನಗೆ ಸಂತೋಷ ಎಂದರು.

ದೇಶ - ವಿದೇಶ

ಗಾಜಾದಲ್ಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡದಿದ್ದಲ್ಲಿ ಕದನ ವಿರಾಮ ರದ್ದು



ವಾಷಿಂಗ್ಟನ್: ಶನಿವಾರದೊಳಗೆ ಗಾಜಾದಲ್ಲಿ ಹಿಡಿದಿಟ್ಟಿರುವ ಎಲ್ಲ ಒತ್ತೆಯಾಳುಗಳನ್ನು ಹಮಾಸ್ ಬಿಡುಗಡೆ ಮಾಡದಿದ್ದಲ್ಲಿ ಇಸ್ರೇಲ್–ಹಮಾಸ್ ಕದನ ವಿರಾಮ ಒಪ್ಪಂದವನ್ನು ರದ್ದುಗೊಳಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಆದಾಗ್ಯೂ, ಈ ಕುರಿತು ಅಂತಿಮ ನಿರ್ಧಾರ ಇಸ್ರೇಲ್‌ಗೆ ಬಿಟ್ಟಿದ್ದು ಎಂದು ಹೇಳಿದ್ದಾರೆ. ಸುಮಾರು ಒಂದೂವರೆ ವರ್ಷಗಳ ನಿರಂತರ ಯುದ್ಧದ ಬಳಿಕ ಇಸ್ರೇಲ್ ಹಾಗೂ ಹಮಾಸ್ ಮಧ್ಯೆ ಕದನ ವಿರಾಮ ಒಪ್ಪಂದ ಏರ್ಪಟ್ಟಿತ್ತು. ಮೂರು ವಾರಗಳ ಹಿಂದಿನ ಕದನ ವಿರಾಮ ಒಪ್ಪಂದವನ್ನು ಇಸ್ರೇಲ್ ಉಲ್ಲಂಘಿಸಿದೆ ಎಂದು ಆರೋಪಿಸಿರುವ ಹಮಾಸ್, ಗಾಜಾ ಪಟ್ಟಿಯಲ್ಲಿ ಒತ್ತೆಯಾಳುಗಳ ಬಿಡುಗಡೆ ವಿಳಂಬಗೊಳಿಸುವುದಾಗಿ ಹೇಳಿತ್ತು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿರುವ ಟ್ರಂಪ್, ಎಲ್ಲ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವಂತೆ ಇಸ್ರೇಲ್ ಒತ್ತಾಯಿಸುವ ಸಮಯ ಬಂದಿದೆ. ಇಲ್ಲದಿದ್ದರೆ ಯುದ್ಧ ಪುನರಾರಂಭಿಸಬೇಕು. ಅಂತಿಮ ನಿರ್ಧಾರ ಇಸ್ರೇಲ್‌ಗೆ ಬಿಟ್ಟಿದ್ದು, ನಾನು ನನ್ನ ನಿರ್ಧಾರವನ್ನು ಹೇಳಿದ್ದೇನೆ. ಆದರೆ ನನ್ನ ಹೇಳಿಕೆಯು ಹಮಾಸ್‌ಗೆ ಅರ್ಥವಾಗುತ್ತದೆ ಎಂದು ಟ್ರಂಪ್ ಹೇಳಿದ್ದಾರೆ.

ಕುಂಭಮೇಳದಿಂದ ಹಿಂದಿರುಗುತ್ತಿದ್ದ ವಾಹನ ಅಪಘಾತ: 9 ಮಂದಿ ಸಾವು



ಮಧ್ಯಪ್ರದೇಶ: ಪ್ರಯಾಗರಾಜ್‌ನಲ್ಲಿ ಅಮೃತ ಸ್ನಾನ ಮಾಡಿ ವಾಪಸ್ ಆಗುವ ವೇಳೆ ಟಿಟಿ ವಾಹನ ಹಾಗೂ ಸಿಮೆಂಟ್ ಟ್ರಕ್ ನಡುವೆ ಬಜಲ್‌ಪುರ ಜಿಲ್ಲೆಯ ಸಿಹೋರಾ ಬಳಿಯ ರಾಷ್ಟ್ರೀಯ ಹೆದ್ದಾರಿ 30ರಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಆಂಧ್ರಪ್ರದೇಶ ಮೂಲದ 9 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ.

ಪ್ರತ್ಯಕ್ಷದರ್ಶಿಗಳ ಪ್ರಕಾರ, ಮಧ್ಯಪ್ರದೇಶದ ಜಬಲ್‌ಪುರ ಜಿಲ್ಲೆಯ ಸಿಹೋರಾ ಬಳಿ ಪವಿತ್ರ ಸ್ನಾನ ಮುಗಿಸಿ ಬರುತ್ತಿದ್ದ ಟಿಟಿ ವಾಹನಕ್ಕೆ ಹೆದ್ದಾರಿಯಲ್ಲಿ ವಿರುದ್ಧ ದಿಕ್ಕಿನಲ್ಲಿ ಬಂದ ಸಿಮೆಂಟ್ ಟ್ರಕ್‌ವೊಂದು ಮುಖಾಮುಖಿ ಡಿಕ್ಕಿ ಹೊಡೆದಿದೆ. ಹೆದ್ದಾರಿಯಲ್ಲಿ ವಿರುದ್ಧ ಡಿಕ್ಕಿನಲ್ಲಿ ಬಂದ ಟ್ರಕ್ ನೋಡಿ ಟಿಟಿ ಚಾಲಕ ಹಾರ್ನ್ ಮಾಡಿ ವಾಹನವನ್ನು ಬದಿಗೆ ಎಳೆದುಕೊಂಡಿದ್ದಾನೆ. ಅಷ್ಟರಲ್ಲಿ ಟ್ರಕ್ ನೇರವಾಗಿ ಟಿಟಿ ವಾಹನಕ್ಕೆ ರಭಸವಾಗಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ವಾಹನ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಟ್ರಕ್ ಚಾಲಕ ಸ್ಥಳದಿಂದ ಎಸ್ಕೇಪ್ ಆಗಿದ್ದಾನೆ. ಅಪಘಾತದಲ್ಲಿ ಗಂಭೀರ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈ ಸಂಬಂಧ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವರ್ಷಾಂತ್ಯಕ್ಕೆ ಸಾರ್ವತ್ರಿಕ ಚುನಾವಣೆ: ಬಾಂಗ್ಲಾದೇಶ ಚುನಾವಣಾ ಆಯೋಗ



ಢಾಕಾ(ಬಾಂಗ್ಲಾದೇಶ): ಡಿಸೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆ ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಬಾಂಗ್ಲಾದೇಶ ಚುನಾವಣಾ ಆಯೋಗ ಮಂಗಳವಾರ ಹೇಳಿದೆ.

ಚುನಾವಣಾ ಆಯುಕ್ತ ಅಬುಲ್ ಫಜಲ್ ಮೊಹಮ್ಮದ್ ಸನಾವುಲ್ಲಾ ಅವರು ಸುದ್ದಿಗಾರರಿಗೆ ಈ ಮಾಹಿತಿ ನೀಡಿದ್ದಾರೆ. ದೇಶದಲ್ಲಿ ಕಾನೂನು–ಸುವ್ಯವಸ್ಥೆ ಕುಸಿಯುತ್ತಿದೆ. ಆರ್ಥಿಕ ಸ್ಥಿತಿಯೂ ಹದಗೆಟ್ಟಿರುವ ಕಾರಣ, ಡಿಸೆಂಬರ್‌ನಲ್ಲಿ ಚುನಾವಣೆಗಳನ್ನು ನಡೆಸಿ, ಹೊಸ ಸರ್ಕಾರ ರಚನೆಗೆ ದಾರಿ ಮಾಡಿಕೊಡಬೇಕು ಎಂದು ಮಾಜಿ ಪ್ರಧಾನಿ ಖಲೀದಾ ಜಿಯಾ ನೇತೃತ್ವದ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷ (ಬಿಎನ್‌ಪಿ) ಪ್ರಸ್ತಾವ ಮಂಡಿಸಿತ್ತು. ಬಿಎನ್‌ಪಿ ಬೇಡಿಕೆಗೆ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನುಸ್ ಕೂಡ ಒಪ್ಪಿಗೆ ಸೂಚಿಸಿದ್ದರು. ಇದರ ಬೆನ್ನಲ್ಲೇ, ಚುನಾವಣಾ ಆಯೋಗದಿಂದ ಈ ಹೇಳಿಕೆ ಹೊರಬಿದ್ದಿದೆ.

ವಿಶ್ವನಾಥನ ದರ್ಶನ ಪಡೆದು ಮಲಗಿದ್ದಲ್ಲೇ ಕೊನೆಯುಸಿರೆಳೆದ ಹಿರಿಯ ಕ್ರೀಡಾಪಟು



ವಾರಾಣಸಿ: ಮಂಗಳೂರು ಮೂಲದ ಹಿರಿಯ ಕ್ರೀಡಾಪಟು ಬೃಂದಾ ಪ್ರಭು ಅವರು ತೀರ್ಥಯಾತ್ರೆಗೆಂದು ತೆರಳಿದ್ದ ವೇಳೆ ಮಲಗಿದ್ದಲ್ಲೇ ಕೊನೆಯುಸಿರೆಳೆದಿದ್ದಾರೆ.

68 ವರ್ಷದ ಬೃಂದಾ ಅವರು ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳಕ್ಕೆ ತೆರಳಿ ಪುಣ್ಯಸ್ನಾನದ ಬಳಿಕ ಭಾನುವಾರ ಸಂಜೆ ಕಾಶಿ ವಿಶ್ವನಾಥನ ದರ್ಶನ ಪಡೆದು ಕೊಠಡಿಯಲ್ಲಿ ಮಲಗಿದ್ದವರು ಕೊನೆಯುಸಿರೆಳೆದಿದ್ದಾರೆ ಎಂದು ತಿಳಿದು ಬಂದಿದೆ. ಬೃಂದಾ ಅವರು ಫುಟ್‌ಬಾಲ್ ಆಟಗಾರ್ತಿಯಾಗಿದ್ದು ಭಾರತದ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ವಾಲಿಬಾಲ್ ತಂಡವನ್ನು ಪ್ರತಿನಿಧಿಸಿದ್ದರು. ಅವರ ಪತಿ ಉದಯ್ ಪ್ರಭು ಭಾರತದ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟು, ಧ್ಯಾನ್‌ಚಂದ್ ಪ್ರಶಸ್ತಿ ವಿಜೇತ ಉದಯ್ ಪ್ರಭು. ದಂಪತಿಯ ಪುತ್ರಿ ಅಮೆರಿಕದಲ್ಲಿ ನೆಲೆಸಿದ್ದಾರೆ. ಪತಿ ಉದಯ್ ಪ್ರಭು ಅವರು ವಾರಾಣಸಿಗೆ ತೆರಳಿದ್ದು ಮಂಗಳವಾರ ಅಲ್ಲೇ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

155 ಅಡಿ ಸೇತುವೆಯಿಂದ ಕಂದಕಕ್ಕೆ ಉರುಳಿದ ಬಸ್: 55 ಮಂದಿ ಸಾವು



ಗ್ವಾಟೆಮಾಲಾ: ಗ್ವಾಟೆಮಾಲಾ ರಾಜಧಾನಿಯ ಹೊರವಲಯದಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕನಿಷ್ಠ 55 ಜನರು ಸಾವನ್ನಪ್ಪಿದ್ದಾರೆ. ಬಸ್ಸೊಂದು ಸೇತುವೆಯಿಂದ ಉರುಳಿ ಕಂದಕಕ್ಕೆ ಬಿದ್ದಿದೆ.

ಘಟನಾ ಸ್ಥಳದಲ್ಲಿ 53 ಶವಗಳನ್ನು ಹೊರತೆಗೆಯಲಾಗಿದ್ದು, ಇಬ್ಬರು ಪ್ರಯಾಣಿಕರು ಸ್ಯಾನ್ ಜುವಾನ್ ಡಿ ಡಿಯೋಸ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಸಾರ್ವಜನಿಕ ಸಚಿವಾಲಯದ ತನಿಖಾಧಿಕಾರಿಗಳು ತಿಳಿಸಿದ್ದಾರೆ. ಬೆಳಗಿನ ಜಾವದಲ್ಲಿ ಬಹು ವಾಹನಗಳು ಡಿಕ್ಕಿ ಹೊಡೆದ ಪರಿಣಾಮ ಬಸ್ ರಸ್ತೆಯಿಂದ ಹೊರಟು ಸೇತುವೆಯ ಕೆಳಗಿನ ಕಡಿದಾದ ಕಮರಿಗೆ ಉರುಳಿತು. ಬಸ್ಸು 115 ಅಡಿ (35 ಮೀಟರ್) ಆಳದ ಕೊಳಚೆ ನೀರು ತುಂಬಿದ ಕಂದಕಕ್ಕೆ ತಲೆಕೆಳಗಾಗಿ ಬಿದ್ದು ಅರ್ಧ ಮುಳುಗಿತ್ತು. ಗ್ವಾಟೆಮಾಲಾ, ಮಧ್ಯ ಅಮೇರಿಕದ ಒಂದು ದೇಶ. ವಾಯುವ್ಯಕ್ಕೆ ಮೆಕ್ಸಿಕೊ, ನೈರುತ್ಯಕ್ಕೆ ಶಾಂತ ಮಹಾಸಾಗರ, ಈಶಾನ್ಯಕ್ಕೆ ಬೆಲೀಝ್ ಮತ್ತು ಕೆರಿಬ್ಬಿಯನ್ ಸಮುದ್ರ ಹಾಗೂ ಆಗ್ನೇಯಕ್ಕೆ ಹೊಂಡುರಾಸ್ ಮತ್ತು ಎಲ್ ಸಾಲ್ವಡಾರ್‌ಗಳನ್ನು ಈ ದೇಶ ಹೊಂದಿದೆ.

ಮೈಸೂರು ಮಿತ್ರ ಬುಧವಾರ 12 ಫೆಬ್ರವರಿ 2025

ಕಟ್ಟೆಮಾಡು ಮೃತ್ಯುಂಜಯ ದೇವಾಲಯದ ಆಚಾರ-ವಿಚಾರ ಸಂಬಂಧ ಆಡಳಿತ ಮಂಡಳಿಯಿಂದ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಕೆ



ಕಟ್ಟೆಮಾಡು ಮೃತ್ಯುಂಜಯ ದೇವಾಲಯ ಆಡಳಿತ ಮಂಡಳಿ ಮತ್ತು ಸಮಿತಿ ಸದಸ್ಯರು ಸಭೆಯ ವರದಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿದರು.

ನಿಷೇಧಾಜ್ಞೆ ಮುಂದುವರಿಕೆ

ಮಾರ್ಚ್ 13ರವರೆಗೆ ಕಟ್ಟೆಮಾಡು ದೇವಾಲಯ ವ್ಯಾಪ್ತಿಯಲ್ಲಿ ಸೆಕ್ಷನ್ 163ರ ಅಡಿ ನಿಷೇಧಾಜ್ಞೆ ಮುಂದುವರೆಸಲಾಗಿದೆ. ಪೊಲೀಸ್ ಇಲಾಖೆ ವರದಿ ಆಧರಿಸಿ ಈ ನಿಷೇಧಾಜ್ಞೆ ತೆರವು ಸಂಬಂಧ ತೀರ್ಮಾನಿಸಲಾಗುವುದು.

–ವೆಂಕಟ್‌ರಾಜಾ, ಜಿಲ್ಲಾಧಿಕಾರಿ



ಮಡಿಕೇರಿ, ಫೆ.11– ಕಟ್ಟೆಮಾಡು ಮಹಾಮೃತ್ಯುಂಜಯ ದೇವಾಲಯದ ವಸ್ತ್ರಸಂಹಿತೆ ವಿವಾದಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತದ ಸೂಚನೆ ಮೇರೆಗೆ ದೇವಾಲಯ ಆಡಳಿತ ಮಂಡಳಿ ಮತ್ತು ಸಮಿತಿ ಸದಸ್ಯರು ಸಭೆ ನಡೆಸಿ ಮಂಗಳವಾರ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದರು.

ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಕಟ್ಟೆಮನೆ ಶಶಿ ಜನಾರ್ಧನ ಮತ್ತು ಸದಸ್ಯರು, ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರನ್ನು ಭೇಟಿ ಮಾಡಿ ದೇವಾಲಯದ ಬೈಲಾ, ಸಭೆಯ ಹಾಜರಾತಿ ಹಾಗೂ ಸಭೆಯಲ್ಲಿ ಕೇಳಿ ಬಂದ ಪರ–ವಿರೋಧ, ಗ್ರಾಮಸ್ಥರು ಮತ್ತು ಅಲ್ಲಿರುವ ವಿವಿಧ ಸಮುದಾಯಗಳು ನೀಡಿರುವ ಮನವಿಯನ್ನು ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಟ್ಟೆಮನೆ ಶಶಿ ಜನಾರ್ಧನ, ದೇವಾಲಯದ ಆಚಾರ–ವಿಚಾರಕ್ಕೆ ಸಂಬಂಧಿಸಿದಂತೆ ವರದಿ ಸಲ್ಲಿಸುವಂತೆ ಜಿಲ್ಲಾಡಳಿತ ಫೆ.10ರವರೆಗೆ ಕಾಲಾವಕಾಶ ನೀಡಿತ್ತು. ಅದರನ್ವಯ ಸಭೆ ನಡೆಸಿ ವರದಿಯನ್ನು ಜಿಲ್ಲಾಡಳಿತಕ್ಕೆ ನೀಡಲಾಗಿದೆ. ದೇವಾಲಯದ ಬೈಲಾದಲ್ಲಿ ಯಾವೊಂದು ಜನಾಂಗದ ಸಂಪ್ರದಾಯ ಆಚರಣೆಗೆ ಇಲ್ಲಿ ಅವಕಾಶ ಇಲ್ಲ ಎನ್ನುವುದನ್ನು ಉಲ್ಲೇಖಿಸಲಾಗಿದೆ. ಇನ್ನುಳಿದ 16 ಕಾಲಂಗಳಲ್ಲಿ ಸರ್ಕಾರದ ಆದೇಶಗಳನ್ನು ಪಾಲಿಸಲಾಗಿದೆ. ಸಭೆಯಲ್ಲಿ ಗ್ರಾಮಸ್ಥರು ನೀಡಿರುವ ಪರ–ವಿರೋಧ ಮನವಿಗಳನ್ನು ಜಿಲ್ಲಾಧಿಕಾರಿಗೆ ಹಸ್ತಾಂತರಿಸಲಾಗಿದೆ ಎಂದರು.

ಗ್ರಾಮಸ್ಥರ ತೀರ್ಮಾನದಂತೆ ಬೈಲಾ ಯಥಾ ಸ್ಥಿತಿಯಲ್ಲಿ ಮುಂದುವರೆಯಬೇಕು. ಅದಕ್ಕೆ ಯಾವುದೇ ಸೇರ್ಪಡೆ ಮಾಡಬಾರದೆಂದು ಜಿಲ್ಲಾಡಳಿತಕ್ಕೆ ನೀಡಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಅಂತೂ ಜಿಲ್ಲಾಡಳಿತದ ನಿರ್ಧಾರಕ್ಕೆ ಬದ್ಧರಾಗುವುದಾಗಿ ಹೇಳಿದ ಶಶಿ ಜನಾರ್ಧನ, ಜಿಲ್ಲಾಡಳಿತದ ಮುಂದಿನ ಆದೇಶ ನಿರೀಕ್ಷೆ ಮಾಡುವುದಾಗಿ ಹೇಳಿದರು.

ಕಾನೂನು ಕ್ರಮ: ದೇವಾಲಯ ಆಡಳಿತ ಮಂಡಳಿ ಮತ್ತು ಸಮಿತಿ ಸದಸ್ಯರ ವರದಿ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ದೇವಾಲಯ ಆಡಳಿತ ಮಂಡಳಿಯ 13 ಮತ್ತು ಸಮಿತಿಯ 46 ಸದಸ್ಯರು ಸಭೆ ನಡೆಸಿ ವರದಿ ಸಲ್ಲಿಸಿದ್ದಾರೆ. ಗ್ರಾಮಸ್ಥರು ಮತ್ತು ಸಮುದಾಯದ ಪರವಾಗಿಯೂ ಮನವಿ ಸಲ್ಲಿಸಲಾಗಿದೆ. ಈ ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಬ್ಯಾನರ್‌ಗೆ ಕಿಡಿಗೇಡಿಗಳಿಂದ ಬೆಂಕಿ: ಪ್ರತಿಭಟನೆ



ಬ್ಯಾನರ್‌ಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದನ್ನು ಖಂಡಿಸಿ ಎಂದು ಅಂಬೇಡ್ಕರ್ ಭವನ ಉಳಿಸಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಯಿತು.

ಮಡಿಕೇರಿ, ಫೆ.11–ಅಂಬೇಡ್ಕರ್ ಭವನ ಉಳಿಸಿ ಹೋರಾಟ ಸಮಿತಿ ನೇತೃತ್ವದಲ್ಲಿ ನಗರದ ಅಂಬೇಡ್ಕರ್ ಭವನವನ್ನು ತಮ್ಮ ವಶಕ್ಕೆ ನೀಡಬೇಕೆಂದು ಆಗ್ರಹಿಸಿ ಸೋಮವಾರ ನಡೆದ ಧರಣಿಯಲ್ಲಿ ಅಳವಡಿಸಿದ್ದ ಬ್ಯಾನರ್‌ಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿ ನಾಶಪಡಿಸಿರುವ ಘಟನೆ ನಡೆದಿದೆ.

ಹೋರಾಟ ಸಮಿತಿ ಅಧ್ಯಕ್ಷ ಹೆಚ್.ಎಲ್.ದಿವಾಕರ್ ನೇತೃತ್ವದಲ್ಲಿ ಅಂಬೇಡ್ಕರ್ ಭವನದ ಮುಂಭಾಗ ಧರಣಿ ನಡೆಸಲಾಗಿತ್ತು. ಈ ಸಂದರ್ಭ ಪ್ರತಿಭಟನಾ ಸ್ಥಳದಲ್ಲಿ ಅಳವಡಿಸಿದ್ದ ಬ್ಯಾನರ್‌ಗಳಿಗೆ ರಾತ್ರಿ ಬೆಂಕಿ ಹಚ್ಚಿ ನಾಶಪಡಿಸಲಾಗಿದೆ. ಮಂಗಳವಾರ ಬೆಳಗ್ಗೆ ವಿಷಯ ತಿಳಿದು ಹೋರಾಟ ಸಮಿತಿ ಅಧ್ಯಕ್ಷ ಹೆಚ್.ಎಲ್.ದಿವಾಕರ್, ಪ್ರಮುಖರಾದ ಮೋಹನ್ ಮೌರ್ಯ, ಹೆಚ್.ಸಿ.ಸತೀಶ್, ದೀಪಕ್, ಕುಮಾರ್ ಮತ್ತಿತರರು ಸ್ಥಳದಲ್ಲಿ ಸಮಾವೇಶಗೊಂಡು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅಂಬೇಡ್ಕರ್ ಭಾವಚಿತ್ರ ಒಳಗೊಂಡ ಬ್ಯಾನರ್‌ಗೆ ಕಿಡಿಗೇಡಿಗಳು ಬೆಂಕಿ ಹಚ್ಚಿ ನಾಶಪಡಿಸಿರುವುದು ಅಕ್ಷಮ್ಯ. ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಕೆಲಕಾಲ ಪ್ರತಿಭಟನೆ ನಡೆಸಿದರು.

ಪೊಲೀಸರ ಜೊತೆ ವಾಗ್ವಾದ: ಹೋರಾಟ ಸಮಿತಿ ಪ್ರಮುಖರು ಹಾಗೂ ನಗರಸಭಾ ಸದಸ್ಯ ಹೆಚ್.ಸಿ.ಸತೀಶ್ ಕಿಡಿಗೇಡಿಗಳು ಬ್ಯಾನರ್‌ಗೆ ಬೆಂಕಿ ಹಚ್ಚಿ ನಾಶಪಡಿಸಿರುವುದಕ್ಕೆ ಪೊಲೀಸರ ನಿರ್ಲಕ್ಷ್ಯವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭ ಸ್ಥಳದಲ್ಲಿದ್ದ ನಗರ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಪಿ.ಕೆ. ರಾಜು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದಾಗ ಮಾತಿನ ಚಕಮಕಿ ನಡೆಯಿತು. ಪ್ರತಿಭಟನೆಗೆ ಅನುಮತಿ ಪಡೆದವರು ಬ್ಯಾನರ್‌ಗಳನ್ನು ತಮ್ಮ ಜೊತೆ ಒಯ್ಯಬೇಕು. ಸಂಘಟನೆಗಳ ವಿಚಾರದಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಮಧ್ಯಕ್ಕೆ ತರುವುದು ಬೇಡ ಎಂದರು.

ಕಚೇರಿಯಲ್ಲಿ ಕುಸಿದು ಆಹಾರ ಇಲಾಖೆ ಉಪನಿರ್ದೇಶಕ ಶ್ರೀಧರಮೂರ್ತಿ ಸಾವು



ಮಡಿಕೇರಿ, ಫೆ.11–ಕೊಡಗು ಜಿಲ್ಲಾ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಶ್ರೀಧರಮೂರ್ತಿ (59) ಮಂಗಳವಾರ ಬೆಳಗ್ಗೆ ಕಚೇರಿಯಲ್ಲಿ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ಬೆಳಗ್ಗೆ 11.30ರಲ್ಲಿ ಕಚೇರಿಯಲ್ಲಿ ಏರ್ಪಡಿಸಿದ್ದ ಸಭೆಗೆ ಆಗಮಿಸಿದ ಶ್ರೀಧರ ಮೂರ್ತಿ ಚೇರ್‌ನಲ್ಲಿ ಕುಳಿತುಕೊಳ್ಳುವ ವೇಳೆ ಹಠಾತ್ತನೆ ಕುಸಿದು ಬಿದ್ದಿದ್ದಾರೆ. ಸಿಬ್ಬಂದಿ ಸಹಾಯದಿಂದ ತಕ್ಷಣ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅದಾಗಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದರು. ಮೂಲತಃ ಚಿತ್ರದುರ್ಗ ಜಿಲ್ಲೆಯವರಾದ ಶ್ರೀಧರಮೂರ್ತಿ ಅವರು ಕೊಡಗು ಜಿಲ್ಲೆ ಆಹಾರ ಇಲಾಖೆಯ ಉಪನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡು 28 ದಿನವಾಗಿತ್ತು ಬುಧವಾರ (ನಾಳೆ) ಚಿತ್ರದುರ್ಗ ಜಿಲ್ಲೆಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಡವರ ಶಾಂತಿಯುತ ಪಾದಯಾತ್ರೆಗೆ ಅಭಿನಂದನೆ: ಆದರೆ ಡಿಸಿಗೆ ಸಲ್ಲಿಸಿದ ಮನವಿಯಲ್ಲಿನ ಅಂಶಗಳಿಗೆ ನಮ್ಮ ಆಕ್ಷೇಪ

ಸುದ್ದಿಗೋಷ್ಠಿಯಲ್ಲಿ ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ ಹೇಳಿಕೆ



ಸುದ್ದಿಗೋಷ್ಠಿಯಲ್ಲಿ ಕೊಡಗು ಗೌಡ ಸಮಾಜಗಳ ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ ಮಾತನಾಡಿದರು.

ಮಡಿಕೇರಿ, ಫೆ.11–ಅಖಿಲ ಕೊಡವ ಸಮಾಜದ ನೇತೃತ್ವದಲ್ಲಿ ಕುಟಂದಿಂದ ನಡೆದ ಶಾಂತಿಯುತ ಪಾದಯಾತ್ರೆ ಹಾಗೂ ಫೆ.7 ರಂದು ಮಡಿಕೇರಿಯಲ್ಲಿ ಪಾದಯಾತ್ರೆಯ ಬೃಹತ್ ಸಮಾವೇಶ ನಡೆಸಿರುವುದಕ್ಕೆ ಕೊಡಗು ಗೌಡ ಸಮಾಜಗಳ ಒಕ್ಕೂಟ ಅಭಿನಂದನೆ ಸಲ್ಲಿಸಲಿದೆ. ಆದರೆ, ಜಿಲ್ಲಾಡಳಿತಕ್ಕೆ ಸಲ್ಲಿಸಿರುವ ಮನವಿಯಲ್ಲಿ ಉಲ್ಲೇಖಿಸಿರುವ 9 ಅಂಶಗಳನ್ನು ಒಕ್ಕೂಟ ತೀವ್ರವಾಗಿ ಖಂಡಿಸುತ್ತದೆ ಎಂದು ಒಕ್ಕೂಟದ ಅಧ್ಯಕ್ಷ ಸೂರ್ತಲೆ ಸೋಮಣ್ಣ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.20ರಂದು ಅರೆಭಾಷೆ ಗೌಡ ಸಮುದಾಯ ಶಾಂತಿಯುತ ಜಾಥಾ ನಡೆಸಿ ಸಾಮಾಜಿಕ ಜಾಲತಾಣಗಳಲ್ಲಿ ಜಾತಿ ನಿಂದನೆ ಮಾಡಿರುವ ಸಿಎನ್‌ಸಿ ಅಧ್ಯಕ್ಷರು ಹಾಗೂ ಕೆಲ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತ್ತು. ಆ ಸಂದರ್ಭ ನಾವು ನೀಡಿದ ಮನವಿಯಲ್ಲಿದ್ದ ವಿಚಾರಗಳು ಎಲ್ಲೆ ಮೀರಿರಲಿಲ್ಲ. ಆದರೆ, ಅಖಿಲ ಕೊಡವ ಸಮಾಜ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ನೇರವಾಗಿ ಅರೆಭಾಷೆ ಗೌಡರನ್ನು ಉಲ್ಲೇಖಿಸಲಾಗಿದೆ ಮತ್ತು ಇಲ್ಲಸಲ್ಲದ ಆರೋಪ ಮಾಡಲಾಗಿದೆ. ಕೊಡವರ ಸಂಸ್ಕೃತಿ, ಆಚಾರ–ವಿಚಾರದ ಉಳಿವಿಗಾಗಿ ಪ್ರಸ್ತಾಪಿಸುವ ಬೇಡಿಕೆಗಳಿಗೆ ನಮ್ಮ ಆಕ್ಷೇಪವಿಲ್ಲ. ಆದರೆ, ಅರೆಭಾಷೆ ಗೌಡರನ್ನು ಗುರಿ ಮಾಡಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅರೆಭಾಷೆ ಗೌಡರ ವಿಚಾರ ಪ್ರಸ್ತಾಪಿಸಿರುವ ಮನವಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಅನಾಮಧೇಯ ವ್ಯಕ್ತಿ ಎಂದು ಹೇಳಲಾಗಿದೆ. ಈ ಮನವಿ ಹಿಂದೆ ಮತ್ತೊಬ್ಬ ವ್ಯಕ್ತಿಯ ಕೈವಾಡವಿರುವ ಶಂಕೆ ಇದೆ. ಅರೆಭಾಷೆ ಗೌಡರನ್ನು ನೇರವಾಗಿ ಉಲ್ಲೇಖಿಸಿರುವ ಈ 9 ಅಂಶಗಳನ್ನು ತೀವ್ರವಾಗಿ ಖಂಡಿಸುತ್ತೇವೆ. ಗೌಡರು ನಡೆಸಿದ ಜಾಥಾಕ್ಕೆ ಹೊರ ಜಿಲ್ಲೆಯ ಅರೆಭಾಷಿಕರಲ್ಲದವರನ್ನು ಕರೆ ತರಲಾಗಿದೆ ಎಂದು ಕೆಲವರು ಆರೋಪ ಮಾಡಿದ್ದಾರೆ. ಆದರೆ, ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆ ನೆಲೆಸಿರುವ ಶೇ.100ರಷ್ಟು ಅರೆಭಾಷೆ ಗೌಡರು ಜಾಥಾದಲ್ಲಿ ಪಾಲ್ಗೊಂಡಿರುವುದನ್ನು ಆರೋಪ ಮಾಡುತ್ತಿರುವವರು ಮನಗಾಣಬೇಕು. ಅರೆಭಾಷಿಕರ ಲ್ಲದವರನ್ನು ಕರೆತಂದು ಜಾಥಾ ಮಾಡುವಷ್ಟು ಕೀಳುಮಟ್ಟಕ್ಕೆ ನಾವು ಇಳಿಯುವುದಿಲ್ಲ ಎಂದು ಸೋಮಣ್ಣ ಸ್ಪಷ್ಟಪಡಿಸಿದರು.

ಕಟ್ಟೆಮಾಡು ಮೃತ್ಯುಂಜಯ ದೇವಾಲಯದ ವಿಚಾರ ಆ ಊರಿಗೆ ಸಂಬಂಧಿಸಿದ್ದಾಗಿದೆ. ಇದರಲ್ಲಿ ಗೌಡ ಸಮಾಜಗಳ ಒಕ್ಕೂಟ ಯಾವುದೇ ಪಾತ್ರ ವಹಿಸುವುದಿಲ್ಲ. ಗೌಡ ಸಮುದಾಯಕ್ಕೆ ನೋವಾದರೆ ಅವರ ಬೆಂಬಲಕ್ಕೆ ಒಕ್ಕೂಟ ನಿಲ್ಲಲಿದೆ. ನಾವು ಶಾಂತಿ ಬಯಸುವವರು, ಶಾಂತಿಸಭೆ ನಡೆಯಬೇಕು ಎನ್ನುವ ಅಪೇಕ್ಷೆ ನಮ್ಮದಾಗಿತ್ತು. ಆದರೆ, ಶಾಂತಿಸಭೆಯಲ್ಲಿ ಪಾಲ್ಗೊಳ್ಳುವುದಿಲ್ಲವೆಂದು ಕೊಡವ ಸಮಾಜದವರು ಹೇಳಿರುವುದರಿಂದ ನಾವು ಕೂಡ ಪಾಲ್ಗೊಳ್ಳುವುದಿಲ್ಲ ಎಂದರು.

ಆರೋಪ ಆಧಾರ ರಹಿತ: ಒಕ್ಕೂಟದ ಖಜಾಂಚಿ ಆನಂದ ಕರಂದ್ಲಾಜೆ ಮಾತನಾಡಿ, ಕೊಡಗಿನ ಅರೆಭಾಷಿಕ ಒಕ್ಕಲಿಗ ಗೌಡರ ನಿಲುವು ಮತ್ತು ಸ್ಪಷ್ಟನೆಗಳು ಎಂದು ವಿವಿಧ ವಿಚಾರಗಳನ್ನು ಮಂಡಿಸಿದ್ದಾರೆ. ಕೊಡಗಿನ ಅರೆಭಾಷೆ ಒಕ್ಕಲಿಗರಿಗೆ ಅನಾದಿ ಕಾಲದಿಂದಲೂ ತನ್ನದೇ ಆಚಾರ–ವಿಚಾರ, ಸಂಸ್ಕೃತಿ ಮತ್ತು ಉಡುಗೆ ತೊಡುಗೆಗಳಿವೆ. ಅದನ್ನು ಆಚರಿಸಲು, ತೊಡಲು ಯಾರ ಅಪ್ಪಣೆ ಅಥವಾ ಅನುಮತಿ ಅವಶ್ಯಕತೆ ಇರುವುದಿಲ್ಲ. ಫೆ.7ರಂದು ಮಡಿಕೇರಿಯಲ್ಲಿ ನಡೆದ ಕೊಡವ ಜನಾಂಗದ ಸಭೆಯ ಮನವಿಯಲ್ಲಿ ನಮ್ಮ ಮೇಲೆ ಮಾಡಿದ ಕ್ಷುಲ್ಲಕ ಆರೋಪಗಳು ಆಧಾರ ರಹಿತವಾಗಿದ್ದು, ಇದನ್ನು ನಾವು ಖಂಡಿಸುತ್ತೇವೆ ಎಂದರು.

ಕಟ್ಟೆಮಾಡು ದೇವಸ್ಥಾನದ ಆಚಾರ–ವಿಚಾರದ ಕುರಿತಾಗಿ ಯಾವುದೇ ಚರ್ಚೆ ಅಥವಾ ಮಾತುಕತೆಗೆ ಅರೆಭಾಷೆ ಒಕ್ಕಲಿಗರ ಸಮಾಜ ಮತ್ತು ಗೌಡ ಸಮಾಜಗಳ ಒಕ್ಕೂಟ ಭಾಗವಹಿಸುವುದಿಲ್ಲ. ಅದು ಅವರ ಗ್ರಾಮಕ್ಕೆ ಮತ್ತು ಆಡಳಿತ ಮಂಡಳಿಗೆ ಸಂಬಂಧಿಸಿದ್ದಾಗಿರುತ್ತದೆ. ಅದರ ಬಗ್ಗೆ ಆಕ್ಷೇಪವಿರುವವರು ನ್ಯಾಯಾಲಯದ ಮೊರೆ ಹೋಗಲು ಯಾರ ಅಭ್ಯಂತರವೂ ಇಲ್ಲ. ಕಟ್ಟೆಮಾಡುವಿನಲ್ಲಿರುವ ಅರೆಭಾಷೆ ಒಕ್ಕಲಿಗರ ಹಾಗೂ ಸಂಖ್ಯಾಬಲವಿಲ್ಲದ ಇತರ ಸಣ್ಣಪುಟ್ಟ ಸಮುದಾಯ, ಹಿಂದುಳಿದ ವರ್ಗಗಳ ನ್ಯಾಯಯುತ ಬೇಡಿಕೆಗಳ ಬೆನ್ನಿಗೆ ನಾವು ನಿಲ್ಲಲಿದ್ದೇವೆ ಎಂದು ತಿಳಿಸಿದರು.

ನಮ್ಮ ಸಭೆ ಮತ್ತು ಮೆರವಣಿಗೆಗಳಲ್ಲಿ ಜನಾಂಗದ ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರಿಗೆ ಪುಷ್ಪಗುಚ್ಛ ಇಟ್ಟು ಗೌರವ ಸಲ್ಲಿಸುವ ಸಂದರ್ಭದಲ್ಲಿ ಕೊಡವ ಜನಾಂಗದ ಹಿರಿಯರಿಗೂ ನಾವು ಗೌರವ ಸಲ್ಲಿಸುತ್ತಿದ್ದೆವು. ಆದರೆ, ಅವರು ಉದ್ದೇಶಪೂರ್ವಕವಾಗಿ ನಮ್ಮ ನಾಯಕರಿಗೆ ಗೌರವ ಸಲ್ಲಿಸದೇ ಇರುವುದನ್ನು ಗಮನಿಸಿದರೆ ಅವರ ಜಾತಿ ವೈಷಮ್ಯ ಎದ್ದು ಕಾಣುವಂತೆ ಮಾಡಿದೆ ಎಂದು ಆರೋಪಿಸಿದರು.

ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರು ಕೊಡಗಿನ ಎಲ್ಲಾ ಜನಾಂಗದವರಿಂದ ಆಯ್ಕೆಯಾಗಿದ್ದು, ಕೇವಲ ಒಂದು ಜನಾಂಗದ ಪರವಾಗಿ ಹೇಳಿಕೆ ನೀಡಿದ್ದಾರೆ. ಅಲ್ಲದೆ ಮಡಿಕೇರಿ ಸಭೆಯಲ್ಲಿ ಭಾಗವಹಿಸಿ ಮತ್ತೊಂದು ಜನಾಂಗದ ವಿರುದ್ಧವಾದ ಮನವಿಗೆ ಸಾಕ್ಷಿಯಾಗಿರುವುದು ಖಂಡನೀಯ. ಬಿಜೆಪಿ ಅವರ ಮೇಲೆ ತಕ್ಷಣ ಕ್ರಮ ಕೈಗೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಪಕ್ಷದಿಂದ ನಮ್ಮ ಜನಾಂಗ ಅಂತರ ಕಾಪಾಡಿಕೊಳ್ಳಲಿದೆ. ಕೊಡಗಿನಲ್ಲಿ ಗೌಡರಿಗೆ ಅವರ ಜನಸಂಖ್ಯೆಗೆ ತಕ್ಕಂತೆ ರಾಜಕೀಯ ಪ್ರಾತಿನಿಧ್ಯ ನೀಡದ ಪಕ್ಷಗಳನ್ನು ದೂರ ಇಡಲಾಗುವುದು ಎಂದು ಎಚ್ಚರಿಸಿದರು.

ಅಗೋಚರ ಶಕ್ತಿಗಳ ಒತ್ತಡಕ್ಕೆ ಮಣಿದ ಶಾಲೆಗಳು ಜಾತಿಯ ಬಣ್ಣ ಬಳಿದು ರಜೆ ಘೋಷಿಸಿರುವುದು ಜಿಲ್ಲಾಡಳಿತದ ಗಮನಕ್ಕೆ ಬಂದಿದ್ದರೂ ಕ್ರಮ ತೆಗೆದುಕೊಳ್ಳದಿರುವುದನ್ನು ಪ್ರಜ್ಞಾವಂತರೆಲ್ಲರೂ ಖಂಡಿಸಬೇಕಿದೆ. ಏನೂ ಅರಿಯದ ಮುಗ್ಧ ಮನಸ್ಸುಗಳಿಗೆ ಜಾತಿ ವಿಷಬೀಜ ಬಿತ್ತುವ ಕಾರ್ಯ ಮಾಡ ಬಾರದಿತ್ತು. ಕೊಡಗಿನಲ್ಲಿರುವ ಸರ್ವಜನಾಂಗ ದವರೊಂದಿಗೆ ಸಾಮರಸ್ಯದಿಂದ ಜೀವಿಸುತ್ತಿರುವ ಅರೆಭಾಷೆ ಒಕ್ಕಲಿಗರ ವಿರುದ್ಧ ವಿನಾಕಾರಣ ಹೆಜ್ಜೆ ಹಾಕಿದವರ ಜೊತೆ ಮುಂದಿನ ದಿನಗಳಲ್ಲಿ ಅಂತರ ಕಾಪಾಡಿಕೊಳ್ಳಲಾಗುವುದು. ನಮ್ಮ ವಿರುದ್ಧ ಅವಹೇಳನ ಮಾಡಿದ ಸಿಎನ್‌ಸಿ ಸಂಘಟನೆ ಹಾಗೂ ಕೆಲ ದುಷ್ಕರ್ಮಿಗಳನ್ನು ಬಂಧಿಸುವಂತೆ ಒತ್ತಾಯಿಸಿ ನಾವು ನಡೆಸಿದ ಸಾಂಕೇತಿಕ ಪ್ರತಿಭಟನೆಯಲ್ಲಿ ಸ್ವಯಂಪ್ರೇರಿತರಾಗಿ ಹತ್ತು ಸಾವಿರ ಮಂದಿ ಭಾಗವಹಿಸಿದ್ದರು ಎಂದರು.


ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಕೊಡಗಿನಲ್ಲಿ ಅರೆಭಾಷೆ ಒಕ್ಕಲಿಗ ಜನಾಂಗಕ್ಕೆ ಸೇರಿದ ಸುಮಾರು ಐದು ಲಕ್ಷ ಜನರಿದ್ದಾರೆ. ಶಾಲಾ–ಕಾಲೇಜುಗಳಿಂದ ಮಕ್ಕಳನ್ನು ಕರೆತರದೆ, ಮಡಿಕೇರಿಯಲ್ಲಿ ಎರಡು ಲಕ್ಷ ಅರೆಭಾಷೆ ಮಾತನಾಡುವ ಒಕ್ಕಲಿಗರನ್ನು ಸೇರಿಸುವುದು ನಮಗೆ ದೊಡ್ಡ ಸಂಗತಿಯಲ್ಲ. ಆದರೆ, ನಾವು ದೇಶ ಮತ್ತು ರಾಜ್ಯದ ಕಾನೂನು ಸುವ್ಯವಸ್ಥೆಗೆ ತಲೆಬಾಗುವವರು. ನಮ್ಮ ಜನಾಂಗ ಪ್ರತ್ಯೇಕತೆ ಯನ್ನು ಪ್ರತಿಪಾದಿಸಿಲ್ಲ. ನಮ್ಮ ಜನಾಂಗವನ್ನು ನಿಂದನೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಜಿಲ್ಲಾಡಳಿತ ಮತ್ತು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಹಿಂದಿನ ನಮ್ಮ ದೂರುಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಪಂದಿಸಿ ಸಿಎನ್‌ಸಿ ಮತ್ತು ಇತರ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದರೆ ಇಷ್ಟರಲ್ಲೇ ಕೊಡಗಿನಲ್ಲಿ ಶಾಂತಿ ನೆಲೆಸಿರುತ್ತಿತ್ತು. ನಮ್ಮ ದೂರು ದಾಖಲಾಗದಿರುವುದರ ಹಿಂದೆ ಕಾಣದ ಕೈಗಳಿವೆ. ಅವುಗಳ ಒತ್ತಡಕ್ಕೆ ಒಳಗಾದಂತೆ ಕಂಡುಬರುತ್ತಿದೆ ಎಂದು ಆನಂದ ಕರಂದ್ಲಾಜೆ ಆರೋಪಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಇನ್ನೊಂದು ಜನಾಂಗವನ್ನು ನಿಂದಿಸುವ ವ್ಯಕ್ತಿಗಳು, ಯಾವುದೇ ಜನಾಂಗದಲ್ಲಿದ್ದರೂ ಅವರ ಮೇಲೆ ಜಿಲ್ಲಾಡಳಿತ ಮತ್ತು ಪೊಲೀಸರು ತಾರತಮ್ಯ ಮಾಡದೆ, ಒತ್ತಡಕ್ಕೆ ಮಣಿಯದೆ ಕಠಿಣ ಕ್ರಮ ಜರುಗಿಸಬೇಕು. ಕೊಡಗಿನಲ್ಲಿ ಎಲ್ಲಾ ಜನಾಂಗದವರು ಶಾಂತಿ ಮತ್ತು ಸಹಬಾಳ್ವೆಯಿಂದ ಬಾಳುವ ವಾತಾವರಣ ಸೃಷ್ಟಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಕಾರ್ಯದರ್ಶಿ ಪೇರಿಯನ ಕೆ.ಉದಯಕುಮಾರ್, ನಿರ್ದೇಶಕರಾದ ಚಿಲ್ಲನ ಗಣಿ ಪ್ರಸಾದ್, ತಳೂರು ದಿನೇಶ್ ಕರುಂಬಯ್ಯ, ಕುಶಾಲನಗರ ಗೌಡ ಯುವಕ ಸಂಘದ ಅಧ್ಯಕ್ಷ ಹರ್ಷ ಉಪಸ್ಥಿತರಿದ್ದರು.

ಸತತ 3ನೇ ಬಾರಿಗೆ ಪಿಎಸಿಸಿ ಅಧ್ಯಕ್ಷರಾಗಿ ನವೀನ್ ಆಯ್ಕೆ



ಕೆರೆಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆರೆಹಳ್ಳಿ ನವೀನ್ ಅವರನ್ನು ನಿರ್ದೇಶಕರು ಅಭಿನಂದಿಸಿದರು.

ಚಾಮರಾಜನಗರ ಫೆ.11– ತಾಲೂಕಿನ ಕೆರೆಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜಿಪಂ ಮಾಜಿ ಸದಸ್ಯ ಕೆರೆಹಳ್ಳಿ ನವೀನ್ ಸತತ ಮೂರನೇ ಬಾರಿ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಹ್ಯಾಟ್ರಿಕ್ ಸಾಧಿಸಿದ್ದಾರೆ.

ಗ್ರಾಮದ ಸಹಕಾರ ಸಂಘದ ದಿ.ಎಚ್.ಎಸ್.ಮಹದೇವಪ್ರಸಾದ್ ಸಭಾಂಗಣದಲ್ಲಿ ನಡೆದ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆರೆಹಳ್ಳಿ ನವೀನ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಯ್ಯ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದರು. ನಂತರ ಚುನಾವಣಾಧಿಕಾರಿ ಡಿ.ಎಲ್.ಸುರೇಶ್ ಅವಿರೋಧ ಆಯ್ಕೆ ಘೋಷಿಸಿದರು.

ಬ್ಯಾಂಕಿಂಗ್ ಸೇವೆ ನೀಡಲು ಬದ್ಧ ಅಧಿಕಾರ ಸ್ವೀಕರಿಸಿ ಮಾತನಾಡಿದ ಸಂಘದ ಅಧ್ಯಕ್ಷ ಕೆರೆಹಳ್ಳಿ ನವೀನ್, ರೈತರು ಹಾಗೂ ಸಂಘದ ಸೇವೆ ಮಾಡಲು ಸದಾ ಸಿದ್ಧನಿದ್ದೇನೆ. ಈಗಾಗಲೇ ಸಂಘಕ್ಕೆ 25 ಲಕ್ಷ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಲಾಗಿದೆ. ಮುಂದೆ 10 ಕೋಟಿ ರೂ. ಸಾಲ ನೀಡುವ ಗುರಿ ಹೊಂದಿದ್ದು, ಇದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಗೆ ಸಲ್ಲಿಸಲಾಗಿದೆ ಎಂದರು.

ಸಂಘವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಎಲ್ಲಾ ನಿರ್ದೇಶಕರು ಕೈಜೋಡಿಸಬೇಕು. ಸಂಘದಿಂದ ವಾಹನ, ವ್ಯಾಪಾರಾಭಿವೃದ್ಧಿ, ಸ್ವಸಹಾಯ ಸಂಘಗಳಿಗೆ ಸಾಲ ಸೇರಿದಂತೆ ಸರ್ಕಾರ ಸವಲತ್ತುಗಳನ್ನು ಒದಗಿಸಿ, ಅನ್‌ಲೈನ್ ಸೇವೆಗೆ ಕ್ರಮ ವಹಿಸಲಾಗಿದೆ. ಸಂಘವನ್ನು ಬ್ಯಾಂಕ್ ಆಗಿ ಪರಿವರ್ತಿಸಲು ಲೀಡ್ ಬ್ಯಾಂಕ್, ನಬಾರ್ಡ್ ಬ್ಯಾಂಕ್‌ಗಳ ಸಹಕಾರ ಪಡೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಸಂಘದ ನಿರ್ದೇಶಕರಾದ ಆರ್.ಕೆಂಪರಾಜು, ಕೆ.ಬಿ.ಪುಟ್ಟರಾಜು, ರಾಜಕುಮಾರ್, ಕೆ.ನಾಗರಾಜಯ್ಯ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಸುಮರಿ, ಎಂ.ಪಿ.ರವಿ, ತಾಪಂ ಮಾಜಿ ಸದಸ್ಯ ಬಿ.ಎಸ್.ರೇವಣ್ಣ, ಸವಿತಾ, ರೇವಮ್ಮ, ವರದರಾಜು, ಎಂಡಿಸಿಸಿ ಮೇಲ್ವಿಚಾರಕ ಮಂಜು, ಸಹಕಾರ ಸಂಘದ ಕಾರ್ಯನಿರ್ವಾಹಕಾಧಿಕಾರಿ ಆರ್.ರಾಜೇಂದ್ರ ಕುಮಾರ್, ಮುಖಂಡರಾದ ಮುಕ್ಕಡಹಳ್ಳಿ ರವಿಕುಮಾರ್, ಹರವೆ ರಂಗಸ್ವಾಮಿ, ಕೆರೆಹಳ್ಳಿ ರೇವಣ್ಣ, ಗ್ರಾಪಂ ಸದಸ್ಯ ಶಂಕರ್, ಮಲ್ಲಪ್ಪ, ಮಹದೇವಸ್ವಾಮಿ ಇತರರು ಇದ್ದರು.

ಹಾಡಿ 365 ಮನೆಗಳಿಗೆ ವಿದ್ಯುತ್ ಸಂಪರ್ಕ



ಪುಣಜನೂರಿನಲ್ಲಿ ಹಾಡಿಗಳ ವಿದ್ಯುತ್ ಸಂಪರ್ಕ ಕಾಮಗಾರಿ ಸಂಬಂಧ ಅಧಿಕಾರಿಗಳಿಂದ ಜಿಲ್ಲಾಧಿಕಾರಿ ಶಿಲ್ಪನಾಗ್ ಪಡೆದರು.

ಚಾಮರಾಜನಗರ, ಫೆ.11–ತಾಲೂಕಿನ ಪುಣಜನೂರಿನಲ್ಲಿ ಹಾಡಿಗಳ ವಿದ್ಯುತ್ ಸಂಪರ್ಕ ಕಾಮಗಾರಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಚಾಲನೆ ನೀಡಿದರು.

ಈ ಕಾಮಗಾರಿಗೆ ಫೆ.3ರಂದು ಬೇಡುಗುಳಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ವಿಧ್ಯುಕ್ತವಾಗಿ ಚಾಲನೆ ನೀಡಿದ್ದರು. ಈ ಯೋಜನೆಯಡಿ ಹರದನಹಳ್ಳಿ ಉಪವಿಭಾಗಕ್ಕೆ ಒಳಪಡುವ (ಬಿಳಗಿರಿರಂಗನಾಥ ಹುಲಿ ಸಂರಕ್ಷಣಾ ವಿಭಾಗ) ಮೊಣಕೈಪೋಡು, ಬೇಡುಗುಳಿ, ಮಾರಿಗುಡಿ ಪೋಡು, ಕಾಡಿಗೆರೆ ಮತ್ತು ಬಂಡಿಗೆರೆ ಹಾಡಿಗಳ 365 ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗುವುದು. ಇದರಿಂದ ಹಾಡಿಗಳಲ್ಲಿ ವಾಸಿಸುವ ಬುಡಕಟ್ಟು ಜನರಿಗೆ ನಿರಂತರವಾಗಿ ವಿದ್ಯುತ್ ನೀಡಬಹುದು ಎಂದು ಹೇಳಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ 9.4 ಕೋಟಿ ರೂ.ಗೆ ಟೆಂಡರ್ ನೀಡಲಾಗಿದೆ ಹಾಗೂ 6 ತಿಂಗಳೊಳಗೆ ಕಾಮಗಾರಿ ಮುಕ್ತಾಯಗೊಳಿಸಲಾಗುವುದು. ಇಲ್ಲಿಯವರೆಗೆ ಹಾಡಿಗಳಿಗೆ ಸೋಲಾರ್‌ನಿಂದ ವಿದ್ಯುತ್ ಸಂಪರ್ಕ ನೀಡಲಾಗಿತ್ತು. ರಾತ್ರಿ ಹಾಗೂ ಮಳೆಗಾಲದಲ್ಲಿ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಾಗುತ್ತಿರಲಿಲ್ಲ. ಮುಖ್ಯಮಂತ್ರಿಗಳ ಆದೇಶದನ್ವಯ ಭೂಮಿಯೊಳಗೆ ಕೇಬಲ್ ಅಳವಡಿಸಿ ಸಂಪ್ರದಾಯಿಕ ವಿದ್ಯುತ್ ಜಾಲದಿಂದ ವಿದ್ಯುತ್ ಸಂಪರ್ಕ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಪಂಚ ಗ್ಯಾರಂಟಿಯಲ್ಲಿ ಕರ್ನಾಟಕ ಇತರೆ ರಾಜ್ಯಗಳಿಗೆ ಮಾದರಿ

● ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಹೇಳಿಕೆ ● ಪುಣಜನೂರಿನಲ್ಲಿ ಪ್ರಗತಿ ಪರಿಶೀಲನಾ ಸಭೆ



ಪುಣಜನೂರಿನಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಕಾರ್ಯಕ್ರಮದಲ್ಲಿ ಡಾ.ಪುಷ್ಪಾ ಅಮರನಾಥ್ ಜನರ ಕುಂದುಕೊರತೆ ಆಲಿಸಿದರು.

ಮಹಿಳೆಯರು ಹಾಗೂ ದುರ್ಬಲ ವರ್ಗದವರ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆ ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಂಡಿದೆ. ಗೃಹಲಕ್ಷ್ಮಿ ಯೋಜನೆಯಡಿ 2,76,226 ಮಂದಿ ನೋಂದಣಿ ಮೂಲಕ ರಾಜ್ಯದಲ್ಲೇ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಜೊತೆಗೆ ಇತರೆ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ. ಪ್ರತಿ ತಿಂಗಳು ಅಧಿಕಾರಿಗಳ ಸಭೆ ನಡೆಸಿ, ಯೋಜನೆಗಳ ಪರಿಣಾಮಕಾರಿ ಪ್ರಗತಿಗೆ ಶ್ರಮಿಸಲಾಗುತ್ತಿದೆ. ಕಾಡಂಚಿನ ಜನರಿಗೂ ಪಂಚ ಗ್ಯಾರಂಟಿ ತಲುಪುವಂತೆ ನೋಡಿಕೊಳ್ಳಲಾಗುತ್ತಿದೆ.

-ಶಿಲ್ಪನಾಗ್, ಜಿಲ್ಲಾಧಿಕಾರಿ

ಚಾಮರಾಜನಗರ, ಫೆ.11–ರಾಜ್ಯ ಸರ್ಕಾರ ಬಡವರು, ಮಧ್ಯಮ ವರ್ಗದವರ ಆರ್ಥಿಕ ಸ್ವಾವಲಂಬನೆಗಾಗಿ ಇಡೀ ದೇಶದಲ್ಲೇ ಮೊದಲ ಬಾರಿಗೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಇತರೆ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಹೇಳಿದರು.

ತಾಲೂಕಿನ ಪುಣಜನೂರಿನ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಮಂಗಳವಾರ 'ನಮ್ಮ ನಡಿಗೆ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕಡೆಗೆ' ಕಾರ್ಯಕ್ರಮದಡಿ ಆಯೋಜಿಸಿದ್ದ ತಾಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆ ಯೋಜನೆಗಳ ಅನುಷ್ಠಾನದಲ್ಲಿ ಉತ್ತಮ ಪ್ರಗತಿ ಸಾಧಿಸಿ ಮುಂಚೂಣಿಯಲ್ಲಿರುವುದು ಅಭಿನಂದನೀಯ ಎಂದರು.

ಇದೇ ವೇಳೆ ಡಾ.ಪುಷ್ಪಾ ಅಮರನಾಥ್ ಕುಂದುಕೊರತೆ ಆಲಿಸಿದರು. ಗೃಹಲಕ್ಷ್ಮೀ ಯೋಜನೆಯಡಿ 2 ಸಾವಿರ ರೂ. ಪ್ರತಿತಿಂಗಳು ಖಾತೆಗೆ ಜಮೆಯಾಗಬೇಕು. ಶಕ್ತಿ ಯೋಜನೆಯಡಿ ಮಹಿಳೆಯರ ಪ್ರಯಾಣಕ್ಕೆ ಅನುಕೂಲವಾಗುವಂತೆ ಗ್ರಾಪಂ ವ್ಯಾಪ್ತಿಯಲ್ಲಿ ಹೆಚ್ಚಿನ ಬಸ್ ವ್ಯವಸ್ಥೆ ಮಾಡಬೇಕು. ಕಾಡಂಚಿನ ಗ್ರಾಪಂ ವ್ಯಾಪ್ತಿಯಲ್ಲಿ ವಿದ್ಯುತ್ ಸಮಸ್ಯೆ ಇದೆ. ನಿರಂತರವಾಗಿ ಲೋಡ್ ಶೆಡ್ಡಿಂಗ್ ಆಗುತ್ತಿದೆ. ಕನಿಷ್ಠ 4 ಗಂಟೆಯಾದರೂ ವಿದ್ಯುತ್ ನೀಡಬೇಕು. ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಬುಡಕಟ್ಟು ಜನರು, ರೈತಾಪಿ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಸಾಕಷ್ಟು ಜನರಿಗೆ ಮನೆಗಳಿಲ್ಲ. ನ್ಯಾಯಬೆಲೆ ಅಂಗಡಿಗಳನ್ನು ಪ್ರತಿದಿನ ತೆರೆದು ಆಹಾರ ಪದಾರ್ಥ ವಿತರಿಸುವಂತೆ ಗ್ರಾಮಸ್ಥರು ಅಹವಾಲು ಸಲ್ಲಿಸಿದರು. ನಂತರ ಮಾತನಾಡಿದ ಪುಷ್ಪಾ ಅಮರನಾಥ್, ಗೃಹಲಕ್ಷ್ಮಿ ಯೋಜನೆಯ 2 ತಿಂಗಳ ಹಣ ಸದ್ಯದಲ್ಲೇ ಫಲಾನುಭವಿಗಳ ಖಾತೆಗೆ ಜಮೆಯಾಗಲಿದೆ. ಶಕ್ತಿ ಯೋಜನೆಯಡಿ ಪಂಚಾಯಿತಿ ವ್ಯಾಪ್ತಿಗೆ ಹೆಚ್ಚಿನ ಬಸ್ ವ್ಯವಸ್ಥೆ ಮಾಡಲಾಗುವುದು. ನಿರಂತರ ವಿದ್ಯುತ್ ನೀಡುವ ಬಗ್ಗೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚಿಸಲಾಗುವುದು. ಜಿಲ್ಲೆಯಲ್ಲಿ ಮನೆ ಇಲ್ಲದವರಿಗೆ ಸರ್ಕಾರ 39 ಮನೆಗಳನ್ನು ಮಂಜೂರು ಮಾಡಿದೆ. ಗ್ಯಾರಂಟಿ ಯೋಜನೆಗಳ ಹೆಚ್ಚಿನ ನೋಂದಣಿಗೆ ದಾಖಲಾತಿ ಅವಶ್ಯವಾಗಿರುವ ಜನರಿಗೆ ಪಂಚಾಯಿತಿ ಮಟ್ಟದಲ್ಲಿ ಶಿಬಿರ ನಡೆಸಿ ದಾಖಲೆಗಳನ್ನು ಅಪ್‌ಡೇಟ್ ಮಾಡಬೇಕು ಎಂದರು.

ಜಿಪಂ ಸಿಇಓ ಮೋನಾ ರೋತ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಸದಸ್ಯರಾದ ರವಿ, ಎನ್.ಸಿದ್ದರಾಜು, ಉಮಾಪತಿ, ರಾಜಶೇಖರ್, ಅಫ್ಸರ್ ಪಾಷ, ದೇವರಾಜು, ರಾಚಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸತೀಶ್ ಕುಮಾರ್ ಇತರರು ಇದ್ದರು.

ಗಾಂಜಾ ಸಾಗಿಸುತ್ತಿದ್ದವನ ಬಂಧನ

ಕೊಳ್ಳೇಗಾಲ, ಫೆ.11– ಒಣಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಬಂಧಿಸಿರುವ ಗ್ರಾಮಾಂತರ ಠಾಣೆ ಪೊಲೀಸರು, 570 ಗ್ರಾಂ ಗಾಂಜಾ ಹಾಗೂ ಗೂಡ್ಸ್ ವಾಹನ ವಶಪಡಿಸಿಕೊಂಡಿದ್ದಾರೆ. ಹನೂರು ತಾಲೂಕಿನ ವಿ.ಎಸ್.ದೊಡ್ಡಿ ಗ್ರಾಮದ ರಾಜೇಶ್ (33) ಬಂಧಿತ ಆರೋಪಿ. ಈತ ಗೂಡ್ಸ್ ವಾಹನದಲ್ಲಿ ಕಾಮಗೆರೆ ಕಡೆಯಿಂದ ಕೊಳ್ಳೇಗಾಲ ಕಡೆಗೆ ಗಾಂಜಾ ಸಾಗಿಸುತ್ತಿದ್ದ. ಈ ವೇಳೆ ದೊಡ್ಡಿಂದುವಾಡಿ ಸರ್ಕಲ್ ಬಳಿ ದಾಳಿ ನಡೆಸಿದ ಪೊಲೀಸರು ಮಾಲು ಸಮೇತ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಎಸ್‌ಐ ಸುಪ್ರೀತ್, ಎಎಸ್‌ಐ ತಖೀಉಲ್ಲಾ, ಸಿಬ್ಬಂದಿ ರವಿ ಭಾಗವಹಿಸಿದ್ದರು.



ಗೂಡ್ಸ್ ವಾಹನದಲ್ಲಿ ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿರುವುದು.

ಸಿಂಧುವಳ್ಳಿಯಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ

ಸಂವಿಧಾನದ ವಿಚಾರದಲ್ಲಿ ಕೆಲವು ಮುಖಂಡರ ಉದ್ಧಟತನಕ್ಕೆ ಖಂಡನೆ; ಸೂಕ್ತ ಕ್ರಮಕ್ಕೆ ಆಗ್ರಹ

ಮೈಸೂರು,ಫೆ.11(ಎಂಟಿವೈ)–ವಿವಿಧೆಡೆ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಸಿಂಧುವಳ್ಳಿ ಗ್ರಾಮದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಖಂಡಿಸಿ, ಮೈಸೂರಲ್ಲಿ ಸಿಂಧುವಳ್ಳಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಸದಸ್ಯರು ಪ್ರತಿಭಟನಾ ಮೆರವಣಿಗೆ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಸಿದ್ಧಾರ್ಥನಗರದ ಹಳೆ ಹಾಲಿನ ಡೈರಿ ಮುಂಭಾಗದಿಂದ ನೂತನ ಜಿಲ್ಲಾಧಿಕಾರಿ ಕಚೇರಿವರೆಗೂ ಮೆರವಣಿಗೆಯಲ್ಲಿ ಸಾಗಿದ ಪ್ರತಿಭಟನಾಕಾರರು, ನಂತರ ಧರಣಿ ನಡೆಸಿ, ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿ, ಪ್ರತಿಮೆಯನ್ನು ವಿರೂಪಗೊಳಿಸಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿದರು.

ಸಿಂಧುವಳ್ಳಿ ಪ್ರಕರಣ ನಡೆದು ಹಲವು ದಿನಗಳಾದರೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದ ಕಾರಣ ಆರೋಪಿಗಳಿಗೆ ಭಯವಿಲ್ಲದಂತಾಗಿದೆ. ಆರೋಪಿಗಳ ಬಂಧನಕ್ಕೆ ವಿಳಂಬ ಧೋರಣೆ ಅನುಸರಿಸುತ್ತಿರುವುದು ಅನುಮಾನ ಮೂಡಿಸುತ್ತಿದೆ. ಪ್ರಕರಣದಲ್ಲಿ ಭಾಗಿಯಾಗಿರುವವರನ್ನು ತಕ್ಷಣವೇ ಪತ್ತೆಹಚ್ಚಿ ಗಡಿಪಾರು ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಅಖಂಡ ಭಾರತಕ್ಕೆ ಸುಭದ್ರ ಸಂವಿಧಾನವಿದ್ದರೂ, ಹಿಂದೂ ರಾಷ್ಟ್ರದ ಪರಿಕಲ್ಪನೆಯಲ್ಲಿ 501 ಪುಟಗಳ ಪ್ರತ್ಯೇಕ ಸಂವಿಧಾನ ಬಿಡುಗಡೆ ಮಾಡಲಾಗುವುದೆಂದು ಹೇಳಿಕೆ ನೀಡಿರುವ ಶಾಂಭವಿ ಪೀಠಾಧಿಪತಿ ಸ್ವಾಮಿ ಆನಂದ್ ಸ್ವರೂಪ್ ಮಹಾರಾಜ್ ಎಂಬುವವರನ್ನು ದೇಶದ್ರೋಹ ಕಾಯ್ದೆಯಡಿ ಬಂಧಿಸಬೇಕು. ಡಾ.ಅಂಬೇಡ್ಕರ್ ಧ್ಯಾನ ಮಾಡುವ ಬದಲು ದೇವರ ಧ್ಯಾನ ಮಾಡಿದಲ್ಲಿ ಸ್ವರ್ಗ ಪ್ರಾಪ್ತಿಯಾಗುತ್ತಿತ್ತು ಎಂದು ಸಂಸತ್‌ನಲ್ಲಿ ಹೇಳಿಕೆ ನೀಡಿದ ಗೃಹ ಮಂತ್ರಿ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು. ಕುಂಭಮೇಳಕ್ಕೆ ಬರದೇ ಇರುವವರನ್ನು ದೇಶದ್ರೋಹಿಗಳು ಎಂದು ಬಹಿರಂಗ ಹೇಳಿಕೆ ನೀಡಿರುವ ಧೀರೇಂದ್ರಶಾಸ್ತ್ರಿ ಎಂಬ ಸ್ವಯಂಘೋಷಿತ ದೇವಮಾನವನನ್ನು ದೇಶದ್ರೋಹದ ಕಾನೂನಿನಡಿಯಲ್ಲಿ ಬಂಧಿಸಿ, ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ನಮಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಿದ್ದು ರಾಮಮಂದಿರ ಉದ್ಘಾಟನೆಗೊಂಡ ದಿನ ಎಂದು ಬಹಿರಂಗ ಹೇಳಿಕೆ ನೀಡಿರುವ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ವಿರುದ್ಧವೂ ದೇಶದ್ರೋಹದ ಕೇಸ್ ದಾಖಲಾಗಬೇಕು.



ಸಿಂಧುವಳ್ಳಿ ಗ್ರಾಮದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ, ಡಿಸಿ ಕಚೇರಿ ಮುಂದೆ ಸಿಂಧುವಳ್ಳಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಸಂಘ, ಡಾ.ಬಿ.ಆರ್. ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ನಮ್ಮನ್ನು ಗೌರವಿಸುವ ಸಂವಿಧಾನ ಬರಬೇಕೆಂದು ಬಹಿರಂಗ ಹೇಳಿಕೆ ನೀಡಿರುವ ಉಡುಪಿ ಮಠದ ವಿಶ್ವೇಶ್ವರತೀರ್ಥ ಪ್ರಸನ್ನ ಸ್ವಾಮೀಜಿ ವಿರುದ್ಧವೂ ಕೇಸ್ ದಾಖಲಿಸಿ ಬಂಧಿಸಬೇಕು ಎಂದು ಒತ್ತಾಯಿಸಿದರು.

ಉತ್ತರಪ್ರದೇಶದ ಅಯೋಧ್ಯೆಯಲ್ಲಿ ದಲಿತ ಹೆಣ್ಣು ಮಗಳನ್ನು ಅಪಹರಿಸಿ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದೆ. ಇದರ ವಿರುದ್ಧ ತಕ್ಷಣ ಕ್ರಮ ವಹಿಸಿ ಆರೋಪಿಗಳಿಗೆ ಗಲ್ಲು ಶಿಕ್ಷೆ ನೀಡಬೇಕು. ಪಂಜಾಬ್‌ನ ಚಂಡೀಗಢದಲ್ಲಿ ಡಾ.ಅಂಬೇಡ್ಕರ್ ಪ್ರತಿಮೆಗೆ ಬೆಂಕಿಹಚ್ಚಿ ವಿರೂಪಗೊಳಿಸಿದ ವಿರುದ್ಧದ ಪ್ರಕರಣದ ವಿಚಾರಣೆಯನ್ನು ತ್ವರಿತವಾಗಿ ಮಾಡಿ ಆರೋಪಿಗೆ ಶಿಕ್ಷೆ ವಿಧಿಸಬೇಕು. ಈ ಎಲ್ಲಾ ಪ್ರಕರಣಗಳಲ್ಲಿ ದೇಶದಾದ್ಯಂತ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ನಿಂತಿಲ್ಲವೆಂಬುದಕ್ಕೆ ಸಾಕ್ಷಿ. ದೇಶದ ಸಂವಿಧಾನದ ಅವಹೇಳನ ಮಾಡುವುದು, ಪ್ರತ್ಯೇಕ ಸಂವಿಧಾನ ಬೇಕೆಂದು ಬಹಿರಂಗವಾಗಿ ಹೇಳಿಕೆ ನೀಡುತ್ತಿದ್ದರೂ ರಾಷ್ಟ್ರಪತಿಗಳು ಕೇಂದ್ರ, ಸಂಬಂಧಿಸಿದ ರಾಜ್ಯ ಸರ್ಕಾರಗಳಿಗೆ ಸ್ಪಷ್ಟ ಆದೇಶ ನೀಡದೆ ಮೌನವಾಗಿರುವುದು ಸಂವಿಧಾನಕ್ಕೆ ಅಪಾಯದ ಆತಂಕ ಉಂಟುಮಾಡುತ್ತದೆ. ಕೂಡಲೇ ದಲಿತರ ಮೇಲಿನ ಪ್ರಕರಣಗಳಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಸಿಂಧುವಳ್ಳಿ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಅಧ್ಯಕ್ಷ ಚಂದ್ರು, ರಾಜು ಸೇರಿದಂತೆ ಸಿಂಧುವಳ್ಳಿ ಗ್ರಾಮಸ್ಥರು ಭಾಗವಹಿಸಿದ್ದರು.

'ಮೈಸೂರು ಮಿತ್ರ' ವರದಿ ಫಲಶೃತಿ

ಕಲಾಮಂದಿರ ಬಾಡಿಗೆ ನೀಡುವಾಗಲೇ ಕಟ್ಟುನಿಟ್ಟಿನ ಷರತ್ತು ವಿಧಿಸುವ ನಿರ್ಧಾರ

ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಸ್ಪಷ್ಟನೆ

- ಆಹಾರ ವಿತರಣೆಗೆ ಜಾಗ ಮೀಸಲು
- ಕಲಾಮಂದಿರದಲ್ಲಿ ಆಹಾರ ತಯಾರಿಗೆ ನಿರ್ಬಂಧ
- ನಿಯಮ ಪಾಲಿಸದಿದ್ದರೆ ಕಠಿಣ ಕ್ರಮ



ಮೈಸೂರಿನ ಕಲಾಮಂದಿರದ ಆವರಣದಲ್ಲಿ ಫುಡ್ ಸ್ಟಾಲ್ ತೆರವು ಮಾಡಿದ ಸಿಬ್ಬಂದಿ ಒಂದೆಡೆ ಕಸ ಗುಡ್ಡೆ ಹಾಕಿದ್ದಾರೆ. ಅಳಿದುಳಿದ ಆಹಾರ ಬೀಸಾಡಿರುವ ಕಾರಣ ಅಲ್ಲಿಯ ವಾತಾವರಣ ಇನ್ನೂ ಗುಬ್ಬು ನಾರುತ್ತಿದೆ.

ಮೈಸೂರು, ಫೆ.11(ಬಿಎಲ್‌ಯು)– ಮೈಸೂರಿನ ಕಲಾಮಂದಿರದ ಪಾವಿತ್ರ್ಯತೆ ಕಾಪಾಡುವ ದೃಷ್ಟಿಯಿಂದ ಬಾಡಿಗೆ ನೀಡುವಾಗ ಹಲವು ಷರತ್ತು ವಿಧಿಸಿ, ಅದನ್ನು ಉಲ್ಲಂಘಿಸಿದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ಭರವಸೆ ನೀಡಿದ್ದಾರೆ.

'ಮೈಸೂರು ಮಿತ್ರ'ನ ಇಂದಿನ ಸಂಚಿಕೆಯಲ್ಲಿ 'ರೆಸಾರ್ಟ್‌ನಂತಾಗಿದೆ ಮೈಸೂರು ಕಲಾಮಂದಿರ ಆವರಣ' ಶೀರ್ಷಿಕೆಯಡಿ ಪ್ರಕಟವಾದ ವರದಿಗೆ ಪ್ರತಿಕ್ರಿಯೆ ನೀಡಿದ ಡಾ.ಸುದರ್ಶನ್, ಹತ್ತಾರು ವರ್ಷಗಳಿಂದ ಕಲಾಮಂದಿರಕ್ಕೆ ಇರುವ ಘನತೆ–ಗೌರವ ಕಾಪಾಡಲಾಗುವುದು ಎಂದು ತಿಳಿಸಿದರು.

ಖಾಸಗಿ ಸಂಸ್ಥೆಯೊಂದು ಕಲಾಮಂದಿರದಲ್ಲಿ ಕಾರ್ಯಕ್ರಮ ನಡೆಸಿ, ಫುಡ್ ಸ್ಟಾಲ್ ಹಾಕಿ ಅಳಿದುಳಿದ ಆಹಾರ ಬೀಸಾಡಿದ್ದರು. ಇದರಿಂದ ಆವರಣ ದುರ್ವಾಸನೆ ಬೀರುತ್ತಿತ್ತು. ಈ ಬಗ್ಗೆ ವರದಿ ಪ್ರಕಟವಾದ ಹಿನ್ನೆಲೆಯಲ್ಲಿ ಬಾಡಿಗೆಗೆ ನೀಡುವ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ನು ಮುಂದೆ ಹಲವು ಕಟ್ಟುನಿಟ್ಟಿನ ಷರತ್ತು ವಿಧಿಸಿ, ಕ್ರಮ ಕೈಗೊಳ್ಳಲಿದೆ ಎಂದು ಡಾ.ಸುದರ್ಶನ್ ಭರವಸೆ ನೀಡಿದರು.

ಇನ್ನೂ ಗಬ್ಬು ನಾರುತ್ತಿದೆ ಕಲಾ ಕೇಂದ್ರದ ಆವರಣ

ಕಲಾಮಂದಿರದ ಅವ್ಯವಸ್ಥೆ ಕುರಿತಂತೆ 'ಮೈಸೂರು ಮಿತ್ರ' ವರದಿ ಪ್ರಕಟವಾಗಿ 24 ಗಂಟೆ ಕಳೆಯುತ್ತಾ ಬಂದರೂ ಫುಡ್‌ಸ್ಟಾಲ್ ಹಾಕಿದ್ದ ಸ್ಥಳದಲ್ಲಿ ಇನ್ನೂ ಕಸ ತೆರವು ಮಾಡಿಲ್ಲ. ಫುಡ್‌ಸ್ಟಾಲ್‌ಗಳ ತೆರವು ಮಾಡಲಾಗಿದೆ. ಆದರೆ ಆಹಾರದ ತಟ್ಟೆ ಹಾಗೂ ಅಳಿದುಳಿದ ಆಹಾರವನ್ನು ಗುಡಿಸಿ ಒಂದು ಕಡೆ ಗುಡ್ಡೆ ಹಾಕಲಾಗಿದೆ. ಅದು ಇನ್ನೂ ಗಬ್ಬು ನಾರುತ್ತಿದೆ. ಕಲಾಮಂದಿರ ನಿರ್ವಹಣೆ ಹೊಣೆ ಹೊತ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಗಮನಕ್ಕೆ ಬಂದರೂ ಅದನ್ನು ತ್ವರಿತವಾಗಿ ತೆರವು ಮಾಡಿಸುವ ಪ್ರಯತ್ನಕ್ಕೆ ಅವರೂ ಕೈಹಾಕಿಲ್ಲ.

ಇನ್ನು ಮುಂದೆ ಕಲಾಮಂದಿರದ ಆವರಣದಲ್ಲಿ ಯಾವುದೇ ರೀತಿಯ ಫುಡ್ ಸ್ಟಾಲ್ ಹಾಕಬಾರದು. ಕಲಾಮಂದಿರದ ದ್ವಾರದಿಂದ ರಂಗಾಯಣ ದ್ವಾರದ ತನಕ ಈ ನಿಯಮ ಜಾರಿಯಲ್ಲಿರುತ್ತದೆ. ಒಂದು ವೇಳೆ ಆಹಾರ ವಿತರಣೆ ಮಾಡಬೇಕೆಂದರೆ ಕಲಾಮಂದಿರದ ಪ್ರವೇಶ ದ್ವಾರದ ಬಳಿ ಒಂದು ಬದಿಯಲ್ಲಿ ವಿತರಿಸಬೇಕು. ಹೊರಗಿನಿಂದ ತಂದ ಸಿದ್ಧ ಆಹಾರ ಇಲ್ಲಿ ನೀಡಬೇಕೇ ಹೊರತು ಕಲಾಮಂದಿರದ ಆವರಣದಲ್ಲಿ ಆಹಾರ ತಯಾರಿಸಲು ಅವಕಾಶವಿಲ್ಲ ಎಂದು ತಿಳಿಸಿದರು.

ಅದರಲ್ಲೂ ಸಸ್ಯಾಹಾರಕ್ಕೆ ಮಾತ್ರ ಅವಕಾಶ ನೀಡಲಾಗಿದ್ದು, ಅದನ್ನೂ ಕಾರ್ಯಕ್ರಮದ ನಂತರ ವಿತರಣೆ ಮಾಡಿ, ಆ ಸ್ಥಳವನ್ನು ಪೂರ್ಣ ಪ್ರಮಾಣದಲ್ಲಿ ಸ್ವಚ್ಛ ಮಾಡಿ ಹೋಗಬೇಕು.

ಇನ್ನು ಮುಂದೆ ಕಲಾಮಂದಿರವನ್ನು ಬಾಡಿಗೆಗೆ ನೀಡುವ ಸಂದರ್ಭದಲ್ಲಿ ಇಂತಹ ಹಲವು ನಿಬಂಧನೆಗಳನ್ನು ವಿಧಿಸಲಾಗುವುದು. ಕಾರ್ಯಕ್ರಮದ ನಂತರ ನಾವು ವಿಧಿಸಿದ ಷರತ್ತುಗಳನ್ನು ಪಾಲಿಸಿರುವುದನ್ನು ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು. ಯಾರಾದರೂ ಇದನ್ನು ಉಲ್ಲಂಘನೆ ಮಾಡಿದರೆ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಕೇರ್ಗಳ್ಳಿ ಗ್ರಾಮದಲ್ಲಿ ಕೇರ್ಗಳ್ಳಿ ಮಾರಮ್ಮನ ಹಬ್ಬದ ಸಂಭ್ರಮ...



ಮೈಸೂರಿನ ಕೇರ್ಗಳ್ಳಿ ಗ್ರಾಮದಲ್ಲಿ ಸೋಮವಾರ ಗ್ರಾಮದೇವತೆ ಕೇರ್ಗಳ್ಳಿ ಮಾರಮ್ಮನ ಹಬ್ಬವನ್ನು ಅತ್ಯಂತ ವೈಭವದಿಂದ ಆಚರಿಸಲಾಯಿತು. ಗ್ರಾಮದ ಬೀದಿಗಳಲ್ಲಿ ಅಲಂಕೃತ ದೇವಿಯ ಮೆರವಣಿಗೆ ನಡೆಯಿತು. ಈ ವೇಳೆ ಯುವಕರು ಕುಣಿದು ಕುಪ್ಪಳಿಸಿದರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಲೆಕ್ಕಾಧಿಕಾರಿಗಳ ಮುಷ್ಕರ ಆರಂಭ

ಮೈಸೂರು,ಫೆ.11(ಎಂಟಿವೈ)– ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿಯನ್ನು ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗೆ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಮಿನಿ ವಿಧಾನಸೌಧದ ಆವರಣದ ತಾಲೂಕು ಕಚೇರಿ ಮುಂದೆ ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ನೇತೃತ್ವದಲ್ಲಿ ಮೈಸೂರಿನ ವಿವಿಧ ನಾಡಕಚೇರಿ ವ್ಯಾಪ್ತಿಯಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಹಲವು ಮಂದಿ ಗ್ರಾಮ ಆಡಳಿತ ಅಧಿಕಾರಿಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ಸರ್ಕಾರ ಕೂಡಲೇ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯನ್ನು ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸಿ ಆದೇಶ ಹೊರಡಿಸಬೇಕು. ಅಧಿಕಾರಿಗಳಿಗೆ ಸುಸಜ್ಜಿತ ಕಚೇರಿ ಕಲ್ಪಿಸಬೇಕು. ಇತರ ಇಲಾಖೆಗಳಲ್ಲಿರುವಂತೆ ಕಂದಾಯ ಇಲಾಖೆಯಲ್ಲಿ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು. ಕಂದಾಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಎಲ್ಲ ವೃಂದಗಳನ್ನು ಒಳಗೊಂಡಂತೆ ನೀಡುತ್ತಿರುವ ಅನುಕಂಪದ ನೇಮಕಾತಿ ಹುದ್ದೆಯ ತಿದ್ದುಪಡಿ ಮಾಡಬೇಕು. ಕ್ಷೇತ್ರ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುವಾಗ ಜೀವಹಾನಿಯಾಗುವ ಗ್ರಾಮ ಆಡಳಿತ ಅಧಿಕಾರಿಗಳ ಕುಟುಂಬಕ್ಕೆ 50 ಲಕ್ಷ ರೂ ಪರಿಹಾರ ಮಂಜೂರು ಮಾಡಬೇಕು. ಪ್ರಯಾಣ ಭತ್ಯೆ ಮತ್ತು ಆಪತ್ತಿನ ಭತ್ಯೆ ಹೆಚ್ಚಿಸುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವವರೆಗೂ ಮುಷ್ಕರ ಮುಂದುವರೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ನಾಗೇಶ್, ತಾಲೂಕು ಅಧ್ಯಕ್ಷ ಭಾಸ್ಕರ್, ಮಹೇಶ್, ಜಗದೀಶ್, ಉಮಾ ಮಹೇಶ್ವರಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಮೈಸೂರಿನ ಮಿನಿ ವಿಧಾನಸೌಧದ ತಾಲೂಕು ಕಚೇರಿ ಮುಂದೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ನೇತೃತ್ವದಲ್ಲಿ ಗ್ರಾಮಲೆಕ್ಕಿಗರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ಕೆಆರ್‌ಎಸ್ ರಸ್ತೆ ಅಪಾರ್ಟ್‌ಮೆಂಟ್ ಆವರಣದಲ್ಲಿ ಚಿರತೆ ಹಾವಳಿ ಆತಂಕ

ಮೈಸೂರು, ಫೆ.11– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಪ್ರತಿಷ್ಠಿತ ಅಪಾರ್ಟ್‌ಮೆಂಟ್‌ವೊಂದರ ಆವರಣದಲ್ಲಿ ಚಿರತೆ ಕಾಣಿಸಿಕೊಂಡಿದೆ ಎಂದು ಹೇಳಲಾಗುತ್ತಿದೆ.


ಕಳೆದ ತಿಂಗಳು ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಕಾಣಿಸಿಕೊಂಡಿದ್ದ ಚಿರತೆ ಎರಡು ವಾರಕ್ಕೂ ಹೆಚ್ಚು ಕಾಲ ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ಇದೀಗ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಪ್ರತಿಷ್ಠಿತ ಬ್ರಿಗೇಡ್ ಸಿಂಪೋನಾ ಅಪಾರ್ಟ್‌ಮೆಂಟ್ ಆವರಣದಲ್ಲಿ ಚಿರತೆ ಕಾಣಿಸಿಕೊಂಡಿದೆ ಎಂದು ತಿಳಿದು ಬಂದಿರುವುದರಿಂದ ಸಾರ್ವಜನಿಕರ ಆತಂಕ ಹೆಚ್ಚಿಸಿದೆ. ಕೆಲ ದಿನಗಳ ಹಿಂದೆ ಪ್ರಾಣಿ ಯೊಂದರ ಹೆಜ್ಜೆ ಗುರುತು ಗಮನಿಸಿದ ಅಪಾರ್ಟ್‌ಮೆಂಟ್ ನಿವಾಸಿಗಳು, ಅದು ನಾಯಿಯ ಹೆಜ್ಜೆ ಗುರುತು ಇರಬಹುದೆಂದು ಭಾವಿಸಿದ್ದರು. ಬಳಿಕ ಅರಣ್ಯ ಇಲಾಖೆಯವರಿಗೆ ದೂರು ನೀಡಿದ್ದರಿಂದ ಚಿರತೆ ಕಾರ್ಯಪಡೆಯ ಸಿಬ್ಬಂದಿ ಸ್ಥಳಕ್ಕಾಗಮಿಸಿ ಪರಿಶೀಲಿಸಿದ್ದರು. ಈ ಹೆಜ್ಜೆ ಚಿರತೆಯದ್ದೇ ಇರಬಹುದು ಎಂದು ಹೇಳಿ, ಈ ಭಾಗದಲ್ಲಿ ಚಿರತೆ ಸಂಚಾರ ಇದೆ, ಜೋಪಾನವಾಗಿರಿ ಎಂದು ಎಚ್ಚರಿಸಿದ್ದರು. ಇಂದು ಚಿರತೆ ನವಿಲನ್ನು ಕೊಂದು ಹಾಕಿದೆ. ಮಂಗಳವಾರ ಮತ್ತೆ ಚಿರತೆ ಹೆಜ್ಜೆ ಕಾಣಿಸಿಕೊಂಡಿದ್ದು, ಅದರ ಪಕ್ಕದಲ್ಲಿಯೇ ನವಿಲನ್ನು ಬೇಟೆಯಾಡಿ ತಿಂದಿರುವ ಕುರುಹುಗಳು ಪತ್ತೆಯಾಗಿವೆ ಎಂದು ತಿಳಿದು ಬಂದಿದೆ. ಈ ಭಾಗದಲ್ಲಿ ನವಿಲುಗಳು ಹೆಚ್ಚಾಗಿದ್ದವು. ಅಪಾರ್ಟ್‌ಮೆಂಟ್ ಆವರಣಕ್ಕೂ ಬಂದು ಹೋಗುತ್ತಿದ್ದವು. ಆದರೆ ಆರು ತಿಂಗಳಿಂದ ನವಿಲುಗಳ ಸಂಖ್ಯೆ ಕ್ಷೀಣಿಸಿದೆ. ಅಪಾರ್ಟ್‌ಮೆಂಟ್ ಪಕ್ಕದಲ್ಲಿ ಗಿಡಗಂಟಿಗಳ ಪ್ರದೇಶ ಹಾಗೂ ಕೈಗಾರಿಕೆಗಳಿವೆ. ಹಾಗಾಗಿ ಈ ಭಾಗದಲ್ಲಿ ಚಿರತೆ ಸಂಚಾರವಿದೆ ಎಂದು ಅಪಾರ್ಟ್‌ಮೆಂಟ್ ನಿವಾಸಿಗಳು, ಕೈಗಾರಿಕೆಗಳ ನೌಕರರು ಆತಂಕಗೊಂಡಿದ್ದಾರೆ.

ಚಲನವಲನವಿಲ್ಲ...!

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಸಿಂಫೋನಾ ಅಪಾರ್ಟ್‌ಮೆಂಟ್‌ನಲ್ಲಿ ಭಾನುವಾರ ಚಿರತೆ ಚಲನವಲನದ ಬಗ್ಗೆ ದೂರು ಬಂದ ಮೇರೆಗೆ ಚಿರತೆ ಕಾರ್ಯ ಪಡೆ ಮತ್ತು ಮೈಸೂರು ವಲಯದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಶೋಧನೆ ನಡೆಸಿದ್ದು, ಅಲ್ಲಿ ಯಾವುದೇ ಪಗ್‌ಮಾರ್ಕ್‌ಗಳು ಅಥವಾ ಇನ್ನಿತರೇ ಯಾವುದೇ ಕುರುಹುಗಳು ಕಂಡು ಬಂದಿರುವುದಿಲ್ಲ. ಈ ಭಾಗದಲ್ಲಿ ಚಿರತೆಯ ಚಲನ ವಲನವು ಇರುವುದಿಲ್ಲ. ಹಾಗಾಗಿ ವದಂತಿಗಳಿಂದ ಆತಂಕಗೊಳ್ಳದೇ, ಮುಂಜಾಗ್ರತೆ ವಹಿಸುವಂತೆ ಸ್ಥಳೀಯ ನಿವಾಸಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಬಿವಿಬಿಯಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ



ಮೈಸೂರು, ಫೆ. 11– ಬೆಂಗಳೂರಿನ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು ವತಿಯಿಂದ ಫೆ.15ರಂದು ಸಂಜೆ 6 ಗಂಟೆಗೆ ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿರುವ ಭಾರತೀಯ ವಿದ್ಯಾ ಭವನದಲ್ಲಿ 143ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಿದುಷಿ ಪಾವನಿ ಭಾರದ್ವಾಜ್ ಅವರಿಂದ ಹಾಡುಗಾರಿಕೆ. ವಿದುಷಿ ಸಿ.ವಿ. ಶ್ರುತಿ –ಪಿಟೀಲು, ವಿದ್ವಾನ್ ಎಸ್.ಕುಮಾರಸ್ವಾಮಿ –ಮೃದಂಗ, ವಿದ್ವಾನ್ ಎಸ್.ರಮೇಶ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ಶ್ರೀ ರಾಜರಾಜೇಶ್ವರಿ ದೇವಸ್ಥಾನದ ನೂತನ ಪ್ರಸಾದ ಪ್ರವೇಶ ಉದ್ಘಾಟನೆ



ಮೈಸೂರಿನ ಬೋಗಾದಿಯಲ್ಲಿರುವ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ನೂತನ ಪ್ರಸಾದ ಪ್ರವೇಶ ಕಾರ್ಯಕ್ರಮವನ್ನು ಸೋಮವಾರ ತಲಕಾಡು ಗಜಾರಣ್ಯ ಕ್ಷೇತ್ರದಲ್ಲಿನ ಶ್ರೀ ಬಾಲಕೃಷ್ಣಾನಂದ ಮಹಾ ಸಂಸ್ಥಾನದ ಶ್ರೀ ಗೋವಿಂದಾನಂದ ಸರಸ್ವತೀ ಮಹಾಸ್ವಾಮೀಜಿ ಉದ್ಘಾಟಿಸಿ, ಆಶೀರ್ವದಿಸಿದರು. ಕಲಾವಿದೆ ಮಾಳವಿಕಾ ಅವಿನಾಶ್, ನಾಗರಾಜು, ರಾಜೇಶ್ ರಾಜೇ ಅರಸ್, ಎಸ್.ಜಿ.ಮಾದೇಗೌಡ, ಡಿ.ನಾರಾಯಣ, ವಿಜಯ ಸುದರ್ಶನ್, ನಂ.ಶ್ರೀಕಂಠಕುಮಾರ್, ಮಲ್ಲೇಶಪ್ಪ, ಹೆಚ್.ಪಿ.ಲಿಂಗರಾಜು ಈ ವೇಳೆ ಉಪಸ್ಥಿತರಿದ್ದರು.

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಮಸ್ತ ಸಾರ್ವಜನಿಕರ ಗಮನಕ್ಕೆ / ತಿಳುವಳಿಕೆಗೆ ಪ್ರಚಾರಪಡಿಸುತ್ತಿರುವುದೇನೆಂದರೆ ನನ್ನ ಕಕ್ಷಿದಾರರು ಕೆಳಗೆ ಈ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು / ಜಮೀನನ್ನು ಅದರ ಮಾಲೀಕರಾದ ಅಂದರೆ ಉಡುಪಿ ಜಿಲ್ಲೆ–576201, ಕುಂದಾಪುರ, ಚರ್ಚ್ ರಸ್ತೆ, ಫೈಡ್ಸ್ ವಿಲ್ಲಾ ಇಲ್ಲಿ ವಾಸವಾಗಿರುವ ಲೇಟ್ ಎಲ್.ಎಂ.ಫರ್ನಾಂಡಿಸ್ ರವರ ಮಗ ಸುಮಾರು 62 ವರ್ಷದ ಶ್ರೀ ಜೋಸೆಫ್ ಎಂ ಫರ್ನಾಂಡಿಸ್ ರವರಿಂದ ಸೂಕ್ತ ಮೌಲ್ಯಯುತವಾದ ಪ್ರತಿಫಲಕ್ಕೆ ಖರೀದಿಸುವ ಇರಾದೆಯನ್ನು ಹೊಂದಿರುವುದು ಸರಿಯಷ್ಟೆ. ಮೇಲೆ ತಿಳಿಸಿರುವ ಮಾಲೀಕರು ಮಾತ್ರ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲ್ಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ಕ್ರಯದ ಕರಾರು, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್‌ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಸೂಕ್ತ ದಾಖಲೆಗಳೊಂದಿಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತು/ಜಮೀನಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ : ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದಡದಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 53/2 (ಹಳೇ ಸರ್ವೆ ನಂ. 53) ರಲ್ಲಿರುವ ವಿಸ್ತೀರ್ಣ ಎಕರೆ 3-30 ಗುಂಟೆ ಹಾಗೂ ಹೊಸ ಸರ್ವೆ ನಂ. 51/4 (ಹಳೇ ಸರ್ವೆ ನಂ. 51/1) ರಲ್ಲಿರುವ ವಿಸ್ತೀರ್ಣ 0-11 ಗುಂಟೆ ಒಟ್ಟು ಎಕರೆ 4-01 ಗುಂಟೆ (ನಾಲ್ಕು ಎಕರೆ ಒಂದು ಗುಂಟೆ) ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಸರ್ವೆ ನಂ. 52 ರ ಜಮೀನು, ಪಶ್ಚಿಮಕ್ಕೆ : ಜೋಸೆಫ್‌ಫ್ರೆಡ್ ಎಂ ಫರ್ನಾಂಡಿಸ್ ರವರ ಜಮೀನು, ಉತ್ತರಕ್ಕೆ : ಮುದ್ದೇಗೌಡರ ಜಮೀನು , ದಕ್ಷಿಣಕ್ಕೆ : ರಸ್ತೆ

ಸಹಿ/– ಸಿ.ಮೋಹನ, ವಕೀಲರು, ಕೆ.ಎ.ಆರ್–1640/98
390/ಇ, 1ನೇ ಮಹಡಿ, ಮಾರುತಿ ಟೆಂಪಲ್ ರಸ್ತೆ,
ಕುವೆಂಪುನಗರ, ಮೈಸೂರು–570023
ಮೊ: 9448448407

ದಿನಾಂಕ: 10/02/2025 , ಸ್ಥಳ: ಮೈಸೂರು

ಆಧುನಿಕ ಸೌಲಭ್ಯದ ಸೈಟುಗಳು ಮಾರಾಟಕ್ಕಿವೆ
NH-275
ಮೈಸೂರು–ಮಡಿಕೇರಿ
ರಾಷ್ಟ್ರೀಯ ಹೆದ್ದಾರಿ, ಇಲವಾಲ ಹತ್ತಿರ
7338445412/13

PUBLIC NOTICE

My client, Mr. V. Shailendra, S/o Late C. Venkatraj, Mysuru intends to purchase the property more particularly described in the Schedule hereunder from Hanumakka, D/o Late Devappa. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any obligations of any nature to the aforesaid transaction should lodge such claim and/or objections in writing to the undersigned together with supporting documents within seven (7) days hereof, failing which it will be presumed that no valid claims or objections subsist and my client would proceed to complete the transaction with the present owners thereof subject to compliance with other statutory and legal formalities.

SCHEDULE PROPERTY : Land bearing Sy. No. 209/1 measuring 02 Acres 19 Guntas situated at Mysuru Village, Kasaba Hobli, Mysuru Taluk, bounded on the East by :NIE-IT College and Hostel, West by: Railway quarters North by: Road, South by: Road and railway quarters

S. Arunkumar & Rashmi Arun
Pragabhi Law Associates, Advocates and Consultants , No. 26/1B, 1st Floor, Shiva Complex, New Kantharaje Urs Road, K.G.Koppal, Mysuru 570009.
Phone no 9845116311 ,
Email- pragabhi.arun@gmail.com
Mysuru, Date:11-02-2025

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಷಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
₹749/
ಬುಕಿಂಗ್ ಪ್ರಾರಂಭವಾಗಿದೆ
30x40 | 30x50
40x60 | 50x80
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
ಹೈಲ್ಯಾಂಡ್ ಪ್ರಾಪರ್ಟೀಸ್
90713 86615
95133 01854

ಪುಣ್ಯಸ್ನಾನಕ್ಕೆ ಹರಿದು ಬಂದ ಭಕ್ತಸಾಗರ

• ಭಕ್ತಿ ಸುಧೆಯಲ್ಲಿ ಮಿಂದೆದ್ದ ಭಕ್ತ ಸಮೂಹ • ಪೊಲೀಸರು, ಅಗ್ನಿಶಾಮಕ ಸಿಬ್ಬಂದಿಯಿಂದ ತೀವ್ರ ಕಟ್ಟೆಚ್ಚರ



ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳದ ಪುಣ್ಯಸ್ನಾನದಲ್ಲಿ ಮಗ್ನರಾಗಿರುವ ಭಕ್ತಗಣ.

ಇಂದು ಮಹೋದಯ ಪುಣ್ಯಸ್ನಾನ

ತ್ರಿವೇಣಿ ಸಂಗಮದಲ್ಲಿ ಫೆ.12ರಂದು ಬೆಳಗ್ಗೆ 5.30ಕ್ಕೆ ಮಾಘ ಶುದ್ಧ ವ್ಯಾಸ ಪೂರ್ಣಿಮಾ-ಆಶ್ಲೇಷ ನಕ್ಷತ್ರ ಪುಣ್ಯಹದಲ್ಲಿ ಸಪ್ತನದಿ ತೀರ್ಥಕಲಶ ಪೂಜೆ, ಹೋಮ ನಡೆಯಲಿದ್ದು ಕುಂಭ ಲಗ್ನದಲ್ಲಿ ಪ್ರಾತಃ 5 ರಿಂದ 11 ರವರೆಗೆ ಪೂರ್ಣಾಹುತಿ, ಕಲಶ ತೀರ್ಥ ಸಂಯೋಜನೆ ಜರುಗಲಿದೆ. ಮೇಷ ಲಗ್ನ ಪ್ರಾತಃ 11ರಿಂದ 11.30 ಹಾಗೂ ವೃಷಭ ಲಗ್ನ ಮಧ್ಯಾಹ್ನ 1.30 ರಿಂದ 2 ಗಂಟೆ ಗುರು ಪುಷ್ಯ ಯೋಗ ಮಹೋದಯ ಪುಣ್ಯ ಸ್ನಾನಕ್ಕೆ ಶುಭ ಮುಹೂರ್ತವಾಗಿದೆ.



ಕುಂಭಮೇಳಕ್ಕೆ ಆಗಮಿಸುತ್ತಿರುವ ಭಕ್ತ ಸಾಗರ

ತಿ.ನರಸೀಪುರ, ಫೆ.11(ಎಂಟಿವೈ)– ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳದ 2ನೇ ದಿನವಾದ ಮಂಗಳವಾರ ಮುಂಜಾನೆಯಿಂದಲೇ ಪುಣ್ಯಸ್ನಾನ ಮಾಡಲು ತ್ರಿವೇಣಿ ಸಂಗಮಕ್ಕೆ ಭಕ್ತಸಾಗರವೇ ಹರಿದು ಬಂದಿತು.

ದಕ್ಷಿಣ ಭಾರತದ ಏಕೈಕ ಕುಂಭಮೇಳ ನಡೆಯುವ ಸ್ಥಳ ಎನಿಸಿರುವ ತಿ.ನರಸೀಪುರದಲ್ಲಿ ಕಾವೇರಿ, ಕಪಿಲ ಹಾಗೂ ಗುಪ್ತಗಾಮಿನಿ ಸ್ಫಟಿಕ ಸರೋವರ ಸಂಗಮವಾಗುವ ತ್ರಿವೇಣಿ ಸಂಗಮದಲ್ಲಿ ಪ್ರತಿ 3 ವರ್ಷಕ್ಕೊಮ್ಮೆ ಕುಂಭಮೇಳ ನಡೆಯಲಿದ್ದು, ಕೋವಿಡ್ ಹಿನ್ನೆಲೆಯಲ್ಲಿ 2022ರಲ್ಲಿ ನಡೆಯಬೇಕಾಗಿದ್ದ ಕುಂಭಮೇಳ ಕೇವಲ ಸಾಂಪ್ರದಾಯಿಕ ಪೂಜೆಗಷ್ಟೇ ಸೀಮಿತವಾಗಿತ್ತು. ಇದೀಗ 6 ವರ್ಷಗಳ ಬಳಿಕ ನಡೆಯುತ್ತಿರುವ 13ನೇ ಕುಂಭಮೇಳಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮೇಳದ ಮೊದಲ ದಿನವಾದ ಸೋಮವಾರ 50 ಸಾವಿರಕ್ಕೂ ಹೆಚ್ಚು ಭಕ್ತರು ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿ ವಿಶೇಷ ಪೂಜೆ ಸಲ್ಲಿಸಿದ್ದರು. ಮಂಗಳವಾರ ಮುಂಜಾನೆಯಿಂದಲೇ ತ್ರಿವೇಣಿ ಸಂಗಮದ ಸ್ನಾನಘಟ್ಟದಲ್ಲಿ ಅಪಾರ ಭಕ್ತರು ಪುಣ್ಯಸ್ನಾನ ಮಾಡುವ ಮೂಲಕ ಭಕ್ತಿ ಸುಧೆಯಲ್ಲಿ ಮಿಂದೆದ್ದರು.

ರಾಜ್ಯ, ಹೊರ ರಾಜ್ಯದಿಂದ ಆಗಮನ: ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡಲು ರಾಜ್ಯ ಸೇರಿದಂತೆ ಹೊರ ರಾಜ್ಯಗಳಿಂದ ಹೆಚ್ಚಿನ ಭಕ್ತರು ಆಗಮಿಸಿದ್ದು ವಿಶೇಷವಾಗಿತ್ತು. ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಹೋಗಲು ಸಾಧ್ಯವಾಗದ ರಾಜ್ಯದ ವಿವಿಧ ಜಿಲ್ಲೆ ಹಾಗೂ ತಮಿಳುನಾಡು, ಕೇರಳ, ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆಗಳಿಂದ ಆಗಮಿಸಿದ ಭಕ್ತರು ತಿ.ನರಸೀಪುರದಲ್ಲಿ ಪುಣ್ಯಸ್ನಾನ ಮಾಡಿದರು.

ದೇವಾಲಯಗಳಲ್ಲಿ ಭಕ್ತರ ದಂಡು: ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿರುವ ಅಗಸ್ತ್ಯೇಶ್ವರ, ಗುಂಜಾನರಸಿಂಹಸ್ವಾಮಿ ಭಿಕ್ಷೇಶ್ವರ, ಶ್ರೀಬಳ್ಳೇಶ್ವರ, ಶ್ರೀಚೌಡೇಶ್ವರಿ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಮುಂಜಾನೆಯಿಂದ ಸಂಜೆವರೆಗೂ ಭಕ್ತರ ದಂಡು ನೆರೆದಿತ್ತು. ತಿ.ನರಸೀಪುರದ ಪಟೇಲ್ ಚೌಡಯ್ಯ ವೃತ್ತದಿಂದ ಅಗಸ್ತ್ಯೇಶ್ವರ ದೇವಾಲಯದವರೆಗೂ ಭಕ್ತರು ಅಪಾರ ಪ್ರಮಾಣದಲ್ಲಿ ಜಮಾಯಿಸಿದ್ದರು. ಭಕ್ತರು ನಿರಂತರವಾಗಿ ಬರುತ್ತಿದ್ದರಿಂದ ದೇವಾಲಯದಿಂದ ಭಕ್ತರನ್ನು ಹೊರಗೆ ಕಳುಹಿಸಲು ಪೊಲೀಸರು, ಹೋಂ ಗಾರ್ಡ್ ಹಾಗೂ ದೇವಾಲಯದ ಸಿಬ್ಬಂದಿ ಹೈರಾಣಾದರು.

ಸ್ನಾನಘಟ್ಟದ ಬಳಿ ತೀವ್ರ ನಿಗಾ: ಹೆಚ್ಚಿನ ಭಕ್ತರು ಏಕಕಾಲದಲ್ಲಿ ಸ್ನಾನಘಟ್ಟಕ್ಕೆ ಇಳಿದ ಪರಿಣಾಮ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ತೀವ್ರ ಕಟ್ಟೆಚ್ಚರ ವಹಿಸಿದ್ದರು. ಬೋಟ್‌ನಲ್ಲಿ ಸಂಚರಿಸುತ್ತಾ ಪುಣ್ಯಸ್ನಾನ ಮಾಡುವ ಭಕ್ತರ ಸುರಕ್ಷತೆಗೆ ಹದ್ದಿನ ಕಣ್ಣಿಟ್ಟು ಕಾರ್ಯ ನಿರ್ವಹಿಸಿದರು.

ಪ್ರವಾಸಿ ಮಿತ್ರರ ಸೇವೆ: ಮೈಸೂರಿನಿಂದ ತಿ.ನರಸೀಪುರಕ್ಕೆ 'ಪ್ರವಾಸಿ ಮಿತ್ರ' ಸಿಬ್ಬಂದಿ ಆಗಮಿಸಿ, ಕುಂಭಮೇಳಕ್ಕೆ ಬಂದಿದ್ದ ಭಕ್ತರು ಹಾಗೂ ಪ್ರವಾಸಿಗರಿಗೆ ಕರಪತ್ರ ವಿತರಿಸುವ ಮೂಲಕ ಸುತ್ತಮುತ್ತಲಿನ ಪ್ರವಾಸಿ ತಾಣಕ್ಕೆ ಭೇಟಿ ನೀಡುವಂತೆ ಜಾಗೃತಿ ಮೂಡಿಸುತ್ತಿದ್ದರು.

ಪ್ರಸಾದದ ಕೊರತೆ: ಕುಂಭಮೇಳಕ್ಕೆ ಬರುವ ಭಕ್ತರಿಗೆ 3 ಕಡೆ ಪ್ರಸಾದ ವಿನಿಯೋಗಿಸುವ ವ್ಯವಸ್ಥೆ ಮಾಡಲಾಗಿದೆಯಾದರೂ, ಇಂದು ಭಕ್ತರ ಸಂಖ್ಯೆಗೆ ಅನುಗುಣವಾಗಿ ಸಕಾಲಕ್ಕೆ ಪ್ರಸಾದ ವಿನಿಯೋಗಿಸಲು ಸಾಧ್ಯವಾಗಲಿಲ್ಲ. ಮುಂಜಾನೆಯಿಂದಲೇ ಭಕ್ತ ಸಾಗರ ಹರಿದು ಬಂದ ಹಿನ್ನೆಲೆಯಲ್ಲಿ ಅಡುಗೆ ತಯಾರಿ ವಿಳಂಭವಾಯಿತು. ಅಡುಗೆ ತಯಾರಾದ ಬಳಿಕ ಪ್ರಸಾದ ಸ್ವೀಕರಿಸಲು ಅಪಾರ ಭಕ್ತರು ಮುಗಿ ಬಿದ್ದ ಪರಿಣಾಮ ಅನೇಕ ಭಕ್ತರಿಗೆ ಪ್ರಸಾದ ಸಿಗದೆ ನಿರಾಸೆ ಅನುಭವಿಸಿದರು.

ಅಧಿಕಾರಿಗಳ ಮೇಲುಸ್ತುವಾರಿ: ಮೈಸೂರು ಉಪವಿಭಾಗಾಧಿಕಾರಿ ರಕ್ಷಿತ್ ನೇತೃತ್ವದಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಕುಂಭಮೇಳದ ಮೇಲುಸ್ತುವಾರಿ ಕರ್ತವ್ಯದಲ್ಲಿ ತೊಡಗಿದ್ದರು. ಎಲ್ಲಿಯೂ ಲೋಪವಾಗದಂತೆ ಕಟ್ಟೆಚ್ಚರ ವಹಿಸಲಾಗಿತ್ತು.

ಪುಣ್ಯಸ್ನಾನದಿಂದ ಅಂತರಂಗ ಶುದ್ಧಿ, ಮನಃಶಾಂತಿ

ಕೆ.ಆರ್.ನಗರ ಕಾಗಿನೆಲೆ ಮಠದ ಶಿವಾನಂದಪುರಿ ಸ್ವಾಮೀಜಿ



ಧಾರ್ಮಿಕ ಸಭೆಯನ್ನು ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ತಿ.ನರಸೀಪುರ, ಫೆ.11– ನದಿಗಳು ಹಾಗೂ ದೇವಾಲಯಗಳು ಸಂಗಮಗೊಳ್ಳುವ ತ್ರಿವೇಣಿ ಸಂಗಮದಂತಹ ಕ್ಷೇತ್ರದಲ್ಲಿ ಪುಣ್ಯಸ್ನಾನ ಮಾಡುವುದರಿಂದ ಮನಃ ಶಾಂತಿ ಮತ್ತು ಮಾನಸಿಕ ಸ್ಥಿತಿ ವೃದ್ಧಿಯಾಗಲಿದೆ. ದೇವರುಗಳ ದರ್ಶನದಿಂದ ಜೀವನದ ಆತ್ಮಾವಲೋಕನವಾಗಲಿದೆ ಎಂದು ಕೆ.ಆರ್.ನಗರ ಕಾಗಿನೆಲೆ ಮಠದ ಶಿವಾನಂದಪುರಿ ಸ್ವಾಮೀಜಿ ತಿಳಿಸಿದರು.

ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳದ ಎರಡನೇ ದಿನವಾದ ಮಂಗಳವಾರ ನಡೆದ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು, ಪುಣ್ಯಸ್ನಾನವೆಂದರೆ ಪಾಪಗಳನ್ನು ಕಳೆದುಕೊಳ್ಳುವುದಲ್ಲ. ಮನೆಯಲ್ಲಿ ಸ್ನಾನ ಮಾಡುವುದಕ್ಕೂ ನದಿಯಲ್ಲಿ ಸ್ನಾನ ಮಾಡುವುದಕ್ಕೂ ವ್ಯತ್ಯಾಸವಿದ್ದು, ಧಾರ್ಮಿಕ ಉತ್ಸವದಲ್ಲಿನ ಪುಣ್ಯಸ್ನಾನಕ್ಕೆ ಹೆಚ್ಚಿನ ಮಹತ್ವವಿದೆ. ಕುಂಭಮೇಳದ ಪುಣ್ಯಸ್ನಾನ ಪ್ರತಿಯೊಬ್ಬರ ಅಂತರಂಗ ಶುದ್ದಿಗೊಳಿಸಿ, ಮನಃ ಶಾಂತಿ ನೀಡುತ್ತದೆ ಎಂದು ಬಣ್ಣಿಸಿದರು.

ಉತ್ತರ ಭಾರತದ ಪ್ರಯಾಗ ರಾಜ್ ಮಾದರಿ ದಕ್ಷಿಣ ಭಾರತದಲ್ಲಿ ಕುಂಭಮೇಳ ಆಯೋಜಿಸಲು ಆದಿಚುಂಚನಗಿರಿ ಶ್ರೀಗಳು, ಸುತ್ತೂರು ಹಾಗೂ ತಿರುಚ್ಚಿ ಶ್ರೀಗಳು ಕಾವೇರಿ, ಕಪಿಲ ಹಾಗೂ ಸ್ಫಟಿಕ ಸರೋವರಗಳು ಸಂಗಮಗೊಳ್ಳುವ ತಿರುಮಕೂಡಲು ಕ್ಷೇತ್ರದಲ್ಲಿ ಶ್ರೀಕಾರ ಹಾಕಿರುವುದು ಈ ಭಾಗದ ಜನರ ಸೌಭಾಗ್ಯವೇ ಆಗಿದೆ. 1989 ರಿಂದ ನಡೆದ 12 ಕುಂಭಮೇಳಗಳು ಲಕ್ಷಾಂತರ ಜನರ ಧಾರ್ಮಿಕ ಭಾವನೆ ವೃದ್ಧಿಸಲು ಸಹಕಾರಿಯಾಗಿವೆ. ಈ ಬಾರಿಯ ಕುಂಭಮೇಳ ನಾಡಿಗೆ ಒಳಿತು ಮಾಡಲೆಂದು ಗೀತೆ ಹಾಡುವ ಮೂಲಕ ಶುಭ ಹಾರೈಸಿದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಆಯೋಜಿಸಿದ್ದ ಧಾರ್ಮಿಕ ಸಭೆಯನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಮೈಸೂರು ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ, ಬೆಟ್ಟದಪುರ ಮಠದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಅನ್ನದಾನೇಶ್ವರ ಸ್ವಾಮೀಜಿ, ದೊರೆಸ್ವಾಮಿ ಸ್ವಾಮೀಜಿ, ಮುಖಂಡ ತಿರುಮಕೂಡಲು ವೆಂಕಟೇಶ್ ಇತರರಿದ್ದರು.

ತಿ.ನರಸೀಪುರದಲ್ಲಿ ವಿವಿಧ ಮಠಾಧೀಶರ ಮೆರವಣಿಗೆ



ತಿ.ನರಸೀಪುರದ ಪ್ರಮುಖ ಬೀದಿಗಳಲ್ಲಿ ವಿವಿಧ ಮಠಾಧೀಶರನ್ನು ಮೆರವಣಿಗೆ ಮಾಡಲಾಯಿತು.

ತಿ.ನರಸೀಪುರ, ಫೆ.11– ಕುಂಭಮೇಳದಲ್ಲಿ ಭಾಗವಹಿಸುವ ವಿವಿಧ ಮಠಾಧೀಶರನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಂಗಳವಾರ ಬೆಳ್ಳಿ ರಥದಲ್ಲಿ ಮೆರವಣಿಗೆ ಮಾಡಲಾಯಿತು.

ಶ್ರೀಗುಂಜಾನರಸಿಂಹಸ್ವಾಮಿ ದೇವಾಲಯದಿಂದ ಆರಂಭಗೊಂಡ ಮೆರವಣಿಗೆ ಪಟ್ಟಣದ ವಿಶ್ವಕರ್ಮ ಬೀದಿ, ಚಿತ್ರಮಂದಿರ ವೃತ್ತ, ಲಿಂಕ್ ರಸ್ತೆ, ಬಸ್ ನಿಲ್ದಾಣ ವೃತ್ತ ಹಾಗೂ ಹೊಸ ತಿರುಮಕೂಡಲು ರಸ್ತೆ ಮಾರ್ಗವಾಗಿ ತ್ರಿವೇಣಿ ಸಂಗಮ ತಲುಪಿತು. ಮಂಗಳವಾದ್ಯ, ವೀರಗಾಸೆ, ಕೊಂಬು ಕಹಳೆ, ಕಳಶ ಹೊತ್ತ ಸುಮಂಗಲಿಯರು, ಕಂಸಾಳೆ ಪೂಜೆ ಕುಣಿತ, ಗಾರುಡಿ ಕುಣಿತ, ಕೋಲಾಟ, ವೀರ ಮಕ್ಕಳ ಕುಣಿತ, ಕೀಲು ಕುದುರೆ, ಪಟ್ಟ ಕುಣಿತ ತಮಟೆ, ಬ್ಯಾಂಡ್ ಸೆಟ್ ದೇವಾಳ ಮತ್ತು ಸ್ತಬ್ಧ ಚಿತ್ರಗಳು ಮೆರವಣಿಗೆಗೆ ಕಳೆ ತಂದವು. ಪ್ರಮುಖ ಬೀದಿಯಲ್ಲಿ ಸಾಗಿದ ಮೆರವಣಿಗೆ ಸಾರ್ವಜನಿಕರ ಗಮನ ಸೆಳೆಯಿತು.

ಕುಂಭಮೇಳ ಭಾರತೀಯರ ಮನಸ್ಸಿನ ಮೇಲೆ ಪ್ರಭಾವ ಬೀರಿದೆ

ಕೈಲಾಸ ಆಶ್ರಮದ ಶ್ರೀಜಯೇಂದ್ರ ತೀರ್ಥ ಸ್ವಾಮೀಜಿ ಅಭಿಪ್ರಾಯ



ಕುಂಭಮೇಳದಲ್ಲಿ ಕೈಲಾಸ ಆಶ್ರಮದ ಶ್ರೀಜಯೇಂದ್ರ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿದರು

ತಿ.ನರಸೀಪುರ, ಫೆ.11– ಜಾತಿ, ಮತ, ಪ್ರದೇಶದ ಎಲ್ಲಾ ಅಡೆತಡೆಗಳನ್ನು ಲೆಕ್ಕಿಸದೆ ಕುಂಭಮೇಳ ಭಾರತೀಯರ ಮನಸ್ಸು ಮತ್ತು ಕಲ್ಪನೆಯ ಮೇಲೆ ಅದ್ಭುತ ಪ್ರಭಾವ ಬೀರಿದೆ ಎಂದು ಕೈಲಾಸ ಆಶ್ರಮದ ಶ್ರೀಜಯೇಂದ್ರ ತೀರ್ಥ ಸ್ವಾಮೀಜಿ ತಿಳಿಸಿದರು.

ತ್ರಿವೇಣಿ ಸಂಗಮದಲ್ಲಿ ಸೋಮವಾರದಿಂದ ಆರಂಭವಾಗಿರುವ 13ನೇ ಕುಂಭಮೇಳದ ಎರಡನೇ ದಿನವಾದ ಮಂಗಳವಾರ ಯಾಗಶಾಲೆ ಪ್ರವೇಶ ಕಾರ್ಯಕ್ರಮದ ಪೂಜಾ ಕೈಂಕರ್ಯ ನೆರವೇರಿಸಿ, ಆಶೀರ್ವಚನ ನೀಡಿ ಅವರು ಮಾತನಾಡಿದರು.

ಕುಂಭಮೇಳವೆಂಬ ಧಾರ್ಮಿಕ ಕಾರ್ಯಕ್ರಮ ಹಿಂದೂಗಳಿಗೆ ಧಾರ್ಮಿಕವಾಗಿ ಅತ್ಯಂತ ಮಹತ್ವದ್ದಾಗಿದೆ. ಪ್ರತಿ ಕುಂಭಮೇಳ ಸಂದರ್ಭದಲ್ಲೂ ಲಕ್ಷಾಂತರ ಹಿಂದೂಗಳು ಆಚರಣೆಗಳಲ್ಲಿ ಭಾಗವಹಿಸುತ್ತಾರೆ. ಕುಂಭಮೇಳವು ವಿಶ್ವದಲ್ಲೇ ಅತೀ ಹೆಚ್ಚು ಧಾರ್ಮಿಕ ಸಭೆಗಳು ನಡೆಯುವ ಸ್ಥಳ. ಹಿಂದೂ ಪುರಾಣಗಳ ಪ್ರಕಾರ ಒಬ್ಬ ವ್ಯಕ್ತಿ ತನ್ನ ಪಾಪಗಳನ್ನು ಬಿಡಿಸಿ ಜನನ ಮತ್ತು ಪುನರ್ಜನ್ಮದ ವಿಷ ಚಕ್ರದಿಂದ ನಿರ್ವಾಣ ಸಾಧಿಸಲು ಜಗತ್ತಿನ ಏಕೈಕ ಸಮಯ ಮತ್ತು ಸ್ಥಳ. ವ್ಯಕ್ತಿಯ ಎಲ್ಲಾ ಪಾಪಗಳನ್ನು ತೊಳೆಯುತ್ತದೆ ಎಂದು ಹೇಳಲಾಗುವ ಪವಿತ್ರ ಗಂಗೆಯಲ್ಲಿ ಸ್ನಾನ ಮಾಡಿ ದೀಪ ಬೆಳಗಿಸಿ ಮತ್ತು ಇಷ್ಟಾರ್ಥ ಸಲ್ಲಿಸಿದರೆ ಅವು ನಿಜವಾಗುತ್ತವೆ. ಪವಿತ್ರ ನೀರಿನಲ್ಲಿ ಪವಿತ್ರ ಸ್ನಾನ ಮಾಡಲು ಮತ್ತು ಹಿಂದೆ ಮಾಡಿದ ಎಲ್ಲಾ ಪಾಪ ತೊಳೆಯಲು ಅವರಿಗೆ ಅವಕಾಶ ಕೊಡುತ್ತದೆ ಹಾಗೂ ತ್ರಿವೇಣಿ ಸಂಗಮದ ನೀರಿನಲ್ಲಿ ಪವಿತ್ರ ಸ್ನಾನ ಮಾಡುವುದರಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂದು ನಂಬಲಾಗಿದೆ ಎಂದರು.

ಕುಂಭಮೇಳ ಒಂದು ಐತಿಹಾಸಿಕ ಹಿಂದೂ ಧಾರ್ಮಿಕ ಉತ್ಸವ ಮತ್ತು ತೀರ್ಥ ಯಾತ್ರೆಯಾಗಿದ್ದು, ಇದನ್ನು ವಿಶ್ವದ ಅತಿದೊಡ್ಡ ಶಾಂತಿಯುತ ಸಭೆ ಎಂದು ಪರಿಗಣಿಸಲಾಗಿದೆ ಭಾರತದ 4 ಪರ್ಯಾಯ ಸ್ಥಳಗಳಾದ ಹರಿದ್ವಾರ, ಪ್ರಯಾಗ್‌ರಾಜ್ (ಅಲಹಾಬಾದ್), ನಾಸಿಕ್ ಮತ್ತು ಉಜ್ಜಯಿನಿಯಲ್ಲಿ ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳವು ಪವಿತ್ರ ನದಿಗಳಲ್ಲಿ ಪವಿತ್ರ ಸ್ನಾನ ಮಾಡಲು ಪ್ರಪಂಚದಾದ್ಯಂತ ಲಕ್ಷಾಂತರ ಯಾತ್ರಿಕರನ್ನು ಆಕರ್ಷಿಸುತ್ತದೆ. ಪಾಪಗಳನ್ನು ಶುದ್ಧೀಕರಿಸಿ, ಮೋಕ್ಷಕ್ಕೆ ಸಹಾಯ ಮಾಡುವ ಈ ಧಾರ್ಮಿಕ ಸ್ನಾನವು ಹಬ್ಬದ ಆಧ್ಯಾತ್ಮಿಕ ಅರ್ಥಕ್ಕೆ ಅತ್ಯಗತ್ಯ. ಕುಂಭಮೇಳ ಒಳ್ಳೆಯದು ಮತ್ತು ಕೆಟ್ಟದ್ದರ ನಡುವಿನ ಶಾಶ್ವತ ಹೋರಾಟ ಪ್ರತಿನಿಧಿಸುತ್ತದೆ. ಪ್ರಾರ್ಥನೆಗಳು, ಸಾಂಸ್ಕೃತಿಕ ಉತ್ಸವಗಳು ಮತ್ತು ತಪಸ್ವಿಗಳು ಮತ್ತು ಯಾತ್ರಿಕರ ವೈವಿಧ್ಯಮಯ ಸಭೆಗಳ ಕ್ರಿಯಾತ್ಮಕ ಮಿಶ್ರಣದೊಂದಿಗೆ ಕುಂಭಮೇಳವು ಭಾರತದ ಶ್ರೀಮಂತ ಆಧ್ಯಾತ್ಮಿಕ ಸಂಪ್ರದಾಯ ಮತ್ತು ನಂಬಿಕೆಯನ್ನು ಅನುಸರಿಸುವ ಪ್ರಬಲ ಸಂಕೇತವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದ ಸ್ವಾಮೀಜಿ ಅವರನ್ನು ಪೂರ್ಣಕುಂಭ ಸ್ವಾಗತ ಕೋರಿ ಯಾಗ ಮಂಟಪಕ್ಕೆ ಕರೆತರಲಾಯಿತು.

ಮೈಸೂರು ಶಾಖಾ ಮಠದ ಸೋಮನಾಥೇಶ್ವರ ಸ್ವಾಮೀಜಿ, ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ ನಂಜುಂಡಸ್ವಾಮಿ, ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಆಲಗೂಡು ವೆಂಕಟರಮಶೆಟ್ಟಿ, ಅಂಗಡಿ ಶೇಖರ್, ಫ್ಯಾನ್ಸಿ ಮೋಹನ್, ಲಕ್ಷ್ಮಣ, ಪಿ.ಸ್ವಾಮಿನಾಥ್‌ಗೌಡ, ಮರಿದೇವೇಗೌಡ, ಫಣೀಶ್ ಕುಮಾರ್, ಸೋಮಣ್ಣ, ಚೇತನ್, ಬಸವರಾಜು ಮತ್ತಿತರರಿದ್ದರು.

"ಕುಂಭಮೇಳ ಭಾರತದ ವೈವಿಧ್ಯಮಯ ಸಂಪ್ರದಾಯ ಮತ್ತು ಆಧ್ಯಾತ್ಮಿಕ ಆಚರಣೆಗಳನ್ನು ಒಳಗೊಂಡ ಒಂದು ಸಾಂಸ್ಕೃತಿಕ ಉತ್ಸವವಾಗಿದೆ. ಇದು ವಿವಿಧ ಜನಸಂಖ್ಯೆಗಳ ನಡುವೆ ಧಾರ್ಮಿಕ ಭಾಷಣ, ಸಾಂಸ್ಕೃತಿಕ ವಿನಿಮಯ ಮತ್ತು ಸಾಮಾಜಿಕ ಸಂಪರ್ಕ ಸುಗಮಗೊಳಿಸುತ್ತದೆ. ಉತ್ಸವದ ಬೃಹತ್ ವ್ಯಾಪ್ತಿ ಮತ್ತು ಅದು ಪ್ರೇರೇಪಿಸುವ ಭಕ್ತಿಯು ಭಾಗವಹಿಸುವವರ ನಿರಂತರ ನಂಬಿಕೆ ಮತ್ತು ಒಗ್ಗಟ್ಟನ್ನು ಎತ್ತಿ ತೋರಿಸುತ್ತದೆ. ಇದು ಕುಂಭಮೇಳವನ್ನು ಭಾರತೀಯ ಆಧ್ಯಾತ್ಮಿಕ ಇತಿಹಾಸದಲ್ಲಿ ಒಂದು ವಿಶಿಷ್ಟ ಮತ್ತು ಮಹತ್ವದ ಘಟನೆಯನ್ನಾಗಿ ಮಾಡುತ್ತದೆ.

- ಶ್ರೀಪೂರ್ಣಾನಂದಪುರಿ ಸ್ವಾಮೀಜಿ,
ಶ್ರೀಕ್ಷೇತ್ರ ತೈಲೇಶ್ವರ ಮಹಾಸಂಸ್ಥಾನ ಮಠ.

ಸಿಸಿ ರಸ್ತೆ, ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ



ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು/ಮಲ್ಲುಂಡಿ, ಫೆ.11– ನಂಜನಗೂಡು ಕ್ಷೇತ್ರದಲ್ಲಿ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ 7.40 ಕೋಟಿ ರೂ. ಅನುದಾನ ಮಂಜೂರಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಬೀರೇದೇವನಪುರದಲ್ಲಿ 25 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಹಾಗೂ ಈರೇಗೌಡನ ಹುಂಡಿ, ವೆಂಕಟಾಚಲಪುರ, ಹೆಡಿಯಾಲ, ಕಂದೇಗಾಲ, ಅರಿಯೂರು ಗ್ರಾಮಗಳಲ್ಲಿ ತಲಾ 5 ಲಕ್ಷ ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿ, ಸೇರಿದಂತೆ ಒಟ್ಟು 50 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕ್ಷೇತ್ರಕ್ಕೆ ಕಳೆದ ಬಾರಿ 25 ಕೋಟಿ ವಿಶೇಷ ಅನುದಾನ ನೀಡಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡಿದ್ದರು. ಈ ವರ್ಷ ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪನವರು 7 ಕೋಟಿ 40 ಲಕ್ಷ ರೂ.ಗಳನ್ನು ಸಮುದಾಯ ಭವನ ನಿರ್ಮಾಣ ಕಾಮಗಾರಿಗಳಿಗೆ ಬಿಡುಗಡೆಗೊಳಿಸಿದ್ದಾರೆ. ಈ ಅನುದಾನದಲ್ಲಿ ತಾಲೂಕಿನ ಹಲವು ಗ್ರಾಮಗಳಲ್ಲಿ ಅಪೂರ್ಣಗೊಂಡ ಸಮುದಾಯ ಭವನಗಳ ನಿರ್ಮಾಣಕ್ಕೆ ಮೊದಲ ಆದ್ಯತೆ ನೀಡಿ ತಲಾ 5 ಲಕ್ಷ ಅನುದಾನ ನೀಡಿ ಸಮುದಾಯ ಭವನ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ. ಅಲ್ಲದೆ ಹೊಸದಾಗಿ ನಿರ್ಮಾಣವಾಗುವ ಸಮುದಾಯ ಭವನಗಳಿಗೆ ಪ್ರಾಥಮಿಕವಾಗಿ 5 ಲಕ್ಷ ರೂ. ಬಿಡುಗಡೆಗೊಳಿಸಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ನೀಡಿ ಸಮುದಾಯ ಭವನಗಳ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. ಈ ವರ್ಷವೂ ಮುಖ್ಯಮಂತ್ರಿಗಳು ನಂಜನಗೂಡು ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡುವ ಭರವಸೆ ಇದ್ದು, ಅನುದಾನ ಬಿಡುಗಡೆಯಾದ ಕೂಡಲೇ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದರು.

ಬೀರೇದೇವನಪುರದಲ್ಲಿ ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ ಜಿಪಂನ ಎಸ್‌ಇಪಿ ಯೋಜನೆಯಡಿ 25 ಲಕ್ಷದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಶಾಲಾ ಕಾಂಪೌಂಡ್ ನಿರ್ಮಾಣ ಮತ್ತು ಶೌಚಾಲಯ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ತಾಲೂಕಿನ ಈರೇಗೌಡನ ಹುಂಡಿ ಗ್ರಾಮದಲ್ಲಿ ಬಸ್ ಶೆಲ್ಟರ್ ನಿರ್ಮಾಣ, ಸಂಪರ್ಕ ರಸ್ತೆ ಅಭಿವೃದ್ಧಿ, ಕೆಂಪೇಗೌಡ ಸಮುದಾಯ ಭವನಕ್ಕೆ ಅನುದಾನ ನೀಡಲಾಗುವುದು. ಜೊತೆಗೆ ಹೆಡಿಯಾಲ ಗ್ರಾಮದ ಅಂಬೇಡ್ಕರ್ ಸಮುದಾಯ ಭವನಕ್ಕೆ ಅಡುಗೆ ಕೊಠಡಿ ನಿರ್ಮಾಣ ಮತ್ತು ಕಾಂಪೌಂಡ್ ನಿರ್ಮಾಣ ಮಾಡಿಕೊಡಲಾಗುವುದು. ತಾಲೂಕಿನ ಕಂದೇಗಾಲದಲ್ಲಿ 20 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಅಂಬೇಡ್ಕರ್ ಭವನ ನಿರ್ಮಿಸಿ ಕೊಡಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಭೂ ನ್ಯಾಯ ಮಂಡಳಿ ಸದಸ್ಯ ಜಯರಾಮ್, ಮುಖಂಡರಾದ ಸತೀಶ್, ಗೋವಿಂದರಾಜು, ನೇಮತ್ ಉಲ್ಲಾಖಾನ್, ಮಡುವಿನಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್, ಗ್ರಾಪಂ ಉಪಾಧ್ಯಕ್ಷ ದಿನೇಶ್, ಗ್ರಾಪಂ ಸದಸ್ಯ ಸತೀಶ್, ಮುಖಂಡರಾದ ಸುರೇಶ್, ಶಿವನಾಗಪ್ಪ, ಜಯಕುಮಾರ್, ಗುತ್ತಿಗೆದಾರ ಮಹದೇವ್, ಸಿದ್ದರಾಜು, ಪಟೇಲ್ ಮಹದೇವಪ್ಪ, ಮಹೇಶ್, ಇಂಜಿನಿಯರ್ ಯಶವಂತ್, ಈರಯ್ಯ ಕೃಷ್ಣ, ಗೋವಿಂದರಾಜು, ಪಟೇಲ್, ಮಹದೇವು, ಕೃಷ್ಣಮೂರ್ತಿ ಸೇರಿದಂತೆ ಇತರರಿದ್ದರು.

ಉ.ಭಾರತಕ್ಕಿಂತ ತಿ.ನರಸೀಪುರ ಕುಂಭಮೇಳಕ್ಕೆ ಮಹತ್ವ ಹೆಚ್ಚು

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ



ತಿ.ನರಸೀಪುರ, ಫೆ.11– ಉತ್ತರ ಭಾರತದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳಕ್ಕಿಂತ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ಗುಲಗಂಜಿಯಷ್ಟು ಮಹತ್ವ ಹೆಚ್ಚಾಗಿದೆ ಎಂದು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ತ್ರಿವೇಣಿ ಸಂಗಮದಲ್ಲಿ ಮಂಗಳವಾರ ಸಂಜೆ ನಡೆದ ಕಾವೇರಿ ಆರತಿ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ಕಾವೇರಿ, ಕಪಿಲ ಹಾಗೂ ಸ್ಫಟಿಕ ಸರೋವರ ಸಂಗಮ ಕ್ಷೇತ್ರವಾದ ತಿ.ನರಸೀಪುರದ ತ್ರಿವೇಣಿ ಸಂಗಮ ಮಹತ್ವದ ಕ್ಷೇತ್ರವಾಗಿದೆ ಎಂದರು.

ಮಾಘಶುದ್ಧ ಪೂರ್ಣಿಮೆ ದಿನ ಪುಣ್ಯ ಸ್ನಾನ ಮಾಡಿದರೆ ಒಳ್ಳೆಯದಾಗುತ್ತದೆ. ಕುಂಭಮೇಳದ ಕೊನೆಯ ದಿನವಾದ ನಾಳೆ ಶುದ್ಧ ಪೂರ್ಣಿಮೆ ದಿನವಾಗಿದ್ದು ಎರಡು ಮುಹೂರ್ತದಲ್ಲಿ ಪುಣ್ಯ ಸ್ನಾನ ಮಾಡಲು ಅವಕಾಶ ನೀಡಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪುಣ್ಯ ಸ್ನಾನ ಮಾಡುವ ಮೂಲಕ ದೈವದ ಕೃಪೆಗೆ ಪಾತ್ರರಾಗಬೇಕು ಎಂದರು.

ಉತ್ತರ ಭಾರತದಲ್ಲಿ ಈ ವರ್ಷ ಮಹಾ ಕುಂಭಮೇಳ ನಡೆಯುತ್ತಿರುವುದರಿಂದ ಉತ್ತರ ಭಾರತದ ಮಠಾಧೀಶರು ಸಾಧು ಸಂತರು ನಾಗ ಸಾಧುಗಳು ಮಹಾಕುಂಭಮೇಳದಲ್ಲಿ ಪಾಲ್ಗೊಂಡಿದ್ದಾರೆ. ಅಲ್ಲದೆ ಶಿವರಾತ್ರಿಯ ದಿನ ಉತ್ತರ ಭಾರತದ ಸ್ವಾಮೀಜಿಗಳು ಮತ್ತು ನಾಗ ಸಾಧುಗಳು ಕಾಶಿಗೆ ಕಡ್ಡಾಯವಾಗಿ ಹೋಗುವ ಪರಿಪಾಠ ಹೊಂದಿದ್ದಾರೆ. ಅದಕ್ಕಾಗಿ ಉತ್ತರ ಭಾರತದ ಸ್ವಾಮೀಜಿಗಳು ಈ ಬಾರಿ ದಕ್ಷಿಣ ಭಾರತದ ಕುಂಭಮೇಳಕ್ಕೆ ಬಂದಿಲ್ಲ. ಮುಂಬರುವ ವರ್ಷದಲ್ಲಿ ಉತ್ತರ ಭಾರತದ ಸ್ವಾಮೀಜಿಗಳನ್ನು ಆಹ್ವಾನಿಸಲು ಚರ್ಚಿಸುವುದಾಗಿ ತಿಳಿಸಿದರು.

ಚಿಕ್ಕಕೆರೆಯೂರು ಡೈರಿಯಲ್ಲಿ ಕಾಂಗ್ರೆಸ್ ಬೆಂಬಲಿತರ ಗೆಲುವು



ಕಾಂಗ್ರೆಸ್ ಬೆಂಬಲಿತ ಸದಸ್ಯರು ವಿಜಯೋತ್ಸವ ಆಚರಿಸಿದರು.

ಹೆಚ್.ಡಿ.ಕೋಟೆ, ಫೆ.11– ತಾಲೂಕಿನ ಚಿಕ್ಕಕೆರೆಯೂರು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದರೆ, ಜೆಡಿಎಸ್-ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಸೋಲು ಅನುಭವಿಸಿದ್ದಾರೆ.

ಸಂಘದ ಕಚೇರಿಯಲ್ಲಿ 8 ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಮಂಜು 121, ಮಂಜೇಗೌಡ 115, ನಾಗೇಂದ್ರ 111, ಎಂ.ಆರ್.ಮಹೇಶ್ 108, ಡಿ.ಕುಮಾರ್ 102, ಸಿ.ಎಂ.ಸಿದ್ದರಾಜು 93, ರತ್ನಮ್ಮ 99, ಪುಟ್ಟಮ್ಮ 99 ಮತಗಳನ್ನು ಪಡೆದು ಜಯ ಸಾಧಿಸಿದ್ದಾರೆ.

ಕಾಂಗ್ರೆಸ್ ಬೆಂಬಲಿತರಾದ ಸಿ.ಕೆ. ಲೋಕೇಶ್, ಜಯಮ್ಮ, ಸಿದ್ದಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದರು. ಹಾಲು ಉತ್ಪಾದಕರ ಸಹಕಾರ ಸಂಘದ ಒಟ್ಟು 11 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿ ಸಂಘದ ಅಧಿಕಾರವನ್ನು ತಮ್ಮದಾಗಿಸಿಕೊಂಡರು.

ಜೆಡಿಎಸ್-ಬಿಜೆಪಿ ಮೈತ್ರಿ ಬೆಂಬಲಿತ ಅಭ್ಯರ್ಥಿಗಳಾದ ಸಿ.ಶರತ್, ಸತೀಶ್, ಸುರೇಶ್, ರಾಜಶೇಖರ್, ಬಿಳಿಯಯ್ಯ, ಸುಂದರ, ಶಾರದಮ್ಮ, ವಿನೋದ ಕುಮಾರಿ, ನಾಗೇಗೌಡ ಸೋಲು ಅನುಭವಿಸಿದರು.


ಇದೇ ವೇಳೆ ಸಂಘಕ್ಕೆ ಆಯ್ಕೆಯಾದ ನೂತನ ನಿರ್ದೇಶಕರನ್ನು ಗ್ರಾಮಸ್ಥರು ಅಭಿನಂದಿಸಿದರು. ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ತಮ್ಮೇಗೌಡ, ಅಕ್ರಮ ಸಕ್ರಮ ಸಮಿತಿ ಸದಸ್ಯ ಕೆಂಡಗಣ್ಣೇಗೌಡ, ತಾಪಂ ಮಾಜಿ ಅಧ್ಯಕ್ಷ ಕೆ.ಎಸ್.ಬಾಲಚಂದ್ರ, ಮಾದಾಪುರ ವಿಎಸ್‌ಎಸ್‌ಎನ್ ಅಧ್ಯಕ್ಷ ಮಹೇಶ್, ಮುಖಂಡರಾದ ಸಿ.ಕೃಷ್ಣೇಗೌಡ, ಕೆ.ಟಿ.ಶ್ರೀನಿವಾಸ, ಸಿ.ಎನ್.ರವಿ, ಸುಪ್ರೀತ್, ಬಸವರಾಜು, ಗ್ರಾಪಂ ಸದಸ್ಯರಾದ ಸಿ.ಕೆ.ರವಿ, ಮಹೇಶ, ಪ್ರಸನ್ನ ಕುಮಾರ್, ಲೋಕೇಶ್, ಎಂ.ಸೋಮೇಗೌಡ, ರಾಮೇಗೌಡ, ವೆಂಕಟೇಶ್, ರವೀಶ, ಪ್ರಭು, ಮಹೇಶ, ಆನಂದ, ಮಹದೇವ, ಕಂಸರಾಜು, ವೆಂಕಟೇಗೌಡ, ಗೋವಿಂದೇಗೌಡ, ನಾಗರಾಜು, ವಿಜೇಂದ್ರೇಗೌಡ, ಉಮೇಶ, ಈಶ್ವರ ವೆಂಕಟರಾಜು, ಕೆಂಡಯ್ಯ, ಚಿಕ್ಕಣ್ಣಪ್ರಕಾಶ, ರವಿಬೆಟ್ಟಯ್ಯ, ಮಾದೇಶ, ಚೆಲುವರಾಜು, ಶಿವರಾಜು, ಜಯಣ್ಣ, ಮಾದರಾಜು ಇನ್ನಿತರರಿದ್ದರು.

ರಂಗಣ್ಣ ನಿಧನ



ಸರಗೂರು, ಫೆ.11– ಪಟ್ಟಣದ ಆರ್ಯ ಈಡಿಗ ಸಮಾಜದ ಮಾಜಿ ಯಜಮಾನ ಎಸ್.ಕೆ.ರಂಗಣ್ಣ (72) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಆರ್ಯ ಈಡಿಗರ ಸಮಾಜದ ರುದ್ರ ಭೂಮಿಯಲ್ಲಿ ಮಂಗಳವಾರ ನಡೆಯಿತು.

ನಂಜೇಗೌಡ



ಹೆಚ್.ಡಿ.ಕೋಟೆ, ಫೆ.11– ತಾಲೂಕಿನ ಮಾದಾಪುರ ಗ್ರಾಮದ ನಿವಾಸಿಯೂ ಆದ ತಾಪಂ ಮಾಜಿ ಸದಸ್ಯ ನಂಜೇಗೌಡ (74) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಮಾದಾಪುರದಲ್ಲಿ ಬುಧವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ನಾಳೆ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ

ಬೆಟ್ಟದಪುರ, ಫೆ.11– ಗ್ರಾಮದ ಪ್ರಸಿದ್ಧ ಶ್ರೀಭ್ರಮರಾಂಬ ಸಮೇತ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ಫೆ.13ರಂದು ಅದ್ದೂರಿಯಾಗಿ ನಡೆಯಲಿದೆ. ಫೆ.12ರಂದು ರಾತ್ರಿ ಗ್ರಾಮದ ಹೃದಯ ಭಾಗದಲ್ಲಿರುವ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಆವರಣದಲ್ಲಿ ಗಿರಿಜಾ ಕಲ್ಯಾಣೋತ್ಸವ ನೆರವೇರಲಿದ್ದು, ಗುರುವಾರ ಬೆಳಗ್ಗೆ ಮೂರು ರಥಗಳ ಮೇಲೆ ಬೆಳ್ಳಿಬಸಪ್ಪ, ಗಣಪತಿ ಹಾಗೂ ಗಿರಿಜಮ್ಮ ಮಲ್ಲಯ್ಯ ದೇವರ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ, ಬಳಿಕ ಬ್ರಹ್ಮ ರಥೋತ್ಸವಕ್ಕೆ ಚಾಲನೆ ನೀಡಲಾಗುವುದು.

ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಕುಸಿತ

ಮೈಸೂರಲ್ಲಿ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ನಂತರ ಮತ್ತೊಂದು ಅವಶೇಷಕ್ಕೆ ಆಸ್ಪದ!

● ಪೂರ್ಣ ನೆಲಸಮ ಕಾಮಗಾರಿಯ ಬಗ್ಗೆ ಸ್ಪಷ್ಟತೆ ಇಲ್ಲ ● ದಿನನಿತ್ಯ ಆತಂಕದಲ್ಲೇ ದಿನದೂಡುವ ಆರ್ಟ್ಸ್ ಕಾಲೇಜು ವಿದ್ಯಾರ್ಥಿನಿಯರು



ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಕುಸಿದಿರುವುದು.



ಕುಸಿದ ಕಟ್ಟಡದ ಕಡೆಗೆ ಯಾರೂ ಸುಳಿಯದಂತೆ ನೆಟ್ ಅಳವಡಿಸಿರುವುದು.

ಮೈಸೂರು, ಫೆ.11(ಎಸ್‌ಬಿಡಿ)– ನಗರದ ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡವೂ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡದ ಸಾಲಿಗೆ ಸೇರಲಿದೆಯೇ ಎಂಬ ಆತಂಕ ನಿರ್ಮಾಣವಾಗಿದೆ.

ಈ ಕಾಲೇಜಿನ ಶಿಥಿಲಗೊಂಡಿದ್ದ ಕಟ್ಟಡದ ಚಾವಣಿ ಕುಸಿದು ಕಾರ್ಮಿಕ ನೋರ್ವ ಮೃತಪಟ್ಟ ದುರಂತ ಸಂಭವಿಸಿ 15 ದಿನಗಳಾದರೂ ಕಟ್ಟಡ ನೆಲಸಮಗೊಳಿಸುವ ಕಾಮಗಾರಿಯನ್ನು ಪುನಾರಂಭಿಸದಿರುವುದು ಈ ದುಗುಡಕ್ಕೆ ಕಾರಣವಾಗಿದೆ. ಕಟ್ಟಡದ ಅವಶೇಷದಡಿ ಸಿಲುಕಿದ್ದ ಕಾರ್ಮಿಕನ ಮೃತದೇಹ ಸಿಕ್ಕಿದ ನಂತರ ಕಟ್ಟಡ ತೆರವು ಕಾರ್ಯಾಚರಣೆ ಸ್ಥಗಿತಗೊಳಿಸಿ, ಆ ಭಾಗದಲ್ಲಿ ಯಾರೂ ಓಡಾಡದಂತೆ ನೆಟ್ ಹೌಸ್‌ಗೆ ಬಳಸುವ ಹಸಿರು ಪರದೆಯಲ್ಲಿ ಬ್ಯಾರಿಕೇಡ್ ನಿರ್ಮಿಸಲಾಗಿದೆ. ಆದರೆ ಇದೇ ಆವರಣದಲ್ಲಿ ಓಡಾಡುವ ಮಹಾರಾಣಿ ವಿಜ್ಞಾನ ಮತ್ತು ಕಲಾ ಕಾಲೇಜಿನ ವಿದ್ಯಾರ್ಥಿನಿಯರಲ್ಲಿ ಆತಂಕ ದೂರವಾಗಿಲ್ಲ. ಕಟ್ಟಡದ ಉಳಿದ ಭಾಗವೂ ಕುಸಿಯಬಹುದೆಂಬ ಭಯದಲ್ಲೇ ಇದ್ದಾರೆ. ಕಟ್ಟಡದ ಬಳಿ ಯಾರೂ ಸುಳಿದಾಡದಿದ್ದರೂ ಸಮೀಪದಲ್ಲಿ ತೆರಳುವಾಗ ಕುಸಿತ ಕಂಡರೂ ವಿದ್ಯಾರ್ಥಿನಿಯರು ಆಘಾತಕ್ಕೊಳಗಾಗುವ ಸಾಧ್ಯತೆ ಇದೆ. ಹಾಗಾಗಿ ಶೀಘ್ರ ಕಟ್ಟಡವನ್ನು ಸಂಪೂರ್ಣವಾಗಿ ನೆಲಸಮಗೊಳಿಸಿ, ನಿರ್ಮಾಣ ಕಾಮಗಾರಿ ಆರಂಭಿಸಬೇಕೆಂದು ಮನವಿ ಮಾಡಿದ್ದಾರೆ.

ಎರಡು ಬಾರಿ ಕುಸಿತ: ಮಹಾರಾಣಿ ವಿಜ್ಞಾನ ಕಾಲೇಜಿನ ಸುಮಾರು 107 ವರ್ಷದ ಹಳೆಯದಾದ ಕಟ್ಟಡ ಎರಡು ಬಾರಿ ಕುಸಿದಿದೆ. 2022ರ ಅಕ್ಟೋಬರ್ 21ರಂದು ರಸಾಯನಶಾಸ್ತ್ರ ಪ್ರಯೋಗಾಲಯದ ಭಾಗ ಕುಸಿದಿತ್ತು. ಆ ವೇಳೆ ಅದೃಷ್ಟವಶಾತ್ ಅಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಇರಲಿಲ್ಲ. ಈ ದುರಂತ ಸಂಭವಿಸಿದ ನಂತರ ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ಅಧಿಕಾರಿಗಳೆಲ್ಲಾ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದರು. ನಂತರ ದುರಸ್ತಿ ಸಾಧ್ಯವಾಗದಷ್ಟು ಶಿಥಿಲಾವಸ್ಥೆ ಸ್ಥಿತಿಯಲ್ಲಿರುವ ಕಟ್ಟಡವನ್ನು ಸಂಪೂರ್ಣವಾಗಿ ನೆಲಸಮಗೊಳಿಸಿ, 54 ಕೋಟಿ ರೂ. ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ನಿರ್ಧರಿಸಿ, ಭೂಮಿಪೂಜೆಯನ್ನೂ ನೆರವೇರಿಸಲಾಯಿತು.

ನಂತರ ಕಾಮಗಾರಿ ಗುತ್ತಿಗೆ ಪಡೆದ ಸ್ಟಾರ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ, ಮೊದಲಿಗೆ ಹಳೆಯ ಕಟ್ಟಡ ನೆಲಸಮಕ್ಕೆ ಮುಂದಾಗಿತ್ತು. ಅದಕ್ಕೆ ಪೂರ್ವಭಾವಿಯಾಗಿ ಇನ್ನೂ ಗಟ್ಟಿಮುಟ್ಟಾಗಿರುವ ಬಾಗಿಲು, ಕಿಟಕಿಗಳನ್ನು ತೆರವುಗೊಳಿಸುವ ಕೆಲಸವನ್ನು ಜ.27ರಿಂದ ಆರಂಭಿಸಲಾಗಿತ್ತು. ಆದರೆ ಜ.28ರಂದು ಸಂಜೆ ಆಡಿಯೋ–ವಿಶುವಲ್(ಎವಿ) ಹಾಲ್ ಆಗಿದ್ದ ಭಾಗದಲ್ಲಿ ಕಿಟಕಿಗಳನ್ನು ತೆರವುಗೊಳಿಸುವ ವೇಳೆ ಕಟ್ಟಡದ ಚಾವಣಿ ಕುಸಿದು, ತನ್ವೀರ್ ಸೇಠ್‌ನಗರದ ಸದ್ದಾಂ ಎಂಬಾತ ಅವಶೇಷಗಳಡಿ ಸಿಲುಕಿದ. ಆತನ ಜೊತೆಯಲ್ಲಿದ್ದ ಕಾರ್ಮಿಕರು ಅದೃಷ್ಟವಶಾತ್ ಜೀವಾಪಾಯದಿಂದ ಪಾರಾದರು. ಸಂಜೆ 5.30ರಿಂದ ನಿರಂತರ ಹುಡುಕಾಟ ನಡೆಸಿದರೂ ಸದ್ದಾಂ ಪತ್ತೆಯಾಗದ ಕಾರಣ ಹಿಟಾಚಿ ಮೂಲಕ ಕಾರ್ಯಾಚರಣೆ ನಡೆಸಲಾಗಿತ್ತು. ತಡರಾತ್ರಿ 1.45ರ ವೇಳೆಯಲ್ಲಿ ಸದ್ದಾಂ ಮೃತದೇಹ ಎರಡು ಭಾಗವಾಗಿ ಸಿಕ್ಕಿತು. ಮೃತ ಕಾರ್ಮಿಕನ ಕುಟುಂಬದವರು ನೀಡಿದ ದೂರಿನನ್ವಯ ಕಾಮಗಾರಿ ವೇಳೆ ಸುರಕ್ಷತಾ ಕ್ರಮ ವಹಿಸದ ಆರೋಪದಡಿ ಕಟ್ಟಡ ತೆರವು ಕೆಲಸ ವಹಿಸಿಕೊಂಡಿದ್ದ ಉಪಗುತ್ತಿಗೆದಾರ ದಿನೇಶ್ ಹಾಗೂ ಮೇಸ್ತ್ರಿ ಫೈರೋಜ್ ವಿರುದ್ಧ ಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಘಟನೆ ಸಂಬಂಧ ಪರಿಶೀಲನೆ ನಡೆಸಿ, ಕಾರಣಕರ್ತರ ವಿರುದ್ಧ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿಗಳೂ ತಿಳಿಸಿದ್ದರು.

ಈ ಎರಡೂ ದುರಂತಗಳನ್ನು ನೋಡಿರುವ ಕಾಲೇಜಿನ ಅಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಲ್ಲಿ ಆತಂಕವಂತೂ ಇದೆ. ಎರಡನೇ ಬಾರಿ ಕುಸಿತ ಸಂಭವಿಸಿ 15 ದಿನಗಳಾದರೂ ಕಟ್ಟಡ ನೆಲಸಮಗೊಳಿಸುವ ಕಾಮಗಾರಿ ವಿಳಂಬವಾಗಿರುವುದಕ್ಕೆ ಬೇಸರವೂ ಇದೆ. ಮತ್ತೆಲ್ಲಾದರೂ ಕುಸಿತವಾದರೆ ಆತಂಕ ಮತ್ತಷ್ಟು ಹೆಚ್ಚಾಗಲಿದೆ. ಆದ್ದರಿಂದ ಶೀಘ್ರ ಕಟ್ಟಡ ನೆಲಸಮಗೊಳಿಸಬೇಕಿದೆ.

ಕಾಮಗಾರಿ ಶೀಘ್ರ ಪುನಾರಂಭ

"ಕಟ್ಟಡ ನೆಲಸಮಗೊಳಿಸಲು ಹಳೆಯ ಬಾಗಿಲು, ಕಿಟಕಿಗಳನ್ನು ತೆರವುಗೊಳಿಸುತ್ತಿದ್ದಾಗ ದುರಂತ ಸಂಭವಿಸಿ, ಕಾರ್ಮಿಕರೊಬ್ಬರು ಮೃತಪಟ್ಟ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಳಿಸಲಾಗಿತ್ತು. ನೆಲಸಮಗೊಳಿಸುವ ಕಾಮಗಾರಿ ಆರಂಭಿಸುವ ಸಂಬಂಧ ಜಿಲ್ಲಾಧಿಕಾರಿಗಳು ಕೆಲ ದಿನಗಳಲ್ಲೇ ಆದೇಶ ನೀಡುವ ನಿರೀಕ್ಷೆಯಿದೆ. ಆ ಕೂಡಲೇ ಗುತ್ತಿಗೆದಾರರು ಕೆಲಸ ಶುರು ಮಾಡುತ್ತಾರೆ.



–ಕೆ.ಹರೀಶ್‌ಗೌಡ, ಶಾಸಕ ಚಾಮರಾಜ ಕ್ಷೇತ್ರ

ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಮೂಲಸೌಲಭ್ಯಕ್ಕೆ ಆಗ್ರಹಿಸಿ ಮೈಸೂರಲ್ಲಿ ಎಸ್‌ಯುಸಿಐ ಪ್ರತಿಭಟನೆ

ಬಾಣಂತಿಯರ ಸರಣಿ ಸಾವಿಗೆ ಆತಂಕ



ಬಾಣಂತಿಯರ ಸಾವಿನ ಪ್ರಕರಣ ತಡೆಗಟ್ಟಲು ಗುಣಮಟ್ಟದ ಔಷಧಿ ಖರೀದಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೋಷಿಯಲಿಸ್ಟ್ ಯೂನಿಟ್ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ) ಕಾರ್ಯಕರ್ತರು ಪುರಭವನ ಆವರಣದ ಡಾ.ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.11(ಎಂಟಿವೈ)– ರಾಜ್ಯದಲ್ಲಿ ನಡೆಯುತ್ತಿರುವ ಬಾಣಂತಿಯರ ಸರಣಿ ಸಾವು ಪ್ರಕರಣ ತಡೆಗಟ್ಟಲು ಕ್ರಮ ಕೈಗೊಳ್ಳುವುದು. ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಸೌಲಭ್ಯ ಕಲ್ಪಿಸಿ, ಬಡವರಿಗೆ ಉಚಿತ ಆರೋಗ್ಯ ಸೇವೆ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೋಷಿಯಲಿಸ್ಟ್ ಯೂನಿಟ್ ಸೆಂಟರ್ ಆಫ್ ಇಂಡಿಯಾ(ಎಸ್‌ಯುಸಿಐ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಮಂಗಳವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಎಸ್‌ಯುಸಿಐ ಕಾರ್ಯಕರ್ತರು ರಾಜ್ಯದಲ್ಲಿ ಬಾಣಂತಿಯರ ಸರಣಿ ಸಾವಿನ ಪ್ರಕರಣ ಮುಂದುವರೆಯುತ್ತಲೇ ಇದೆ. ಆಸ್ಪತ್ರೆಗಳಲ್ಲಿ ನುರಿತ ವೈದ್ಯರು ಹಾಗೂ ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿ ಕೊರತೆ, ಕಳಪೆ ಗುಣಮಟ್ಟದ ಔಷಧಿ ಖರೀದಿಸುತ್ತಿರುವುದರಿಂದ ಬಾಣಂತಿಯರ ಸಾವು ಸಂಭವಿಸುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರ 'ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಿ, ಜನಾರೋಗ್ಯ ಖಚಿತಪಡಿಸಬೇಕು' ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಜಿಲ್ಲಾಸ್ಪತ್ರೆಗಳಲ್ಲಿ ಬಾಣಂತಿಯರ ಸಾವು ಹೆಚ್ಚಾಗಿದೆ. ಮತ್ತೊಂದೆಡೆ ದೊಡ್ಡಾಸ್ಪತ್ರೆಗಳಲ್ಲಿ ಐಸಿಯು ಇಲ್ಲದೇ ರೋಗಿಗಳು ಸಾವನ್ನಪ್ಪುತ್ತಿದ್ದಾರೆ. ರಾಜ್ಯಾದ್ಯಂತ ಆಸ್ಪತ್ರೆಗಳಲ್ಲಿ ಮೂಲಸೌಲಭ್ಯಗಳಿಲ್ಲದೆ ರೋಗಿಗಳು ಪರದಾಡುತ್ತಿದ್ದಾರೆ. ಸ್ವತಂತ್ರ ಭಾರತದಲ್ಲಿ ಜನರ ಆರೋಗ್ಯ ಸೇವೆಯ ಜವಾಬ್ದಾರಿ ಸರ್ಕಾರದ್ದೇ ಆಗಿದ್ದು, ಇದು ಸಾಮಾಜಿಕ ಬದ್ಧತೆ ಆಗಿರಬೇಕು. ಬಹುತೇಕ ಸರ್ಕಾರಿ ಸಂಸ್ಥೆಗಳೇ ಜನರಿಗೆ ತಕ್ಕಮಟ್ಟಿಗೆ ಒಳ್ಳೆಯ ಚಿಕಿತ್ಸೆ ಒದಗಿಸುತ್ತಿದ್ದವು. ಆದರೆ 1990ರ ದಶಕದಲ್ಲಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳನ್ನು ಜಾರಿಗೆ ತಂದ ಬಳಿಕ ಖಾಸಗಿ ಉದ್ದಿಮೆಯಾಗಿ ಬದಲಾಗಿದೆ. ಇತ್ತೀಚಿನ ದಶಕಗಳಲ್ಲಿ ಇದು ಕಾರ್ಪೊರೇಟೀಕರಣಕ್ಕೆ ಒಳಗಾದ ಬಳಿಕ ಸಾರ್ವಜನಿಕ ಆರೋಗ್ಯ ಸೇವೆ ಸರ್ಕಾರದ ಅಸೀಮ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂದು ದೂರಿದರು.

ದೇಶದ ಜನತೆಗೆ ಒಳ್ಳೆಯ ದಿನಗಳನ್ನು ಕೊಡುತ್ತೇವೆಂದು ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಆಯುಷ್ಮಾನ್ ಭಾರತ ಯೋಜನೆ ಜಾರಿಗೆ ತಂದಿದೆ. ಆದರೆ, ಪ್ರತಿಯೊಂದು ಚಿಕಿತ್ಸೆ, ಪರೀಕ್ಷೆಗೆ ದರ ನಿಗದಿ ಮಾಡಲಾಗಿದೆ. ಆಯುಷ್ಮಾನ್ ಭಾರತ್ ಕಾರ್ಡ್, ಬಿಪಿಎಲ್ ಕಾರ್ಡ್ ಇರುವವರನ್ನು ಹೊರತುಪಡಿಸಿ ಇತರರು ಚಿಕಿತ್ಸೆಗೆ ಶುಲ್ಕ ಭರಿಸಬೇಕಾಗುತ್ತದೆ. ಬಡ ರೋಗಿಯೊಬ್ಬ ಬಿಪಿಎಲ್ ಕಾರ್ಡ್ ಹೊಂದಿಲ್ಲದಿದ್ದರೆ ದರ ಪಾವತಿಸಬೇಕು. ಇದರಿಂದ ಅಂತಿಮವಾಗಿ ಬಿಪಿಎಲ್ ಕಾರ್ಡ್ ಇಲ್ಲದವರೆಲ್ಲ ಖಾಸಗಿ ಆಸ್ಪತ್ರೇಗೆ ತಳ್ಳಿದಂತಾಗುತ್ತದೆ. ಹೀಗಾಗಿ ಸರ್ಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಿ ಬಡವರಿಗೆ ಗುಣಮಟ್ಟದ ಚಿಕಿತ್ಸೆ ಸಿಗುವಂತೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಯುಸಿಐ ಮುಖಂಡರಾದ ಬಿ.ರವಿ, ಸೀಮಾ, ಸಂಧ್ಯಾ ಇನ್ನಿತರರು ಪಾಲ್ಗೊಂಡಿದ್ದರು.

ಪ್ರತಿಭಟನಾಕಾರರ ಬೇಡಿಕೆಗಳು

ಮೈಸೂರಿನ ಜಿಲ್ಲಾ ಆಸ್ಪತ್ರೆ, ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಎಸ್‌ಎಂಟಿ ಆಸ್ಪತ್ರೆ, ತಾಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರು ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಬೇಕು. ಸರ್ಕಾರಿ ಆಸ್ಪತ್ರೆಗಳಿಗೆ ಗುಣಮಟ್ಟದ ಔಷಧಿಗಳನ್ನು ಪೂರೈಕೆ ಮಾಡಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಗುಣಮಟ್ಟದ ಉಚಿತ ಚಿಕಿತ್ಸೆ ನೀಡಬೇಕು. ಆರೋಗ್ಯ ಕ್ಷೇತ್ರಕ್ಕೆ ಕೇಂದ್ರ ಮತ್ತು ರಾಜ್ಯ ಬಜೆಟ್ ಹೆಚ್ಚಿಸಬೇಕು. ಆರೋಗ್ಯ ಇಲಾಖೆಯ ಭ್ರಷ್ಟಾಚಾರ, ದುಂದುವೆಚ್ಚಗಳಿಗೆ ಕಡಿವಾಣ ಹಾಕಬೇಕು. ಹೊಸ ತಾಲೂಕುಗಳಾದ ಸರಗೂರು, ಸಾಲಿಗ್ರಾಮಗಳಲ್ಲಿ ತಾಲೂಕು ಆಸ್ಪತ್ರೆ ನಿರ್ಮಿಸಿ, ವರುಣ, ತಗಡೂರು ಸಮುದಾಯ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಕಾಡಂಚಿನ ಪ್ರದೇಶಗಳಿಗೆ ಸಂಚಾರಿ ಆಸ್ಪತ್ರೆ ಕಲ್ಪಿಸಿ, ಆರೋಗ್ಯ ಸಂಸ್ಥೆಗಳನ್ನು ಮೇಲ್ದರ್ಜೆಗೆ ಏರಿಸಬೇಕು. ರಾಜ್ಯದಲ್ಲಿ ಬಾಣಂತಿಯರ ಸಾವಿಗೆ ಕಾರಣರಾದವರಿಗೆ ಕಠಿಣ ಶಿಕ್ಷೆ ನೀಡಬೇಕು.

ಜೆಇಇ–ಮೇನ್: ಕರ್ನಾಟಕದ ಒಬ್ಬರು ಸೇರಿ 14 ಅಭ್ಯರ್ಥಿಗಳಿಗೆ 100ಕ್ಕೆ 100 ಅಂಕ

ನವದೆಹಲಿ: ಮೊದಲ ಆವೃತ್ತಿಯಲ್ಲಿ ನಡೆದ ಜೆಇಇ ಮೇನ್ಸ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ದೇಶಾದ್ಯಂತ 14 ಅಭ್ಯರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್‌ಟಿಎ) ಮಂಗಳವಾರ ಹೇಳಿದೆ.

ನೂರು ಅಂಕ ಪಡೆದವರಲ್ಲಿ ಐವರು ರಾಜಸ್ತಾನದವರು, ಇಬ್ಬರು ದೆಹಲಿ ಮತ್ತು ಉತ್ತರಪ್ರದೇಶದವರು, ಕರ್ನಾಟಕ, ಆಂಧ್ರಪ್ರದೇಶ, ಗುಜರಾತ್, ತೆಲಂಗಾಣ, ಮಹಾರಾಷ್ಟ್ರಗಳ ತಲಾ ಒಬ್ಬರು ಇದ್ದಾರೆ. 14 ಅಭ್ಯರ್ಥಿಗಳಲ್ಲಿ 12 ಮಂದಿ ಸಾಮಾನ್ಯ ವರ್ಗದವರಾಗಿದ್ದು, ಉಳಿದ ಇಬ್ಬರು ಒಬಿಸಿ ಮತ್ತು ಎಸ್‌ಸಿ ವರ್ಗದವರಾಗಿದ್ದಾರೆ. ಮೊದಲ ಆವೃತ್ತಿಯಲ್ಲಿ 12.58 ಲಕ್ಷ ಅಭ್ಯರ್ಥಿಗಳು ಪರೀಕ್ಷೆಯನ್ನು ಎದುರಿಸಿದರು. ಪರೀಕ್ಷೆಯನ್ನು ಅಸ್ಸಾಮಿ, ಬೆಂಗಾಳಿ, ಇಂಗ್ಲಿಷ್, ಗುಜರಾತಿ, ಹಿಂದಿ, ಕನ್ನಡ, ಮಲಯಾಳಂ, ಮರಾಠಿ, ತೆಲುಗು, ತಮಿಳು, ಉರ್ದು ಸೇರಿ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು.

ಭಾರತ ಹೊರತುಪಡಿಸಿ ದೋಹ, ದುಬೈ, ಕಠ್ಮಂಡು, ರಿಯಾದ್, ಅಬುಧಾಬಿ, ವಾಷಿಂಗ್ಟನ್ ಸೇರಿ 15 ವಿದೇಶಿ ನಗರಗಳಲ್ಲಿ ನಡೆಸಲಾಗಿತ್ತು.

ಮೊದಲ ಆವೃತ್ತಿಯ ಪರೀಕ್ಷೆ ಜನವರಿ–ಫೆಬ್ರವರಿಯಲ್ಲಿ ನಡೆದಿದೆ. ಎರಡನೇ ಆವೃತ್ತಿ ಏಪ್ರಿಲ್‌ನಲ್ಲಿ ನಿಗದಿಯಾಗಿದೆ. ಎರಡೂ ಆವೃತ್ತಿಗಳ ಪರೀಕ್ಷೆ ಮುಗಿದ ಬಳಿಕ ರ‍್ಯಾಂಕಿಂಗ್ ಅನ್ನು ಎನ್‌ಟಿಎ ಘೋಷಿಸಲಿದೆ.

ಏರೋ ಇಂಡಿಯಾ 2025: 'ಇಟ್ ಹ್ಯಾಪನ್ಸ್ ಓನ್ಲಿ ಇನ್ ಇಂಡಿಯಾ'

ಏರ್‌ಶೋನಲ್ಲಿ ಪರಸ್ಪರ ಎದುರಾದ ಅಮೆರಿಕ, ರಷ್ಯಾ ಯುದ್ಧ ವಿಮಾನಗಳು



ಬೆಂಗಳೂರು, ಫೆ.11– ರಾಜಧಾನಿ ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಏಷ್ಯಾದ ಅತಿ ದೊಡ್ಡ ವಾಯು ಪ್ರದರ್ಶನ, ಏರೋ ಇಂಡಿಯಾ 2025ಕ್ಕೆ ಅದ್ದೂರಿ ಚಾಲನೆ ದೊರೆತಿದೆ. ಈ ಮಧ್ಯೆ ಏರೋ ಇಂಡಿಯಾದಲ್ಲಿ ಅಮೆರಿಕನ್ ಮತ್ತು ರಷ್ಯನ್ ಸ್ಟೆಲ್ತ್ ಫೈಟರ್‌ಗಳು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದು, ವೀಕ್ಷಕರ ಗಮನ ಸೆಳೆಯುತ್ತಿದೆ.

ರಷ್ಯಾದ Su–57 ಐದನೇ ತಲೆಮಾರಿನ ಫೈಟರ್ ಜೆಟ್ ಮತ್ತು ಅಮೆರಿಕದ ಅತ್ಯಾಧುನಿಕ ಐದನೇ ತಲೆಮಾರಿನ ಫೈಟರ್ ಎಂದು ಪರಿಗಣಿಸಲಾದ F–35 ಲೈಟ್ನಿಂಗ್ II ಯುದ್ಧ ವಿಮಾನಗಳು ಏರೋ ಇಂಡಿಯಾ 2025ರ ವೈಮಾನಿಕ ಪ್ರದರ್ಶನದಲ್ಲಿ ಭಾಗವಹಿಸಿವೆ. ಇದು ಜಾಗತಿಕ ರಕ್ಷಣಾ ಸಹಯೋಗದಲ್ಲಿ ಒಂದು ಮಹತ್ವದ ಮೈಲಿಗಲ್ಲು ಎಂದು ಪರಿಗಣಿಸಲಾಗಿದೆ.

ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಟ್ವೀಟ್ ಮಾಡಿರುವ ಮಾಜಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, 'ಜಾಗತಿಕ ಪ್ರತಿಸ್ಪರ್ಧಿ ದೇಶಗಳಾದ ಅಮೆರಿಕ ಮತ್ತು ರಷ್ಯಾದ ಯುದ್ಧ ವಿಮಾನಗಳು ಒಂದೇ ವೇದಿಕೆಯಲ್ಲಿ ಕಾಣಸಿಗುವುದು ಭಾರತದಲ್ಲಿ ಮಾತ್ರ ಸಾಧ್ಯ' ಎಂದು ಹೇಳಿದ್ದಾರೆ.

Su–57 ಮತ್ತು F–35 ಯುದ್ಧ ವಿಮಾನಗಳು ನಾಲ್ಕು ದಿನಗಳ ಕಾಲ ದೈನಂದಿನ ವೈಮಾನಿಕ ಪ್ರದರ್ಶನದಲ್ಲಿ ಭಾಗವಹಿಸಲಿವೆ. ಯಲಹಂಕ ವಾಯುನೆಲೆಯಲ್ಲಿ Su–57 'ಫೆಲಾನ್' ಟೇಕ್ ಆಫ್ ಆಗುತ್ತಿರುವ ವಿಡಿಯೋ ಈಗ ವೈರಲ್ ಆಗಿದೆ.

ಇನ್ನು ಅಮೆರಿಕ ಮತ್ತು ರಷ್ಯಾದ ಫೈಟರ್ ಜೆಟ್‌ಗಳ ಸಿಬ್ಬಂದಿ ಪರಸ್ಪರರನ್ನು ನೋಡುತ್ತಾ, ಪರಸ್ಪರರ ವಿಮಾನಗಳ ಚಿತ್ರಗಳನ್ನು ಕ್ಲಿಕ್ ಮಾಡುತ್ತಿರುವ ದೃಶ್ಯಗಳೂ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದೆ. ಇನ್ನು ಏರೋ ಇಂಡಿಯಾ 2025ರಲ್ಲಿ ಅಮೆರಿಕದ B-1B ಲ್ಯಾನ್ಸರ್, ಸೂಪರ್‌ಸಾನಿಕ್ ಕಾರ್ಯತಂತ್ರದ ಬಾಂಬರ್ ಯುದ್ಧ ವಿಮಾನಗಳೂ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲಿವೆ.

ಇದೇ ಮೊದಲ ಬಾರಿಗೆ, ಅಡ್ವಾನ್ಸ್ಡ್ ಮೀಡಿಯಂ ಕಾಂಬ್ಯಾಟ್ ಏರ್‌ಕ್ರಾಫ್ಟ್‌ನ 1:1 ಸ್ಕೇಲ್ ಮಾದರಿಯನ್ನು ವಾಯು ಪ್ರದರ್ಶನದ ಇಂಡಿಯಾ ಪೆವಿಲಿಯನ್‌ನಲ್ಲಿ ಪ್ರದರ್ಶಿಸಲಾ ಗುತ್ತಿದೆ. LCA ತೇಜಸ್ ಫೈಟರ್ ಜೆಟ್ ಅನ್ನು ನಿರ್ಮಿಸಿರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್‌ಎಎಲ್), AMCA ಅನ್ನು ಅಭಿವೃದ್ಧಿಪಡಿಸಲಿದೆ. AMCA ಒಂದೇ ಆಸನದ, ಟ್ವಿನ್–ಎಂಜಿನ್ ಸಾಮರ್ಥ್ಯದ ಐದನೇ ತಲೆಮಾರಿನ ಫೈಟರ್ ಜೆಟ್ ಆಗಿರಲಿದೆ.

ಅದೇ ರೀತಿ ಹೆಚ್‌ಎಎಲ್ HAL LCA ತೇಜಸ್ ಮಾರ್ಕ್ 2 ಅನ್ನು ಕೂಡ ಅಭಿವೃದ್ಧಿಪಡಿಸಿದ್ದು, ಕಳೆದ ವರ್ಷದ ಮಾರ್ಚ್‌ನಲ್ಲಿ ಭದ್ರತಾ ಸಂಪುಟ ಸಮಿತಿ AMCA ಅನ್ನು ವಿನ್ಯಾಸಗೊಳಿಸಲು ಮತ್ತು ಅಭಿವೃದ್ಧಿಪಡಿಸುವ ಯೋಜನೆಗೆ ಅನುಮೋದನೆ ನೀಡಿದೆ. ವಿಮಾನದ ಸಾಮೂಹಿಕ ಉತ್ಪಾದನೆ 2035ರ ವೇಳೆಗೆ ಪ್ರಾರಂಭವಾಗುವ ನಿರೀಕ್ಷೆಯಿದೆ. ನಿನ್ನೆ(ಫೆ.9–ಭಾನುವಾರ) ಭಾರತೀಯ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎಪಿ ಸಿಂಗ್ ಮತ್ತು ಭಾರತೀಯ ಭೂಸೇನಾ ಮುಖ್ಯಸ್ಥ, ಜನರಲ್ ಉಪೇಂದ್ರ ದ್ವಿವೇದಿ ಅವರು, ತೇಜಸ್ ಫೈಟರ್ ಜೆಟ್‌ನಲ್ಲಿ ಹಾರಾಟ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡಾಕು ಮಹಾರಾಜ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಂಡೇಲ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ತಲ್ವಾರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾಕು ಮಹಾರಾಜ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ರಾ.7.05ಕ್ಕೆ, ವಿದ್ದಾಮುಯರ್ಚಿ (ತ): ರಾ.10ಕ್ಕೆ.
ಸ್ಕ್ರೀನ್ 3	ಭೂ ಮಂತರ್ (ಕ): ಬೆ.10.45ಕ್ಕೆ, ರಾ.7.15ಕ್ಕೆ, ಕಾಡು ಮಲ್ಲೆ (ಕ): ಮ.1.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ಪೊನ್ಮನ್ (ಮ): ರಾ.10.15.
ಸ್ಕ್ರೀನ್ 4	ಮ್ಯಾಕ್ಸ್ (ಕ): ಮ.1ಕ್ಕೆ, ದೇವ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್ INOX LIVE THE MOVIE ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್ ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸ್

14ನೇ ದಿನ, ಬುಧವಾರ, 12–2–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಟೂಟಿಕೊರಿನ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಅಂಕುಶ್ 2. ವಾರಿಯರ್ ವುಮೆನ್ 3. ದಿ ಏಂಜಲ್ ಪವರ್

II. ನೀಲಗಿರೀಸ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಜಸ್ಟ್ ಬ್ಲೂಸ್ 2. ಓರ್ಲಿ 3. ಪೆಲಿಸಿಟ

III ವಿಧಾತ್ರಿ ಮೋಟರ್ಸ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಮ.2.30ಕ್ಕೆ
1 ಮ್ಯಾಜಿಕ್ ಸರ್ಕಲ್ 2 ಇಗ್ನೊರೆನ್ಸ್ ಈಸ್ ಬ್ಲಿಸ್ 3. ಟು ಹಾಟ್ ಟು ಟಚ್

IV. ಚಾಮುಂಡಿ ಘಾಟ್ ಪ್ಲೇಟ್ ಡಿII–1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಮೂನ್‌ಲೈಟ್ ಸ್ಪೀಡ್ 2. ಕೋಡ್ ಆಫ್ ಹಾನರ್ 3. ಗೋಲ್ಡನ್ ಬರ್ಡ್

V. ವಿಧಾತ್ರಿ ಮೋಟರ್ಸ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ವರದಾನ್ 2. ಮಿಸ್ಟಿಕ್ ಡಿವೈನ್ 3. ಸ್ಕೈರ್ ಕಟ್

VI. ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್ –1400 ಮೀ. 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಎಟರ್‌ನಲ್ ಗ್ಲೋರಿ 2. ಆಶೀರ್ವಾದ್ 3. ಮೈಸೂರ್ ಪಾರೊ

VII. ಯಮುನ ಪ್ಲೇಟ್–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಎಕ್ಸ್‌ಯುಬರೆನ್ಸ್ 2. ಕಾಂಟ್ರಿಬ್ಯೂಟರ್ 3. ಹಿರೋಯಿಸಮ್

VIII. ಚಾಮುಂಡಿ ಘಾಟ್ ಪ್ಲೇಟ್ ಡಿI–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಡಾಲಿಸ್ ಗೋಲ್ಡ್ 2. ಡೇವಿಡ್ಸ್ ಡಿಲೈಟ್ 3. ಇಂಪ್ಲಸ್

ದಿನದ ಅತ್ಯುತ್ತಮ	ಡಾಲಿಸ್ ಗೋಲ್ಡ್
ಡಬ್ಬಲ್	ವರದಾನ್, ಎಟರ್‌ನಲ್ ಗ್ಲೋರಿ
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4, ಮತ್ತು 5
III ಟ್ರಿಬಲ್	6, 7, ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜೆಸಿ

ಮುಂದಿನ ಎಐ ಆಕ್ಷನ್ ಶೃಂಗಕ್ಕೆ ಭಾರತ ಆತಿಥ್ಯ

ಪ್ಯಾರಿಸ್: ಮುಂದಿನ ಕೃತಕ ಬುದ್ಧಿಮತ್ತೆ (ಎಐ) ಬಗೆಗಿನ ಶೃಂಗ ಭಾರತದಲ್ಲಿ ನಡೆಯಲಿದೆ ಎಂದು ಫ್ರಾನ್ಸ್ ಅಧ್ಯಕ್ಷರ ಕಚೇರಿ ತಿಳಿಸಿದೆ. ಈ ನಿರ್ಧಾರಕ್ಕೆ ಒಪ್ಪಿಗೆ ಸೂಚಿಸಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ, ಮುಂದಿನ ಎಐ ಶೃಂಗದ ಆತಿಥ್ಯವನ್ನು ಭಾರತ ವಹಿಸಲಿದೆ ಎನ್ನುವುದಕ್ಕೆ ಸಂತೋಷವಾಗುತ್ತಿದೆ ಎಂದು ಹೇಳಿದ್ದಾರೆ. ಫ್ರಾನ್ಸ್‌ನಲ್ಲಿ ಈ ಬಾರಿ ಮೊದಲ ಎಐ ಆಕ್ಷನ್ ಶೃಂಗ ನಡೆದಿದೆ. ಇದಕ್ಕೆ ಮೋದಿ, ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯಲ್ ಮ್ಯಾಕ್ರನ್ ಅವರನ್ನು ಅಭಿನಂದಿಸಿದರು.


ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು
ಅರಣ್ಯ ವಸತಿಗೃಹಗಳು ಹಾಗೂ ವಿಹಾರ ಧಾಮಗಳ ಸಂಸ್ಥೆಯ ಅಧ್ಯಕ್ಷರಾದ
ಶ್ರೀಯುತ
ಅನಿಲ್ ಚಿಕ್ಕಮಾದು
ರವರಿಗೆ
36 ನೇ
ಜನ್ಮದಿನದ
ಶುಭಾಶಯಗಳು
ಶ್ರೀ ಹೆಚ್.ಎನ್. ಸತೀಶ್ ಗೌಡ್ರು
ಕಾಂಗ್ರೆಸ್ ಮುಖಂಡರು